ಬೆಲೆ ಎರಡು ಆಣೆ

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೨—೨—೧೯೪೮ — [ಸಂಚಿಕೆ ೪೧] —

ಉದ್ದಿಮೆದಾರರು ಬೀಸುವ ಉತ್ಪಾದನದ ಜಾಲ!

ಉದ್ದಿಮೆದಾರರ ಸ್ವಾರ್ಥ— ವ್ಯಾಪಾರ ಧೋರಣದ ಚಾಣಕ್ಯ ನೀತಿ— ವಿಜ್ಞಾನದ ದುರುಪಯೋಗ— ಶ್ರಮದ ಉಳಿಕೆಯ ಯೋಜನೆ ನಿರುದ್ಯೋಗ ಸಾದನ—

ದೇಶೋದ್ಧಾರದ ಹೆಸರಿನಲ್ಲಿ ಉಳ್ಳವರು ತಮ್ಮ ಕೋಶೋದ್ಧಾರ ಮಾಡಿಕೊಳ್ಳಲೆಂದು ನಾನಾ ನೀತಿಗಳನ್ನು ಆಕರ್ಷಣೀಯವಾಗಿ ಜನತೆಯ ಮುಂದಿಡುತ್ತಿರುವುದು ಕಂಡು ಬರುತ್ತಿದೆ. ಉತ್ಪಾದನೆ ಹೆಚ್ಚಿಸಲು ನಾಡಬಂಟರೆಂದು ಕರೆದುಕೊಂಡು ಉಪಾಯಾಂತರಗಳನ್ನು ಸಕ್ಕರೆ ಹಚ್ಚಿ ಮುಗ್ಧ ಜನತೆಗೊಪ್ಪಿಸಿ, ತನ್ಮೂಲಕ ಕುಬೇರ ಕುಚೇಲ ವರ್ಗದ್ವಯವನ್ನು ನಿರ್ಮಾಣ ಮಾಡಲು, ವೈಜ್ಞಾನಿಕ ಸಾಧನಗಳಾದ ಗಿರಣಿ ಕಾರಖಾನೆ ಮುಂತಾದವುಗಳಿಂದ ರೊಕ್ಕ ಸುಲಿವ ಚೈನೀ ಸಾಮಾನುಗಳನ್ನು ತಯಾರಿಸಿ ದೊಡ್ಡ ಉದ್ದಿಮೆದಾರರಿಂದು ನಿರ್ಯಾತ ಮಾಡ ಹೊರಟು, ಬಹುಸಂಖ್ಯಾಕ ಹಿಂದೀ ಬಡವರನ್ನು ವಿನಾಶೋನ್ಮುಖರನ್ನಾಗಿ ಮಾಡುತ್ತಿರುವರೆಂದು ಶ್ರೀ. ಜೆ. ಸಿ. ಕುಮಾರಪ್ಪನವರು ಜನತೆಗೆ ಈ ಕೆಳಗಿನಂತೆ ಘಂಟಾಘೋಷವಾಗಿ ಮುನ್ನೆಚ್ಚರಿಕೆ ಕೊಡುತ್ತಾರೆ.

'ಉತ್ಪಾದನೆಯನ್ನು ಹೆಚ್ಚಿಸಬೇಕು ಮತ್ತು ಸಾಮಾನ್ಯ ಜನತೆಯ ಜೀವನ ಮಟ್ಟವನ್ನು ಏರಿಸಬೇಕು' ಎಂಬ ಮಾತುಗಳು ಬಹಳ ಕೇಳಿಬರುತ್ತವೆ. ಬೇಕಾದಾಗಲೆಲ್ಲ ಈ ಎರಡು ಮಾತುಗಳನ್ನು ಎಲ್ಲರೂ ಪರಸ್ಪರ ಆಡಿಕೊಳ್ಳುತ್ತಾರೆ. ಆದರೆ ಈ ಮಾತುಗಳ ಅರ್ಥವೇನೆಂಬುದನ್ನು ಯಾರೂ ಸರಿಯಾಗಿ ನಿರ್ದೇಶಿಸಿಲ್ಲ. ಅಲಸರೂ ಅವಿಚಾರಿಗಳೂ ಆದ ಸಾರ್ವಜನಿಕರಿಗೆ ಸಮಾಧಾನ ಮಾಡಲು ಇವು ತಕ್ಕ ಕೂಗುಗಳು. ಅವರು ಸಾಮಾನ್ಯವಾಗಿ ಬಹಳ ಮಾತಾಡಿಬಿಟ್ಟರೆ ಅದೇ ನಿಜವೆಂದು ನಂಬಿ ಬಿಡುತ್ತಾರೆ.

ಜನರೆಲ್ಲ ಹಸಿವಿನಿಂದ ಬಾಯಿ ಬಾಯಿ ಬಿಡುತ್ತಿರುವ ಮತ್ತು ಬಟ್ಟೆಯಿಲ್ಲದೆ ನರಳುತ್ತಿರುವ ನಾಡಾದ ಭಾರತದಲ್ಲಿ ಈ ಮಾತುಗಳಿಗೆ ಕಡೆಯ ಪಕ್ಷ ಜೀವನಕ್ಕೆ ಅನಿವಾರ್ಯವೆನಿಸುವ ವಸ್ತುಗಳೆನಿಸಿದ ಅನ್ನ ವಸ್ತ್ರಗಳನ್ನಾದರೂ ಒದಗಿಸಬೇಕು ಎಂದು ಅರ್ಥವಾಗುತ್ತದೆ. ಒಂದು ಊಟ ಸಹ ಸಿಗದ ಈ ಕಾಲದಲ್ಲಿ ದಿನಕ್ಕೆ ೨ ಊಟಗಳನ್ನು ಒದಗಿಸುವುದರತ್ತ ನಮ್ಮ ಪ್ರಯತ್ನ ಸಾಗಬೇಕು. ಮತ್ತು ನಮ್ಮ ಜನರ ಸೌಂದರ್ಯ ದೃಷ್ಟಿಯನ್ನು ತೃಪ್ತಿಪಡಿಸಲಾಗದಿದ್ದರೂ ಅವರಿಗೆ ಹವೆಯಿಂದ ರಕ್ಷಿಸಿಕೊಳ್ಳುವಷ್ಟರ ಮಟ್ಟಿಗಾದರೂ ಬಟ್ಟೆಯನ್ನು ಒದಗಿಸಲು ನಾವು ಪ್ರಯತ್ನಿಸಬೇಕು.

ಸ್ವಾರ್ಥಿಗಳಾದ ಉದ್ದಿಮೆದಾರರು

ಜನರ ಅವಶ್ಯಕತೆಯನ್ನು ಪೂರಯಿಸುವುದಕ್ಕಿಂತ ತಮ್ಮ ಉದ್ದಿಮೆಗಳನ್ನು ಬೆಳೆಸುವುದರಲ್ಲಿಯೇ ಉದ್ದಿಮೆದಾರರು ಇಂದು ಆಸಕ್ತರಾಗಿರುವಂತೆ ತೋರುತ್ತದೆ. ಏಕೆಂದರೆ, ಚಿರಸ್ಥಾಯಿಯಾಗಿ ಭಾರತವು ತನ್ನ ಉದ್ದಿಮೆಗಳನ್ನು ನೆಲೆನಿಲ್ಲಿಸಬೇಕಾದರೆ ಒಳನಾಡಿನಲ್ಲಿ ಕೆಲಕಾಲ ಬಹಳ ತೊಂದರೆಯಾದರೂ ಅದನ್ನು ಸಹಿಸಿಕೊಂಡು ಹೊರನಾಡಿಗೆ ನಿರ್ಯಾತವನ್ನು ಪ್ರಾರಂಭಿಸಬೇಕೆಂದು ಹೇಳುತ್ತಾರೆ. ಅಲ್ಲದೆ, ಭಾರತೀಯ ಕೈಗಾರಿಕೆ ಮತ್ತು ಉದ್ದಿಮೆಗಳ ಉತ್ಪಾದನೆಯನ್ನು ಹೊರಗೆ ಕಳುಹಿದ ಹೊರತು ಇಲ್ಲಿಯ ಔದ್ಯೋಗಿಕ ಬೆಳವಣಿಗೆಯನ್ನು ದೃಢವಾಗಿ ನೆಲೆಗೊಳಿಸಲು ಸಾಧ್ಯವಿಲ್ಲವೆಂದು ತಮ್ಮ ಖಚಿತಾಭಿಪ್ರಾಯವಿದೆಯೆನ್ನುತ್ತಾರೆ. ಹೀಗೆ ಸರಕಾರವು ನಿರ್ಯಾತ ಧೋರಣ ವಹಿಸಬೇಕೆಂದು ಸಾರುತ್ತಾರೆ.

'ದೋಸೆಯು ನೀನು ತಿಂದಷ್ಟೂ ದೊಡ್ಡದಾಗುತ್ತದೆ' ಎಂಬ ಲಾರ್ಡ ಕೆನೀಸನ ಉತ್ಪಾದನ ಧೋರಣದ ತತ್ವಗಳ ಆಧಾರದ ಮೇಲೆ ಸರಕಾರವು ತನ್ನ ಔದ್ಯೋಗಿಕ ಯೋಜನೆಯನ್ನು ನಿಲ್ಲಿಸಬೇಕೆಂದು ಉದ್ದಿಮೆದಾರರು ಸಲಹೆ ಮಾಡುತ್ತಾರೆ. ಹಣ ಸ್ವಾತಂತ್ರ್ಯ ಸ್ವಾತಂತ್ರ್ಯದ ಸಾಮಾಜಿಕ ಉದ್ದೇಶಗಳು ಈ ಧೋರಣದಿಂದಮಾತ್ರ ಸಫಲವಾಗುವುವೆಂದು ಅವರು ನಂಬಿರುವುದಾಗಿ ಹೇಳುತ್ತಾರೆ. ಸಾಮಾನ್ಯ ಮನುಷ್ಯರ ಬುದ್ಧಿಗೆ 'ತಿಂದಷ್ಟೂ ದೋಸೆ ದೊಡ್ಡದಾಗುತ್ತದೆ' ಎಂಬುದು ಎಷ್ಟು ಹಾಸ್ಯಾಸ್ಪದವಾಗಿ ತೋರಿದರೂ ಈ ದೋಸೆಗಳನ್ನು ತಿನ್ನುವ (ಆದರೆ ತಮ್ಮದಲ್ಲ, ಇನ್ನೊಬ್ಬರದು) ದೇವಮಾನವರ ನೀತಿಯನ್ನು [illegible] ತಿಳಿದುಕೊಂಡರೆ, ದುರುಪಯೋಗಪಡಿಸಿಕೊಳ್ಳಹೋದರೆ ಅನರ್ಥವು ಕಟ್ಟಿಟ್ಟದ್ದೆಂಬುದನ್ನು ಮಾತ್ರ ನಾವಿಲ್ಲಿ ಒತ್ತಿ ಹೇಳದಿರಲಾರೆವು. ಪ್ರತಿಯೊಳೆಯುವ ಮಾತು ಸ್ತ್ರೀ ಪ್ರಪಂಚಕ್ಕೆ ಸದಾ ದಾರಿದೋರುವ ಧ್ರುವತಾರೆಯಾಗಿದೆ!

'ಇನ್ನೊಬ್ಬರ ದೋಸೆಯಿಂದ ಕಚ್ಚಿ ತೆಗೆಯುವುದು ಅದು ಅವರ (ಉದ್ದಿಮೆದಾರರ) ದೋಸೆ ದೊಡ್ಡದಾಗಿ ಬೆಳೆಯುವಂತೆ ಮಾಡುತ್ತದೆ!

ವಿಜ್ಞಾನದ ದುರುಪಯೋಗ

ಇಂದಿನ ಮಾದರಿಯ ದೊಡ್ಡ ಪ್ರಮಾಣದ ಉದ್ದಿಮೆಗಳಲ್ಲಿ ಕೈಕೊಂಡ ಕ್ರಮವು ಎಲ್ಲ ರೀತಿಯಿಂದಲೂ ಯೋಗ್ಯವಿದೆ, ಆದರೆ ಪ್ರಾಗತಿಕವಾಗಿ ಮಾತ್ರ ಇಲ್ಲ. ಅವರು (ಉದ್ದಿಮೆದಾರರು) ವಿಜ್ಞಾನವನ್ನು ವಿನಾಶಕ್ಕಾಗಿ ಬಳಸುತ್ತಿರುವರಲ್ಲದೆ ರಚನೆಗಾಗಿ ಅಲ್ಲ. ಅದು ಹೀಗಿರುವಾಗ, ಉತ್ಪಾದನೆಯನ್ನು ಹೇಗೆ ಹೆಚ್ಚಿಸಬೇಕೆಂಬ ಪ್ರಶ್ನೆಯನ್ನು ಪರಿಶೀಲಿಸುವುದು ಯುಕ್ತವಾಗಿದೆ. ಅಕ್ಕಿಯ ಗಿರಣಿಗಳಿಂದ ನಾವು ಅಹಿತಕರವಾದ ಬೆಳ್ಳಕ್ಕಿ (Polished Rice)ಯನ್ನು ಉತ್ಪಾದಿಸುತ್ತಿರುವಾಗ ಅದನ್ನು ಉತ್ಪಾದನವೆಂದು ಕರೆಯಲಾದೀತೆ? ಅದು ಒಕ್ಕಲಿಗ ಬೆಳೆದ ಭತ್ತದ ಪುಷ್ಟಿವಳಿಯ ನಾಶವಲ್ಲವೇನು? ಇದೇ ಪ್ರಕಾರ ಸಕ್ಕರೆ ಕಾರಖಾನೆಗಳು ಬಿಳಿಯ ಸಕ್ಕರೆಯನ್ನು ಕಬ್ಬಿನ ಹಾಲಿಂದ ತಯಾರಿಸುತ್ತಿರುವಾಗ, ಆ ಮೂಲಕ ಸ್ನಾಯುಪೌಷ್ಟಿಕ ಪದಾರ್ಥವನ್ನು ಉತ್ಪಾದಿಸುತ್ತಿರುವಾಗ ಮತ್ತು ಹಾಗೆ ಪುಷ್ಟಿಕರವಾದ ಕಬ್ಬಿನ ಹಾಲನ್ನು ನಿಃಸತ್ವಗೊಳಿಸುತ್ತಿರುವಾಗ ನಾವು ಉತ್ಪಾದನೆಯನ್ನು ಹೆಚ್ಚುಮಾಡ್ಡುವುದೆಂಬ ಮಾತನ್ನು ಹೇಗೆ ಸರಿಯಾಗಿ ಬಳಸುತ್ತಿರುವೆವು? ಇದು ಕೂಡ ಪ್ರಕೃತಿ ಮಾತೆ ಕೊಟ್ಟ ವರವನ್ನು ದುರುಪಯೋಗಪಡಿಸಿಕೊಳ್ಳುವುದೇ ಅಲ್ಲವೆ? ಕೇವಲ ಪರಿಮಾಣತಃ ಅಲ್ಲದೆ ಯೋಗ್ಯತೆಯ ಪ್ರಕಾರವೂ ಮನುಷ್ಯ ಪ್ರಯತ್ನವು ಉತ್ಪಾದನೆಯನ್ನು ಹೆಚ್ಚು ಮಾಡಿದರೆ ಮಾತ್ರ ಪ್ರಾಕೃತಿಕ ವಸ್ತುಗಳಲ್ಲಿ ನಿಜವಾದ ಉತ್ಪಾದನ ವೃದ್ಧಿಯುಂಟಾದೀತು. ತನ್ನ ಸ್ವಪ್ರಯತ್ನದಿಂದ ಒಕ್ಕಲಿಗನು ಒಂದು ಬೀಜ ಬಿತ್ತಿ ನೂರನ್ನು ಬೆಳೆದರೆ ಆಗ ಅವನು ಪುಷ್ಟಿವಳಿ ಹೆಚ್ಚಿಸಿದನೆಂದು ನಾವು ಹೇಳಿದರೆ ಸಮರ್ಥನೀಯವಾದೀತು [illegible] ಗಿರಣಿ ಒಡೆಯ[illegible]ಲಾಗದೆ.

ವಿಜ್ಞಾನ, ಸಾಹಿತ್ಯ ಮತ್ತು ಕಲೆಗಳಲ್ಲಿ ವರ್ಷದಲ್ಲಿ ಅತ್ಯುತ್ತಮವೆನಿಸುವ ಕೃತಿಗಳಿಗೆ ರಶಿಯದಲ್ಲಿ "ಸ್ಟಾಲಿನ್ ಬಹುಮಾನ"ಗಳನ್ನು ಕೊಡಲಾಗುತ್ತದೆ. ಕಲೆಗಳಲ್ಲಿ ಸಿನೆಮಾ ಒಂದು. ಆ ಸಿನೆಮಾ ಕೃತಿಗಳಲ್ಲಿ "The Flower of Stone ಕುಸುಮ" ಎಂಬುದಕ್ಕೆ ಕಳೆದ ವರ್ಷದ

ಬೆಳೆಗಳ ಬೇರ್ಪಾಟು

ಬಿಹಾರ ಮತ್ತು ಸಂಯುಕ್ತ ಪ್ರಾಂತಗಳ ಬಹು ಭಾಗಗಳಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕಬ್ಬಿನ ಬೆಳೆಗಾಗಿ ಬಳಸಲಾಗಿದೆ. ಮೊದಲು ಇವು ಬಂಜೆ ಭೂಮಿಗಳಾಗಿರಲಿಲ್ಲ. ಸಾಮಾನ್ಯ ಬೆಳೆಗೆ ಕಬ್ಬಿನದು ಪೂರಕವಾಗಿತ್ತು. ಹಾಗಿದ್ದರೆ ಮಾತ್ರ ನಾವು ಅದನ್ನು ಪುಷ್ಟಿವಳಿಯ ಉತ್ಕರ್ಷ ಎನ್ನಬಹುದು.

ಕಬ್ಬಿನ ಸಾಗುವಳಿ ಪ್ರಾರಂಭವಾಗುವ ಮೊದಲು ಬಿಹಾರಿಗಳು ತಮ್ಮ ಭೂಮಿಯನ್ನು ಭತ್ತದ ಬೆಳೆಗಾಗಿ ಉಪಯೋಗಿಸುತ್ತಿದ್ದರು. ಆದರೆ ಧಾನ್ಯ[illegible]ಗ ಬೇರ್ಪಟ್ಟವೆ. ಆದರ ಫಲವಾಗಿ ಅವರು ಕಬ್ಬನ್ನು ಬೆಳೆದು ಅಕ್ಕಿಗೆ ಬ್ರಹ್ಮದೇಶವನ್ನವಲಂಬಿಸಿದ್ದಾರೆ. ಮತ್ತು ಬ್ರಹ್ಮೀ ಅಕ್ಕಿಯು ಬೆಳ್ಳಕ್ಕಿಯಾಗಿ ಬರುತ್ತದೆ. ಅಂದರೆ ನಿಃಸತ್ವವಾಗಿ, ಶುದ್ಧ ಗಂಜಿ ಸತ್ವವುಳ್ಳದ್ದಾಗಿ ಬರುತ್ತದೆ. ಕಾರಖಾನೆದಾರರ ಬ್ಯಾಂಕಿನ ಧನಸಂಗ್ರಹವನ್ನು ಕಬ್ಬಿನ ಬೆಳೆ ಎಷ್ಟೇ ಹೆಚ್ಚಿಸಿರಲಿ, ನಾವು ನಮ್ಮ ಕಲ್ಪನೆಯನ್ನು ಎಷ್ಟೇ ಹಿಗ್ಗಿಸಿದರೂ ಕೋಟ್ಯನಧಿ ಜನತೆಗೆ ತಾವೇ ಬೆಳೆದ ಪೌಷ್ಟಿಕ ಅಕ್ಕಿ ಸಿಗದಂತೆಯೂ ಹೊರಗಿಂದ ತರಿಸಿದ ಬೆಳ್ಳಕ್ಕಿಗೆ ಅವರು ಕೈಯೊಡ್ಡುವಂತೆಯೂ ಮಾಡುತ್ತಿರುವಾಗ ನಾವು ಹೇಗೆ ಪುಷ್ಟಿವಳಿ ಹೆಚ್ಚಿಸಿದ್ದೇವೆಂದು ಸಾಧಿಸಲಾದೀತು?

ಆಹಾರ ಧಾನ್ಯದ ಬೆಳೆ ಬೆಳೆಯುವುದನ್ನು ಬಿಟ್ಟು ಗಿರಣಿಗೆ ಬೇಕಾದ ಕಚ್ಚಾ ಮಾಲುಗಳ ತಯಾರಿಕೆಗೆ ಕೈಹಾಕಿರುವುದು ದೇಶಕ್ಕೊಂದು ಕೇಡು ಬಗೆದಂತಲ್ಲವೆ? ಜನರ ಆರೋಗ್ಯಕ್ಕೆ ಹಾನಿಕರವಾಗಿದೆ ಆಹಾರ ಧಾನ್ಯ ಬೆಳೆಯುವದನ್ನು ಬಿಟ್ಟು ಹತ್ತಿಯನ್ನು ಬೆಳೆದು ಗಿರಣಿಗಳಿಗೆ ಕೊಟ್ಟರೆ ಮತ್ತು ಹೊಗೆಸೊಪ್ಪು ನೆಲಗಡಲೆಗಳನ್ನು ನಿರ್ಯಾತಕ್ಕಾಗಿ ಬೆಳೆದು ಕೊಟ್ಟರೆ ಅದು ಪುಷ್ಟಿವಳಿಯನ್ನು [illegible] ಉಂಟುಮಾಡದು ರೂಪಾಯಿ [illegible] ಕೊಡಬೇಕಂತೆ. ಬಹಳ ವರ್ಗಣಿ ಕೂಡಿಸಿದ ಶ್ರೇಯಸ್ಸು "Ladies' Hostels' Association— ಮಹಿಳಾ ನಿವೇಶನ ಸಂಘಕ್ಕೆ ಸಲ್ಲುವುದು ರೂಢಿ. ಪ್ರೇಕ್ಷಕ ವೃಂದವು ಅದಕ್ಕೇ ಬಹು ದೊಡ್ಡ ಪರಿಮಾಣದಲ್ಲಿ ಸೇರುತ್ತದಂತೆ!

ಮೇಲಿನ ವಿದ್ಯಾಲಯದ ಸಂಶೋಧನ ಮಾಡಿಕೊಟ್ಟವರಿಗೆ ಟಿಂಬಕ್ಟೂ ಸಂಸ್ಥೆ "ಸಹಸ ಬಿಹು

ವುದಕ್ಕಾಗಿ. ಎಷ್ಟೇ ಪರಿಮಳದ ಸಾಬೂನುಗಳನ್ನು ತಯಾರಿಸಿದರೂ ಜನರ ಹೊಟ್ಟೆಯ ಮೇಲೆ ಹೊಡೆದು ಮಾಡುವ ಈ ಕೆಲಸದಿಂದ ಪುಷ್ಟಿವಳಿ ಹೆಚ್ಚಿಸಿದಂತಾದೀತೆ? ಅವರಿಗಿಂದು ಪ್ರಿಜಿಲ್ಲಿನ ಬೆಳ್ಳಕ್ಕಿಯನ್ನು ತರಿಸಿಕೊಳ್ಳಲಾಗುತ್ತಿದೆ. ಇದು ಗಿರಣಿ ಒಡೆಯರ ಪ್ರಯತ್ನದ ಸಾಫಲ್ಯ!

ಕ್ಷಾಮಗಳ ನಿಜವಾದ ಕಾರಣ

ಈ ಪ್ರಕಾರ ಆಹಾರ ಧಾನ್ಯಗಳನ್ನು ಬೆಳೆಯುವ ಕೆಲಸವನ್ನು ಮೂಲೆಗೊತ್ತಿ ಪೇಟೆಯ ಮಾಲುಗಳ ತಯಾರಿಕೆಗೆ ಬೇಕಾದ ಕಚ್ಚಾ ಸಾಮಾನುಗಳನ್ನು ಬೆಳೆಯ ಹೋದರೆ ನಾಡಿಗೆ ಮೇಲಿಂದ ಮೇಲೆ ಕ್ಷಾಮವುಂಟಾಗುವುದರಲ್ಲಿ ಆಶ್ಚರ್ಯವೇನು? ನಾವು ನಿಜವಾಗಿ ಉತ್ಪಾದನೆಯನ್ನು ಹೆಚ್ಚಿಸಬೇಕೆಂದಿದ್ದರೆ ಪ್ರಾಥಮಿಕ ಅವಶ್ಯಕತೆಗಳನ್ನು ಜನರಿಗೆ ಇಷ್ಟರೊಳಗೇ ಪೂರೈಸಿಕೊಟ್ಟಿರಬೇಕಾಗಿತ್ತು. ಭಾರತದಂಥ ಒಕ್ಕಲುತನದ ನಾಡು ಅನ್ನಾನ್ನಗತಿಕವಾದುದು ಹೀಗೆ ನಾವು ತಪ್ಪು ಮಾರ್ಗದಲ್ಲಿ ಹೆಜ್ಜೆಯಿಟ್ಟುದರಿಂದಲೇ ಅಲ್ಲವೆ?

ಜೀವನಮಟ್ಟ

ನಿರುದ್ಯೋಗ, ಅರ್ಧೋದ್ಯೋಗದ ಪಿಡುಗು ಹಿಡಿದ ನಮ್ಮ ನಾಡಿನಲ್ಲಿ ಉತ್ಪಾದನ ಕ್ರಮವು ಅದರ ನಿವಾರಣೆಗಾಗಿಯೂ ನೆರವಾಗಬೇಕು. ಈ ವರೆಗೆ ಉತ್ಪಾದನ ಹೆಚ್ಚಿಸಲು ನಾವು ಕೆಗೆದುಕೊಂಡ ಕ್ರಮಗಳಿಂದ ನಿರುದ್ಯೋಗ ಹೆಚ್ಚುವಂತೆ ಆಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ Labour saving devices ಶ್ರಮ ಉಳಿತಾಯದ ಯೋಜನೆಗಳು ಎಂದು ಹೇಳುವುದು ನಿಜವಾಗಿ ನೋಡಿದರೆ ಕೆಲಸಗಾರರಿಗೆ ಕೆಲಸ ಸಿಗದಂತೆ ಮಾಡುವ ಮತ್ತು ನಿರುದ್ಯೋಗ ಹೆಚ್ಚಿಸುವ ಯೋಜನೆಗಳೇ ಆಗಿವೆ. ಹೀಗೆ ಬಹು ಪರಿಮಾಣದ ಉತ್ಪಾದನೆ ಮಾಡುವಲ್ಲಿ ಗಿರಣಿದಾರರು ಸಾಮಾನ್ಯರ ಜೀವನಮಟ್ಟವನ್ನು ಅಧೋಗತಿಗಿಳಿಸಿಬಿಟ್ಟಿದ್ದಾರೆ.

ಯೋಗಕ್ಷೇಮ ಗುರಿಯಾಗಲಿ

ಸಾಮಾನ್ಯರ ಉದ್ಧಾರಕ್ಕಾಗಿ, ದೇಶದ ಪ್ರಗತಿಗಾಗಿ ದುಡಿವವರೊಡನೆ ನಮ್ಮ ಸಂಪೂರ್ಣ ಸಹಕಾರವಿದೆ. ಆದರೆ ಅದನ್ನು ಸಾಕಷ್ಟು ಮಾಡಬೇಕೆಂಬುದೇ ನಮ್ಮ ಸಲಹೆ. ವೈಜ್ಞಾನಿಕ ಯಂತ್ರೋಪಕರಣಗಳಿಂದ ಕೇವಲ ಕೆಲವೇ ಜನರು ಕುಬೇರರಾಗುವಂತೆ ಔದ್ಯೋಗೀಕರಣ ನಡೆಯುತ್ತಿದ್ದರೆ ಜನಜೀವನ ಸುಧಾರಿಸದು. ಸ್ವರಾಜ್ಯ ಉದಯವಾದ ಈ ಕಾಲದಲ್ಲಿ ಸಾಮಾನ್ಯರ ಜೀವನದ ಸುಖಶಾಂತಿಗಾಗಿ ನಾವು ಪ್ರಯತ್ನಿಸದೆ ಇಲ್ಲದೆ ಬರಿದೆ ಏನಾದರೂ ಒಂದಿಷ್ಟನ್ನು [illegible] ತಯಾರಿಸಿ ಬಿಟ್ಟರಾಗಲಿಲ್ಲ. ಈ ಮಾತನ್ನು [illegible] ಸೇವಕರೆಂದು ಬೊಬ್ಬೆ ಹೊಡೆಯುವವರು [illegible] ಸ್ವಿಗೆ ತಂದುಕೊಳ್ಳಲು [illegible] ರರು!

ಮಾನ" ವನ್ನು ಕೊಡುವುದೆಂದು ಬಿಂಗೋಸ್ತ್ರರ ಸುದ್ದಿಯೊಂದು ಹರಡಿದೆ. ಕಾರಣವೇನೆಂದರೆ— ತನ್ನ ಮಹಾ ಕ್ಷುದ್ರ ವೈಭವವನ್ನು ಪ್ರತಿಷ್ಠಾಪಿಸಲು ಮತ್ತೊಂದು ವಿದ್ಯಾಲಯ ಹುಟ್ಟಿಕೊಂಡಿರುವುದು ಕ್ಷೇಮಕರವಲ್ಲ. ಅದಕ್ಕೆ ರಾಜ ಸಂಸ್ಥೆಯಿಂದ ತಕ್ಕ ಮುದ್ರೆಯಾಬೇಕು— ಎಂದು!

ನಿಶ್ಚಿತ ಯೋಜನೆಯುಳ್ಳ ಉತ್ಪಾದನೆ

(೨ನೆಯ ಪುಟದಿಂದ)

ಒಡವೆಗಳಿಗೆ ಸಾಹುಕಾರರು ಕೊಡುವ ದರ ಬಹಳ ಕಡಿಮೆ. ಅವರೆ ಸಾಹುಕಾರರು ಪೂರೈಸ ಬಹುದಾದ ಕಚ್ಚಾ ಮಾಲಿನ ದರ ಬಹಳ ಹೆಚ್ಚೇ ಇರುತ್ತದೆ. ಹಲವು ಸಲ ಉದ್ಯಮಗಾರರಿಗೆ ಬೇಕಾಗುವ ಕಿರಾಣಿ ಸಾಮಾನು, ವಸ್ತ್ರ ಮುಂತಾದವುಗಳನ್ನೆಲ್ಲ ಸಾಲಿಗರಾದ ಸಾಹುಕಾರರೇ ಪೂರೈಸುತ್ತಾರೆ. ಯಾವ ಧಾರಣೆಯೇ ಸಿಗಲಿ ತಾನು ತಯಾರಿಸಿದ ಮಾಲು ಮಾರಾಟವಾಗದೆ ಉಳಿಯುವದೆಂದು ಮಾತ್ರ ಉದ್ಯಮಗಾರನು ಅಂಜುವ ಕಾರಣವಿಲ್ಲ. ಸಾಲಿಗ ಸಾಹುಕಾರನು ಕೊಂಡು ಕೊಳ್ಳಲು ಸಿದ್ಧನಿರುತ್ತಾನೆಂದು ನಿಶ್ಚಿಂತೆಯಿಂದಿರಬಹುದು!

ಸಹಕಾರಿ ಸಂಘಗಳು ಜಾಮೀನಿಲ್ಲದೆ ಸಾಲ ಕೊಡುವದಿಲ್ಲ. ೯೯.೯೯% ದಷ್ಟು ಉದ್ಯಮಗಾರರು ನಿರ್ಗತಿಕರೇ ಆಗಿರುವಾಗ ಅವರು ಎಲ್ಲಿಂದ ಜಾಮೀನು ಕೊಡಬೇಕು? ಇಂಥ ಉದ್ಯಮಗಾರರು ಸಂಘ ಕಟ್ಟಿಕೊಂಡರೂ ಹಾಗೇ. ಜಾಮೀನು ಇಡಲು ಏನೂ ಇಲ್ಲ. ತಯಾರಾದ ಒಡವೆಗಳನ್ನು ತಂದು ಕೊಡುವ ಕರಾರಿನ ಮೇರೆಗೆ ಸಾಲ ತಂದ ಉದಾಹರಣೆಗಳನ್ನು ನಾನು ಕಂಡಿದ್ದೇನೆ. ಈ ರೀತಿ ಸಾಲ ಕೊಡುವ ಸಂಘಗಳಿಂದ ಬಡ ಉದ್ಯಮಗಾರರಿಗೆ ಯಾವ ಸಹಾಯವಾದೀತು? ತಾವು ಕೊಟ್ಟ ಸಾಲವು ಯೋಗ್ಯ ಬಡ್ಡಿ ಸಮೇತ ಮರಳಿದರೆ ಸಾಕೆಂಬುದೇ ಅವರ ಧ್ಯೇಯ. ಈ ಉದ್ಯಮಗಾರರು ತಯಾರಿಸಿದ ಒಡವೆಗಳು ಮಾರಾಟವಾದರೂ ಅಷ್ಟೆ ಬಿಟ್ಟರೂ ಅಷ್ಟೆ. ಅವರಿಗೆ ಅದು ಮಹತ್ವದ್ದಲ್ಲ. ಇಂಥ ಸಂಘಗಳಿಂದ ಗ್ರಾಮೋದ್ಯೋಗಕ್ಕೆ ಯಾವ ಲಾಭವೂ ಇಲ್ಲ. ಇವು ಶ್ರೀಮಂತರ ಸಂಪತ್ತನ್ನು ಹೆಚ್ಚಿಸುವವು; ಅರ್ಥಾತ್ ಬಡವರನ್ನು ಇನ್ನಿಷ್ಟು ದರಿದ್ರರನ್ನಾಗಿ ಮಾಡುವವು.

ಸರಕಾರದ ಸಹಾಯ ಅಸಂಗತ

ಸರಕಾರವು ಉದ್ಯಮಗಾರರಿಗೆ ತೀರ ಇತ್ತಿತ್ತಲಾಗಿ ಸಹಾಯ ಮಾಡಹತ್ತಿದೆ. ಅದು ಕೊಡುವ ಸವಲತ್ತು ಚೆನ್ನಾಗಿದೆ. ಈ ಸವಲತ್ತಿನ ಯೋಗ್ಯ ಉಪಯೋಗವಾದರೆ ಉದ್ಯಮಗಾರರಿಗೆ ಒಳ್ಳೇ ಲಾಭವಾದಂತಾಗುವದು. ಆದರೆ ಸರಕಾರೀ ಸಹಾಯವು ಉದ್ಯಮಗಾರರಿಗೆ ಸಕಾಲಕ್ಕೆ ತಲುಪುವದಿಲ್ಲ. ಇಷ್ಟಲ್ಲದೆ ತಾನು ಕೊಟ್ಟ ಸಹಾಯದಿಂದ ಉದ್ಯಮಗಾರರಿಗೆ ನಿಜವಾದ ಹಿತವಾಯಿತೋ ಇಲ್ಲವೋ ಎಂದು ಸರಕಾರವು ನೋಡುವದಿಲ್ಲ; ಉದ್ಯಮಗಾರರು ತಾನು ಕೊಟ್ಟ ಸಹಾಯವನ್ನು ಯೋಗ್ಯವಾಗಿ ಖರ್ಚು ಮಾಡಿದರೋ ಎಂಬುದಾಗಿ ಸರಕಾರವು ನೋಡುವದಿಲ್ಲ. ಉದ್ಯಮಗಾರರಲ್ಲಿ ಬಹುಸಂಖ್ಯಾಕರು ಅಶಿಕ್ಷಿತರಾಗಿದ್ದು ಅವರಿಗೆ ದೊರೆತ ಸಹಾಯದ ಯೋಗ್ಯ ಉಪಯೋಗ ಮಾಡಿಕೊಳ್ಳಲು ಬರುವದಿಲ್ಲ. ಕೋಆಪರೇಟಿವ್ ಕ್ರೆಡಿಟ್ ಮೂವ್‌ಮೆಂಟಿನ ಇತಿಹಾಸವನ್ನು ಕಣ್ಣ ಮುಂದಿಗಿದೆ. ಸರಕಾರವು ನಡೆಸಿದ ಕ್ರಮವು ಕ್ರೆಡಿಟ್ ಸೊಸೈಟಿಗಳ 'ವಿಕೃತ ಅವನತಿ' ಯಂತಿದೆಯೆಂದು ಹೇಳಬಹುದು. ಕೆಲವು ವರ್ಷಗಳ ಅನುಭವವೇ ಇದನ್ನು ನಿರ್ಣಯಿಸಬೇಕು. ಸರಿಯಾಗಿ ನೋಡಿದರೆ ಈ ಸಮಸ್ಯೆಯು ಸೆರಗನ್ನು ಸಹ ಸರಕಾರವು ಸೋಕಿಲ್ಲ.

ಈ ಬಗೆಯಾಗಿ ಗ್ರಾಮೋದ್ಯೋಗಗಳಿಗೆ ಆರ್ಥಿಕ ಸಹಾಯ ನೀಡುವದು ನನಗಂತೂ ಸರಿಯೆನಿಸುವದಿಲ್ಲ. ಈಗಾಗಲೆ ನಾನು ಈ ಪದ್ಧತಿಯ ಎರಡು ಕುಂದುಗಳನ್ನು ತೋರಿಸಿದ್ದೇನೆ. ಇನ್ನೂ ಅನೇಕ ದೋಷಗಳನ್ನು ತೋರಿಸಿ ಕೊಡಬಹುದು. ಕಾಮಗಾರರಿಗೆ ಸಹಾಯ ಕೊಡಬೇಕೆಂದು ಶಿಫಾರಸು ಮಾಡಲು ಸರಕಾರವು ನೇಮಿಸಿದ ಅಧಿಕಾರಿಗಳಿಗೆ ಗ್ರಾಮೋದ್ಯೋಗದ ಸಮಸ್ಯೆಗಳ ಗಂಧ ಗಾಳಿಯೂ ಗೊತ್ತಿಲ್ಲ. ಅವರಿಗೆ ಉದ್ಯಮಗಳ ಆರ್ಥಿಕ ಯೋಜನೆ (Industrial Financing) ಯ ಆ ಆ ಇ ಈ ಸಹ ಗೊತ್ತಿಲ್ಲ. ಅವರ ಮೇಲೆ ಅಧಿಕಾರ ನಡೆಸುವ ಅಸಿಸ್ಟಂಟ್ ರಿಜಿಸ್ಟ್ರಾರರುಗಳು ಹೆಚ್ಚಾಗಿ ಲೆಕ್ಕಪತ್ರ ತಪಾಸು ಮಾಡುವ ಶಾಖೆಯವರಾಗಿರುತ್ತಾರೆ (Auditing line) ಅವರಿಗೆ ಗೊತ್ತಿರುವದೂ ಅಷ್ಟೇ. ಇನ್ನು ಭವಿಷ್ಯ ಹೇಗಾಗುವದೋ ನೋಡಬೇಕು.

ತಾಳಮೇಳವಿಲ್ಲದ ಸಹಕಾರ

ವ್ಯಾಪಾರದ ಏಜನ್ಸಿಗಳೂ (ಅಂದರೆ, ಸೇಲ್ಸ್ ಡಿಪೋಗಳು) ಧನಸಹಾಯವೂ (ಬ್ಯಾಂಕುಗಳು) ಕೋಆಪರೇಟಿವ್ ಡಿಪಾರ್ಟಮೆಂಟಿನ ಕೈಯಲ್ಲೇ ಇರುವುದೆಂಬ ಸಂಗತಿ ಈ ಮೇಲಿನ ಸಾಲುಗಳಿಂದ ತಿಳಿದು ಬರಬಹುದು. ತಜ್ಞ(Experts) ರು ಮತ್ತು ಡಿಪೋಗಳ ನಡುವೆ ತಾಳಮೇಳವಿಲ್ಲದಂತೆ, ಡಿಪೋಗಳ ಮತ್ತು ಧನ ಸಹಾಯ ಮಾಡುವ ಏಜನ್ಸಿ (Financing Agencies) ಗಳ ನಡುವೆಯೂ ಆಗಿದೆ. ಈ ಏಜನ್ಸಿಗಳಿಗೆ ತಾವು ಕೊಟ್ಟ ಹಣ ಸುರಕ್ಷಿತವಾಗಿ ತಿರುಗಿ ಬಂದರೆ ಸಾಕೆಂದು ಇರುತ್ತದೆ. ಡಿಪೋಗಳಿಗೆ ಧನ ಸಹಾಯದ ವಿಷಯ ಗೊತ್ತಿಲ್ಲ; ತಮ್ಮ ಕೆಲಸ ಮಾತ್ರ ಮಾಡಿಕೊಂಡರೆ ಸಾಕೆಂದು ಅವುಗಳಿಗೆ. ಕಾಮಗಾರರಿಗೆ ಸಹಾಯಮಾಡಬೇಕೆಂಬ ಅಗತ್ಯವಾದರೂ ಅವರಿಗೇನು ಬಂತು?

ನನ್ನ ಅಭಿಪ್ರಾಯದಂತೆ ಸಾಲ ಕೊಡುವ ಸಾಹುಕಾರರೇ ನೂರು ಪಾಲಿಗೆ ಬೇಕು, ಹಲವು ಶತಮಾನಗಳಿಂದಲೂ ಅವರ ಮತ್ತು ಉದ್ಯಮಗಾರರ ಸಂಬಂಧ ನಡೆದುಕೊಂಡು ಬಂದಿದೆ. ಆದರೆ ಅವರು ಉದ್ಯಮಗಾರರನ್ನು ಸುಲಿಯುವದು ಮಾತ್ರ ಶೋಚನೀಯವಾಗಿದೆ. ಇದೇ ಒಂದು ದೊಡ್ಡ ಕುಂದು. ಸರ್ಪ ಬಣ್ಣಗಳನ್ನು ಮುಸಿ ನುಂಗಿದ ಹಾಗೆ!

ಸರಿಯಾದ ಹೆಜ್ಜೆ

ಇನ್ನು ಮುಂದೆ ಯಾವದೇ ರೀತಿಯಿಂದ ಗ್ರಾಮೋದ್ಯೋಗಗಳ ಆರ್ಥಿಕ ಯೋಜನೆ ಮಾಡುವದಾದರೂ ಮೇಲೆ ಹೇಳಿದ ದೋಷಗಳ ಪುನರಾವೃತ್ತಿಯಾಗದಂತೆ ನೋಡಿಕೊಳ್ಳಬೇಕು. ಈ ಕೆಳಗಿನ ಸಹಾಯ ಅಗತ್ಯ:

೧ ಅವಶ್ಯ (ಮತ್ತು ಸಾಧ್ಯ)ವಿದ್ದಲ್ಲೆಲ್ಲ ಕಚ್ಚಾ ಮಾಲನ್ನು ಒದಗಿಸಿ ಕೊಡಬೇಕು.
೨ ದುಡಿಯುವ ಬಂಡವಲಿನ ಪೂರೈಕೆ.
೩ ತಯಾರಾದ ಒಡವೆಗಳ ಮಾರಾಟ.
೪ ಸಾಮುಗ್ರಿಗಳ ಪೂರೈಕೆ.
೫ ಉದ್ಯಮಗಾರನೊಡನೆ ಸಂಬಂಧ.

ಇದಕ್ಕಾಗಿ ಒಂದು ಔದ್ಯೋಗಿಕ ಸಹಕಾರಿ ಸಂಸ್ಥೆ, ಸೇಲ್ಸ ಡಿಪೋ, ಗಿರಾಕಿಗಳ ಸಹಕಾರಿ ಸಂಗ್ರಹಾಲಯ (Store) ಬ್ಯಾಂಕು ಇವಿಷ್ಟು ಬೇಕು.

ಹಲವು ಶಾಖೆಗಳುಳ್ಳ ಒಂದು ಇಂಡಸ್ಟ್ರಿಯಲ್ ಬ್ಯಾಂಕಿನಂತೆ ನಡೆಯಲು ಪ್ರಾಂತಿಕ ಔದ್ಯೋಗಿಕ ಸಹಕಾರಿ ಸಂಘವು ಮೇಲೆ ಹೇಳಿದ ಕ್ರಮದಲ್ಲಿ ನಡೆಯುವ ಸೇಲ್ಸ್ ಡಿಪೋಗಳನ್ನು ತನ್ನ ಅಧಿಕಾರದಲ್ಲಿಟ್ಟುಕೊಂಡು ಸಾಗಿಸಬೇಕು ಮತ್ತು ಔದ್ಯೋಗಿಕ ಸಂಘಗಳ ಮೇಲ್ವಿಚಾರಣೆ ಮಾಡಬೇಕು. ಗಿರಾಕಿಗಳ ಮಳಿಗೆಗಳು (Consumers Stores) ಒಳ್ಳೇ ಅನುಬಂಧ (Adgunct) ವಾಗುವವು.

ಉದ್ಯಮಗಾರರಿಗೆ ಸಾಲತೆಗೆಯಿಸಿಕೊಡಲು ಸರಕಾರೀ ಏಜನ್ಸಿಗಳನ್ನಿಡುವದು ನನಗೆ ಸರಿದೋರುವದಿಲ್ಲ-ಉದ್ಯಮಗಾರರೊಡನೆ ಸಂಬಂಧವಿಟ್ಟುಕೊಂಡ ಇಂಡಸ್ಟ್ರಿಯಲ್ ಬ್ಯಾಂಕಿನಿಂದ ಹೆಚ್ಚು ಉಪಯೋಗ ವಾಗಬಹುದು. ಇದರಿಂದ 'ಸರಕಾರೀ ಕೆಲಸವೆಂದರೇ ಹೀಗೆ ಯಾವಾಗಲೂಕೂಡ' ಎಂಬ ಈಗಿರುವ ಅಪವಾದ ತಪ್ಪೀತು. ಸಾಲವನ್ನು ಮರಳಿ ಪಡೆಯುವದು ಬ್ಯಾಂಕಿಗೆ ಸುಲಭವಾಗುವದು. ಇಂಥ ಬ್ಯಾಂಕಿನಲ್ಲಿ ಸರಕಾರವು ಫಂಡುಗಳನ್ನು ಇಡಬೇಕೆಂದು ನನ್ನ ಸೂಚನೆ. ಈ ಬ್ಯಾಂಕಿನ ಅಧಿಕಾರದಲ್ಲಿ ತಜ್ಞರು (Experts) ಇರಬೇಕು.

ಪುಸ್ತಕ ಮತ್ತು ವಿಮರ್ಶೆ

ಕವಿತಾ ಕಾಮಿನಿ

ಬರೆದವರು ಶ್ರೀ ಎಸ್ ವಂಕಟರಾಯರು ಕಿರಿಯರ ಪ್ರಪಂಚ, ಉಡುಪಿ. ಪುಟಗಳು ೧೨೭, ಬೆಲೆ ರೂ ೨.

'ಕವಿತಾಕಾಮಿನಿ' ಯು ನಿಜವಾಗಿಯೂ ಸುಂದರಿಯಾಗಿದ್ದಾಳೆ; ಅನ್ವರ್ಥನಾಮ್ನಿಯೆನಿಸಿದ್ದಾಳೆ. ಅವಳು ೭೪ ಗೀತಗಳನ್ನು ಅಂದಿದ್ದಾಳೆ. 'ತಯಾಕವಿತಯಾಕಿಂವಾತಯಾವನಿತಯಾಚಕಿಂ? ಪದವಿನ್ಯಾಸ ಮಾತ್ರೇಣ ಯಯಾ ನಾಪಹೃತಂ ಮನಃ' ಎಂಬ ಮಾತಿನಂತೆ ಅವಳ ನಡಿಗೆ ನುಡಿಗೊಂದು ತಾಳಮಾನವಾಗಿದೆ.; ಅವಳಛಂದವನ್ನು ಹೊರಗೆಡಹುವಂಥ ಛಂದಸ್ಸು, ಭಾವಬಂಧವನ್ನು ಹೊರಹೊಮ್ಮಿಸುವಂಥ ಪದಬಂಧ—ಎಲ್ಲವೂ ಮನೋಹರವಾಗಿವೆ.

'ಅಂಜಲಿಯಲ್ಲಿ'—'ತುಂಬಿಗಳ ಕುಲ ಮಲರ ಮಧುವ ನುಂಡು ಪರಾಗ, ಮೆಂಬಪೊಂಬಟ್ಟೆಯಂ ಧರಿಸಿ ನಲಿವಿಂಕಂಬುಕಂಧರೆ! ನಿನ್ನ ವಿಭವಮಂ ಮಾಗಧರ, ಬಂಬಲೆನೆ ನಲಿನಲಿದು ಪಾಡುತಿರಲು:' ಎಂಬುದರಲ್ಲಿಯ ನಾದ ಮಾಧುರ್ಯ; 'ಹಸಿಯ ನಸುನಗೆಯ ಪೊಸದೇಸಿ ಮುಂದೆಸೆಯುತಿರೆ ಕಡಲ ಸಂತಸದಿರವನಳೆದರಾರು?' ಎಂಬ ತಾಯಿಗೆ' ಅರ್ಪಿತವಾದ ಗೀತದಲ್ಲಿಯ ಶ್ಲೇಷ ಮತ್ತು ತಾಯ್ನೆಲದ ಪ್ರೀತಿ; 'ಬನದೇವಿ'ಯ ಕಾಲಂದುಗೆಗಳ ಮೆಲ್ಲುಲಿಯೆನೆ ಕೋಗಿಲೆಗಳೆಲ್ಲ, ಹೊನಲಿನ ಕಲಕಲತೆಯನೇ ಶ್ರುತಿಸಿದಿ ದಿಸಿಗೊರಲಿಂದಲಿ ಹಾಡುತಲಿ, ಎಂಬ 'ಗೊಲ್ಲರ ಹಾದಿನ' ಸಾಲಿನಲ್ಲಿ ಕಾಣುವ ಉತ್ಪ್ರೇಕ್ಷಾಸೌಂದರ್ಯ ಮತ್ತು ಪ್ರಕೃತಿ ರಮಣೀಯತೆಯ ಮಧುರಚಿತ್ರವನ್ನು ತುತ್ತತುದಿಗೆ ಮುಟ್ಟಿಸಿರುವುದು; ನೀನಿಂತು ಮುಳಿದು ಎಂಬ ಪ್ರಣಯ ಗೀತೆಯಲ್ಲಿಯ ಪ್ರೇಮದ ಲಲ್ಲೆ ಪ್ರೀತಿ ಸಾಂದ್ರತೆ; 'ರಣರಂಗ' ದಲ್ಲಿ ರಣರಂಗವನ್ನು–ಇದು ಬಿದಿಯ ಕುಶಲತೆಯ ಬಿನ್ನಾಣಗಳೆ ತುತ್ತತುದಿಯ ನೇರಿದ ಕಲೆಯ ಭಂಡಾರಗಳನೆಲ್ಲ, ಸೆಳೆಸೆಳೆದು ಕೆಡೆಹಾಯ್ದು ಬೆಳ್ಳಸವನುರುಳಿಸುವ, ಕಾಲನಂಬುವ ವಿಲಯ ರುದ್ರನೊಲಿದಲೆಯುತಿಹ ಕಟ್ಟುರಿಯ ಸುಡುಗಾಡು' ಎಂದು ಮುಂತಾಗಿ ಕರೆದು ಅದರ ಉಗ್ರತೆ ಮತ್ತು ಬೀಭತ್ಸಭಾವವನ್ನು ವರ್ಣಿಸಿರುವ ಓಜೆ ಮತ್ತು ಗಾಂಭೀರ್ಯ; 'ಕಿರುಲಜ್ಜೆಯ ಗರಿಮೆಯ ಮುಗಿಲೆಡೆಯೊಳು ನಲಿನಲಿಯುತಲಿಹ ಕುಡಿನೋಟ! ಕುಡಿನೋಟದ ಬೆಡಗಿಗೆ ನಿರುಗೀಯುತೆ, ಪೆಂಪುಳಿಗೊಳುತಿರುವಿನಿ ವೇಟ' ಎಂಬುದಾಗಿ ಪ್ರಥಮ ಸಮಾಗಮವನ್ನು ಬಣ್ಣಿಸಿರುವುದರಲ್ಲಿ 'ಪ್ರಥಮ ಸಮಾಗಮ ಲಜ್ಜಿತಯಾ ಪಟು ಚಾಟುಶತೈರನುಕೂಲಂ' ಎಂಬ ಗೀತ ಗೋವಿಂದದ ಸಾಲಿನಲ್ಲಿರುವುದಕ್ಕಿಂತ ಹೆಚ್ಚಾಗಿ ಇರುವ ಪ್ರಸಾದ ಗುಣ ಮತ್ತು ಮಧುರ ಕಲ್ಪನಾ ವಿಲಾಸ—

ಹಾಗೇ ಮುಂದೆ ಸಾಗಿದರೆ, 'ಪ್ರತೀಕ್ಷೆ'ಯವಿರಹವು ಬೇಕಾದಷ್ಟು ಬೇಗೆಕೊಡುವುದು; 'ಬರುವೆನಿದೋ' ಎಂಬುದರಲ್ಲಿಯ ಉಲ್ಲಾಸ, ಉತ್ಸಾಹ ಮತ್ತು 'ಬಿನ್ನಾಣದ ಸಿಂಗರಗಳ, ಬಿಂಕದ ಬೆಡಗಿವಾಗ –ನಲ್ಮೆಯಸಿರಿಯರಳೊಂದೇ ಎದೆವಳ್ಳಿಯೊಳುಳಿವಾಗ' ಎಂಬ ಸಾಲುಗಳಲ್ಲಿರುವಂಥ ಅರ್ಥವ್ಯಕ್ತಿ ಭಾವಸೌಂದರ್ಯಗಳ ಹೊಳಪು; ಒಂದು ಕನಸು, ಎಂಬುದರಲ್ಲಿ ಹೇಳಿದ 'ಕನಸೆ ಜೀವನವಾಗಿ ಹರಿಯುವುದೆ? ಜೀವನವೆ ಕನಸಾಗಿ ಹರಿಯುತಿಹುದೆ?' ಎಂಬ ಸಾಲುಗಳಲ್ಲಿ ವ್ಯಕ್ತವಾದ ಮಧುರ ಕಲ್ಪನೆಯ ರಂಗು; 'ನಾನು ನೀನು' ಎಂಬುದರಲ್ಲಿಯ ಪ್ರೇಮೋನ್ಮಾದ; 'ಪ್ರಣಯಪ್ರಪಂಚ'ವು 'ಮಮತುಮಮತನುಸಂಗೆ ಸ್ವೈರ ಕಾರುಣ್ಯ ಪೂರ್ಣಸ್ ಮುದಕಲ ನುದಿರಾಕ್ರೀಸೀ ವಿನೋಕ್ಷೋಹಿ ಮೋಕ್ಷಃ' ಎಂಬುದನ್ನು ನೆನಪಿಗೆ ತಂದು ಕೊಡುವ ಸೊಗಸು; 'ಹರೆಯದಹಂಬಲ' ದಲ್ಲಿ ವರ್ಣಿತವಾಗಿರುವ ವಾಸಕಸಜ್ಜಾ ಭಾವ; 'ಅಂತರಂಗ' ದಲ್ಲಿಯ ಪದ ನಾಟ್ಯ ಮತ್ತು ಭಾವ ವಿಲಾಸ; ಕೊನೆಯಹಾಡಿ'ನಲ್ಲಿ ಕವಿಪ್ರೌಢಿಬದ್ಧವಾದ 'ಗಾಳಿಯೊಂದು ಸುಳಿದು ಸೋಂಕಿ' ರಾಗ ರತಿಯನಲು ಕಿ.ವಂತೆ, ಕಾಣದೊಂದು ಬೆರಳ ಮಾಟ, ವೆದೆಯಮಿಂಟುತಿರುವುದೆ' ಎಂಬ ಸಾಲುಗಳು 'ಯಾರದೋ ಬೆಟ್ಟಿಗೆ' ಮೂಡಲ ಬೆಟ್ಟಿಗೆ' ನೋಡ್ತೇನ, ನೋಡ್ತೇನ ನೋಡ್ತೇನ' ಎಂಬ ಶ್ರೀ ಬೇಂದ್ರೆಯವರ ಸೂಕ್ತಗಳನ್ನು ನೆನಪಿಗೆ ತಂದು ಕೊಡುವುದು; 'ನಿರಾಶೆ' ಯಲ್ಲಿಯ ನೈರಾಶ್ಯ ಪಾರಮ್ಯ; 'ಇಂಚರ' ದ ಇಂಪು; 'ಶೂನ್ಯಸಂಗಮ' ದಲ್ಲಿಯ ಭಾವಗಾಂಭೀರ್ಯ ಮತ್ತು ಬಂಧಾರ್ಜವ; 'ಜಾರಿಗೆಳತಿ' ಯಲ್ಲಿಯ ಭಾವೋದಾತ್ತತೆಯ ಅಸದೃಶವಾದ ಚೆಲುವು —'ಕರುಳಸಿಡುಕಂತಿಯಲಿ ನಿನ್ನದೊಂದೇ ಗೀತೆ, ಕರುಳತಂತಿಯ ಮಿಡುಕಿ ಮೊಳಗಿಸುವನಲ್ಲ! ಕರಣಕರಣಂಗಳಲಿ ನಿನ್ನದೊಂದೇ ಪ್ರೀತಿಕರಣದೀಪ್ತಿಯ ತುಡುಕಿ ತೊಳಗಿಸುವನಲ್ಲ!' ಎಂಬಲ್ಲಿ ಚಿಮ್ಮಿನಿಂತಿರುವುದು ಇವೇ ಮೊದಲಾದ ಗುಣವಿಶೇಷಗಳು ಹೃದಯ ಸ್ಪರ್ಶಿಯಾಗಿವೆ.

ಪದಮೈತ್ರಿ, ಪದತಯ್ಯಾಮಾರ್ದವ ಇವೆಲ್ಲ ರಸಾನುಗುಣವಿರುವುದು' ಶ್ಲಾಘ್ಯವಿದೆ. ಪದಾರ್ಥ ಪುನರುಕ್ತಿಯಿಂದ ಕೆಲವೊಮ್ಮೆ ಬೇಸರ ಹುಟ್ಟಿಸುವಂತಹ ಕೆಲವೊಂದು ಸಂದರ್ಭಗಳಿರುವುದೊಂದು ನ್ಯೂನತೆ. ಆದರೆ ಅಂಥವು ಹೆಚ್ಚಿಲ್ಲವೆಂಬುದೊಂದು ಸಮಾಧಾನ. 'ಕಕ್ಕಸ'ದಂತಹ ಕೆಲವು ದುಷ್ಟ' ಪದಗಳು; 'ಪೆಂಪುಳಿ' ಯಂತಹ ಅಪರೂಪ ಪ್ರಯೋಗ; 'ಧಿಮಿಕು' ವಿನಂತಹ ಅರೂಢರೂಪ ಇತ್ಯಾದಿ ಕೆಲವು ಪದವಿನ್ಯಾಸದೋಷಗಳೂ. ಸಾಲುಗಳ ಅಂತ್ಯದಲ್ಲಿಯ ಪ್ರಾಸಶೈಥಿಲ್ಯಗಳೂ ಗಣ್ಯವಾಗಿ ಹೇಳುವಷ್ಟಿಲ್ಲ. ಕವಿಯ ಪದಪಾಂಡಿತ್ಯ, ಅರ್ಥಗಾಂಭೀರ್ಯ, ಭಾವಮಾಧುರ್ಯಗಳು ಹಲವಾರುಕಡೆ ಹೃದಯಂಗಮವಾಗಿವೆ. Best words in the best order ಉತ್ತಮ ಪದಗಳು ಉತ್ತಮ ಕ್ರಮದಲ್ಲಿ ಕೂಡಿರುವುದು–ಎಂಬ ಕಾವ್ಯಲಕ್ಷಣಕ್ಕೆ 'ಕವಿತಾ ಕಾಮಿನಿ'ಯೊಂದು ಯುಕ್ತವಾದ ನಿದರ್ಶನವಾಗಿದೆ. ಇಂತಹ ಕವಿಯ ಉತ್ಸಾಹ ಕುಗ್ಗದಂತೆ ನೋಡಿಕೊಂಡು, ಕನ್ನಡ ಕಾವ್ಯಕನ್ನಿಕೆಯ ಕಮ್ಮಿದೆಯ ಸೊಬಗನ್ನು ಕಂಡು ಕಾಣಿಸಲು ಹೆಚ್ಚ ಹೆಚ್ಚು ಪ್ರಯತ್ನಿಸಲು ಹುರುಪುಗೊಟ್ಟು ನಡೆಸಿಕೊಡುವುದು ಕನ್ನಡರ ಕರ್ತವ್ಯ, ನಾಗರಿಕತೆಯ ಅವಶ್ಯಕತೆ ಎಂದು ಇಲ್ಲಿ ಹೇಳದಿರಲಾಗದು. ಈ ಕವಿಯು 'ವಿಮರ್ಶಕ' ನನ್ನೊಂದು ಪದ್ಯದಲ್ಲಿ ಭೀಕರವಾಗಿ ಚಿತ್ರಿಸಿರುವುದು ಸತ್ಯವಾಗದಂತೆ ನೋಡಿಕೊಳ್ಳುವುದು 'ಸಹೃದಯ'ರ ಪಾಲಿಗೆಸೇರಿದ್ದು. 'ಕವಿತಾಕಾಮಿನಿ'ಯು ತೆಂಕಣತೀರದಿಂದ ಬಂದವಳು; ಅವಳಿಗೆ ಯುಕ್ತವಾದ ಮನ್ನಣೆಯನ್ನು ಬಡಗಣ ರಸಿಕರು ಕೊಡದಿರರೆಂದು ಹಾರೈಸುತ್ತೇನೆ.

ಕಲ್ಯಾಣ ಕ್ರಾಂತಿ

ಬರೆದವರು: ಶ್ರೀ ಗಂಗಪ್ಪ ವಾಲಿ. ಪ್ರಕಾಶಕರು ಶ್ರೀ ಬಿ. ಜಿ. ಸಂಕೇಶ್ವರ, ಶ್ರೀ ಸದ್ಗುರುಶ್ರೀ ಪುಸ್ತಕ ಭಂಡಾರ, ಗದಗ. ಪುಟ ೮೮, ಬೆಲೆ ರೂ. ೧/—

ಶ್ರೀ ಗಂಗಪ್ಪ ವಾಲಿ ಬರೆದ ಈ ಕವನ ಸಂಗ್ರಹಕ್ಕೆ ಶ್ರೀ ತಿ. ತಿ. ಬಸವನಾಳರ ಹರಕೆ ಮತ್ತು ಶ್ರೀ ಸ. ಸ. ಮಾಳವಾಡರ ಮುನ್ನುಡಿಗಳಿವೆ. ಅವುಗಳಿಂದಲೆ ಪುಸ್ತಕ ಪರಿಚಯ ಸಾಕಷ್ಟಾಗುತ್ತದೆ.

ಸಂಕಲನವನ್ನು 'ದೇಶ ಗೀತ', 'ಬಸವ ಗೀತ', 'ಅನುವಾದ ಗೀತ' ಮತ್ತು ಪುರಾಣ ಗೀತ' ಎಂದು ಐದು ವಿಭಾಗಗಳನ್ನಾಗಿ ಮಾಡಲಾಗಿದೆ. ದೇಶಗೀತಗಳಲ್ಲಿ ಮೊದಲನೆಯದಾದ "ರಾಷ್ಟ್ರಧ್ವಜ ಹಾರುತಿದೆ' 'ನಮ್ಮ ನಾಡು' ಎಂಬವು ಸುಶ್ರಾವ್ಯವಾಗಿವೆ.

ಬಸವ ಗೀತಗಳಲ್ಲಿ 'ಕಲ್ಯಾಣ ಕ್ರಾಂತಿ'ಯು ಆಧುನಿಕ ಭಾವಗಳ ಒಂದು ರತ್ನ ಕರಂಡಕವಾಗಿದೆ. ಅಲ್ಲಲ್ಲಿ ಪ್ರಾಸಾನುಪ್ರಾಸ ಮತ್ತು 'ಹೆತ್ತತಾಯಿಯ ನೆತ್ತಿ ಕೊತ್ತಿನ ಮುತ್ತು ಕೊಳ್ಳುವ ಪರಿಯೊಳು' ಎಂಬಂತಹ ನಿದರ್ಶನಾದಿ ಉತ್ತಮ ಅಲಂಕಾರಗಳು ಇದರಲ್ಲಿ ಹೂಬಿಟ್ಟಿವೆ. 'ಹೊಸ ಸೃಷ್ಟಿ ಉದಯಿಸಲಿ' ಎಂಬುದರಲ್ಲಿ ಕವಿ ತನ್ನ ಹೊಸ ದೃಷ್ಟಿಯ, ಹೊಸ ಸಾತ್ವಿಕತೆಯ ಚಿತ್ರವನ್ನು ಹೃದಯಂಗಮವಾಗಿ ಕೊಟ್ಟಿದ್ದಾನೆ; ಕಠೋರ ಸತ್ಯವನ್ನು ಕಠೋರವಾಗಿ ಅಡಿದ್ದಾನೆ.

'ಜ್ಞಾನಕೃಷಿ'ಯನ್ನು 'ಭಾವಗೀತ'ವೆನ್ನುವುದಕ್ಕಿಂತ ತತ್ವ ಗೀತವೆನ್ನಬಹುದಾಗಿದೆ. 'ಕನ್ನಡದ ಕಾವ್ಯಋಷಿ'ಯಲ್ಲಿ ಶ್ರೀ ಅಂಬಿಕಾತನಯದತ್ತರಿಗೆ ಅನುರೂಪವಾದ ಭಕ್ತಿಯನ್ನು ಅರ್ಪಿಸಲಾಗಿದೆ. ಅನುವಾದಗೀತಗಳಲ್ಲಿ ದೇವತಾತತಿಕೃತ ಶಿವಸೇವಾ ವರ್ಣನೆ ಕರ್ಣಪೇಯವಾಗಿದೆ. 'ಒಂದಿನಿತೆ ಒರಿವಾಗು' ಎಂಬುದರಲ್ಲಿ ನೀತಿ ಹಿತವಾಗಿ ಭಾವಗೀತವೆನಿಸಿದೆ. 'ಎಲ್ಲ ಪ್ರಾಕೃತನ'ವೊಂದು ಸುಂದರ ಕವನ ಎಂದರಷ್ಟೇ ಎಲ್ಲವನ್ನು ಹೇಳಿದಂತಾಗುತ್ತದೆ.

—ನಿಷ್ಣೇಯ ವೃಟಿಕೆ

ಸಂಪಾದಕೀಯ ಟೀಕೆಟಿಪ್ಪಣಿಗಳು

ಕರ್ನಾಟಕದ ಮನವಿ

ಘಟನಾ ಸಮಿತಿಯ ಹಿಂದಿನ ಅಧಿವೇಶನದಲ್ಲಿ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರೂ ಅನಂತರ ಉಪ ಮುಖ್ಯಮಂತ್ರಿ ಸರದಾರ ಪಟೇಲರೂ ಕೊಟ್ಟ ಹೇಳಿಕೆಗಳಿಂದ ಕನ್ನಡಿಗರ ಜೀವಾಳದ ಪ್ರಶ್ನೆಯಾದ ಏಕೀಕರಣಕ್ಕೆ ಬಿದ್ದ ಹಿಂದೇಟನ್ನು ಎದುರಿಸಲು ಏಕೀಕರಣ ಮಹಾ ಸಮಿತಿ, ಪ್ರಾಂತಿಕ ಕಾಂಗ್ರೆಸ್ ಸಮಿತಿಗಳು ಕೈಕೊಂಡ ಉಗ್ರೋಪಾಯಗಳ ಸ್ವಾರ್ಥತ್ಯಾಗಾತ್ಮಕ ಗೊತ್ತುವಳಿ ಕನ್ನಡಿಗರಿಗೆ ಈಗಾಗಲೆ ಪರಿಚಿತವಾಗಿದೆ. ಕಳೆದ ರವಿವಾರ ಶ್ರೀ ಎಸ್. ನಿಜಲಿಂಗಪ್ಪನವರ ಮುಂದಾಳ್ತನದಲ್ಲಿ ಮುಂಬಯಿ ಮದ್ರಾಸ್ ಪ್ರಾಂತಗಳ ಕನ್ನಡಿಗ ಎಂ. ಎಲ್. ಎ. ಗಳೂ ಇತರ ಪ್ರಮುಖರೂ ದಿಲ್ಲಿಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯ ಸಮಿತಿಯನ್ನು ಕಂಡು ಒಪ್ಪಿಸಿದ ಮನವಿ ಶಾಂತೋಪಾಯದ ಕೊನೆಯ ಪ್ರಯತ್ನವಾಗಿದೆಯೆಂದು ಹೇಳಬಹುದು. ಮನವಿಯಲ್ಲಿ ಸಲ್ಲದ ಉದ್ರೇಕಕ್ಕೆ ಎಡೆಗೊಡದೆ, ಸೌಮ್ಯವಾದರೂ ದೃಢ ವಾಕ್ಯಗಳಿಂದ ಕರ್ನಾಟಕದ ಪ್ರಾಂತೀಕರಣ ಆಂಧ್ರದೊಡನೆಯೆ ಆಗುವದರ ಅವಶ್ಯಕತೆಯನ್ನು ಒತ್ತಿ ಹೇಳಿ, ಕರ್ನಾಟಕದ ಈ ಬೇಡಿಕೆ ಮನ್ನಿಸಲ್ಪಡದಿದ್ದರೆ ಚರಮ ಉಪಾಯವೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಆದೇಶದಂತೆ ಘಟನಾ ಸಮಿತಿ ಶಾಸನ ಸಭಾದಿಗಳ ಕನ್ನಡಿಗ ಪ್ರತಿನಿಧಿಗಳು ರಾಜೀನಾಮೆ ಕೊಡುವ ದುರ್ಧರ ಪ್ರಸಂಗ ಬರಬಹುದೆಂದು ಸ್ಪಷ್ಟಪಡಿಸಲಾಗಿದೆ. ಶಿಷ್ಟಮಂಡಲವನ್ನೊಯ್ದ ಮುಂದಾಳುಗಳಲ್ಲಿ ಉಂಟಾದ ಭಾವನೆಗಳು ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಬಿಂಬಿಸುತ್ತಿದ್ದರೆ, ಮನವಿಯಲ್ಲಿರುವ ರಾಜೀನಾಮೆಯ ಬೆದರಿಕೆಯು ಅಂತಿಕ್ರಮಕಲ್ಲ ವಿವೇಕಪೂರ್ಣವಾದ ಪ್ರಾಮಾಣಿಕತೆಯಿಂದ ಕಾರ್ಯ ಸಮಿತಿಯ ಸದಸ್ಯರ ಮೇಲೆ ಇಚ್ಛಿತ ಪರಿಣಾಮವಾಗಿದೆಯೆಂದೂ ಅಂತು ಕ್ರಮೇಣ ಕರ್ನಾಟಕದ ಪ್ರಾಂತೀಕರಣ ಹಿಂದೆ ಬೀಳಲಾರದೆಂದೂ ಅನಿಸುತ್ತದೆ. ಶಿಷ್ಟಮಂಡಲದವರು ಗಾಂಧಿಯವರನ್ನೂ ಆ ಮೇಲೆ ಸರದಾರ ಪಟೇಲರನ್ನೂ ಕಂಡು ಕರ್ನಾಟಕದ ಉತ್ಕರ್ಷಕ್ಕೆ ಮಾತ್ರವಲ್ಲ, ಅಸ್ತಿತ್ವಕ್ಕೇ ಪ್ರಾಂತೀಕರಣದ ವಿಲಂಬದಿಂದ ಗಂಡಾಂತರ ಬರುವದೆಂಬುದನ್ನು ಮನಗಾಣಿಸಿಕೊಟ್ಟರು. ಗಾಂಧಿಯವರೂ ಒಂದು ಪ್ರಾರ್ಥನೋತ್ತರ ಭಾಷಣದಲ್ಲಿ ಭಾಷಾನುಗುಣ ಪ್ರಾಂತರಚನೆಯ ಅವಶ್ಯಕತೆಯನ್ನು ಒಪ್ಪಿಕೊಂಡದ್ದು ಸಂತೋಷದ ಸಂಗತಿ. ಕಾಂಗ್ರೆಸ್ ವರಿಷ್ಠರನ್ನೂ ಅಂತೆಯೆ ಗಾಂಧಿಯವರನ್ನೂ ಕಾಡುತ್ತಿರುವ ಒಂದೇ ಒಂದು ಭಯವೆಂದರೆ ಗಡಿ ನಿರ್ಣಯದಲ್ಲಿ ತೊಡಕುಂಟಾಗಿ ಈ ವರೆಗೆ ರಕ್ತಪಾತದಿಂದ ಅಲಿಪ್ತವಾಗಿದ್ದ ದಕ್ಷಿಣಾಪಥದಲ್ಲಿಯೂ ಶಾಂತಿ ಭಂಗವಾದೀತೆಂಬುದು. ಕರ್ನಾಟಕದ ವಟ್ಟಿಗೆ ಪ್ರಾಂತೀಕರಣದ ಬೇಡಿಕೆ ರಾಷ್ಟ್ರೀಯತೆಗೆ ಪ್ರತಿಸ್ಪರ್ಧಿಯಾಗಿ ಮಂಡಿಸಲ್ಪಡುತ್ತಿಲ್ಲವೆಂದೂ ಕಾಯದೆ ಸುವ್ಯವಸ್ಥೆಗಳಿಗಾಗಲಿ, ಕೇಂದ್ರದ ಅಧಿಕಾರಕ್ಕಾಗಲಿ ಎದುರಾಡುವ ಉದ್ದೇಶ ಕನ್ನಡಿಗರಿಗಿಲ್ಲೆಂದೂ ಆಶ್ವಾಸನ ಕೊಡಬಲ್ಲೆವು. ಅದೇ ಪ್ರಕಾರ ಆಂಧ್ರ ಪ್ರಾಂತ ರಚನೆಯಲ್ಲಿ ಯಾವ ತೊಡಕುಗಳೂ ಇಲ್ಲವಾದರೆ ಕರ್ನಾಟಕದಲ್ಲಿಯೂ ಇರಲಾರದೆಂದೂ ಹೇಳಬಯಸುತ್ತೇವೆ. ಆದುದರಿಂದ ಕನ್ನಡಿಗರ ಈ ಜೀವನ-ಮರಣದ ಪ್ರಶ್ನೆಯನ್ನು ಮರೆತು ಹೋದ ವಾಗ್ದಾನಗಳ ಸಾಲಿಗೆ ಸೇರಿಸದೆ ಅ. ಭಾ. ಮುಂದಾಳುಗಳು ಕನ್ನಡಿಗರ ಕಾಂಗ್ರೆಸ್ ನಿಷ್ಠೆಯನ್ನು ಸತ್ಪಾತ್ರನಿಷ್ಠೆಯಾಗಿ ಮಾಡಲು ತಪ್ಪಬಾರದೆಂದು ಸೂಚಿಸುವೆವು. ಇಲ್ಲದಿದ್ದರೆ ಕನ್ನಡದ ಮುಂದಾಳುಗಳಿಗೆ ಪ್ರಾಂತದ ಅತಿರೇಕವಾದಿ ತತ್ವಗಳನ್ನು ಹಿಡಿತದಲ್ಲಿಟ್ಟುಕೊಳ್ಳುವದು ಅಸಾಧ್ಯವಾಗಿ ಯಾವ ಭಯದಿಂದ ಪ್ರಾಂತೀಕರಣವನ್ನು ಮುಂದೆ ತಳ್ಳಲಾಗುತ್ತಿದೆಯೋ ಅದೇ ಸತ್ಯವಾಗಿ ಪರಿಣಮಿಸೀತು.

ಭದ್ರತಾ ಮಂಡಲ ಮತ್ತು ಕಾಶ್ಮೀರ

ಯುಕ್ತರಾಷ್ಟ್ರ ಸಭೆಯ ಮುಂದೆ ಬಂದ ಇತರ ಅನೇಕ ಪ್ರಶ್ನೆಗಳಿಗಾದ ಗತಿಯಿಂದ ಕಾಶ್ಮೀರ ಪ್ರಶ್ನೆ ಪಾರಾಗವ ಲಕ್ಷಣ ಕಾಣದಿರುವದು ತೀರ ವಿಷಾದದ ಸಂಗತಿ. ಹಟ ಕೂಟಗಳಲ್ಲಾಗುವಂತೆ ಯಾವುದೇ ನಿರ್ಣಯಕ್ಕೆ ಬಾರದೆ ಭದ್ರತಾ ಮಂಡಲದ ಸಭೆಗಳು ಮುಂದೆ ಬೀಳುತ ಹೋಗುತ್ತಿವೆ. ಹಿಂದೀ ಪ್ರತಿನಿಧಿಯಾದ ಶ್ರೀ. ಸೆಟಲವಾಡರ ಪ್ರಬಲ ವಾಕ್ಸರಣಿಯ ಫಲವಾಗಿ, ಪಾಕಿಸ್ತಾನ ವಿದೇಶ ಮಂತ್ರಿ ಜಾಫರುಲ್ಲಾಖಾನರು ಕಾಶ್ಮೀರ ಪ್ರಶ್ನೆಯೊಡನೆ ಜುನಾಗಡ ಮೊದಲಾದ ಸಂಬಂಧವಿಲ್ಲದ ಸಮಸ್ಯೆಗಳನ್ನೂ ಕಲಸಿ ಭದ್ರತಾ ಮಂಡಲವನ್ನು ಗೊಂದಲದಲ್ಲಿ ಹಾಕಬೇಕೆಂದು ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದವು. ಬ್ರಿಟನ್, ರಶಿಯಾಗಳು ಕೂಡ ಕಾಶ್ಮೀರದ ಪ್ರಶ್ನೆಯನ್ನೆ ಪ್ರತ್ಯೇಕವಾಗಿ ಎತ್ತಿಟ್ಟು ಮೊದಲು ಬಿಡಿಸಬೇಕೆಂಬ ಹಿಂದೀಯರ ವಾದಕ್ಕೆ ಬೆಂಬಲವಿತ್ತವು. ಪರಿಣಾಮವಾಗಿ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಕಾಶ್ಮೀರ ಪ್ರಶ್ನೆಯನ್ನು ಜನಮತ ಗಣನೆಯಿಂದ ಬಿಡಿಸಬೇಕೆಂದು ಒಪ್ಪಿದವು. ಆದರೆ ಅದರ ನಂತರ ಮಂಡಲದ ಸದಸ್ಯರು ತಿರುಗಿ ಅಸ್ಥಿರ ಚಿತ್ತರಾಗಿರುವದರಿಂದಲೋ ಏನೊ, ಪಾಕಿಸ್ತಾನದ ನಿಲುವೆ ಉದ್ಧತವಾಗತೊಡಗಿದೆ. ಕಾಶ್ಮೀರದಲ್ಲಿ ಜನಮತ ಗಣನೆಯಾಗುವ ಮೊದಲು "ಹೊರಗಿನ" ಸೈನ್ಯಗಳು — ಅಂದರೆ ಹಿಂದೀ ಸೈನ್ಯಗಳುಸಹಿತ— ಕಾಶ್ಮೀರದಿಂದ ಹೊರಟು ಹೋಗಬೇಕು, ಶೇಖ ಅಬ್ದುಲ್ಲಾರ ಸರಕಾರ ರಾಜೀನಾಮೆ ಕೊಟ್ಟು ಬೇರೆ "ನಿಷ್ಪಕ್ಷಪಾತ" ಆಡಳಿತ ಸ್ಥಾಪಿಸಲ್ಪಡಬೇಕು, ಇತ್ಯಾದಿ ಕರಾರುಗಳನ್ನು ಹಾಕುತ್ತಿರುವದರಿಂದ ಈ ಬಗ್ಗೆ ನಡೆದ ದುಂಡುಮೇಜಿನ ಪರಿಷತ್ತುಗಳು ಈವರೆಗೆ ನಿಷ್ಫಲವಾಗುತ್ತಲೆ ನಡೆದಿವೆ. ಪರಿಸ್ಥಿತಿಯನ್ನು ಭದ್ರತಾ ಮಂಡಲದ ತ್ರಯಸ್ಥರು ಕಾಶ್ಮೀರದ ಸಿರೀಕ್ಷಣೆ ಮಾಡುವದಕ್ಕೆ ಹಿಂದುಸ್ತಾನ ಸರಕಾರದ ಸಮ್ಮತಿಯಿದ್ದರೂ ಹಿಂದೀ ಸೈನ್ಯಗಳು ಹಿಂತೆಗೆದುಕೊಳ್ಳಲ್ಪಡಬೇಕು ಮತ್ತು ಶೇಖ ಅಬ್ದುಲ್ಲಾರ ಆಡಳಿತ ಹೋಗಬೇಕೆಂಬುದಕ್ಕೆ ಅದು ಒಪ್ಪಲಾರದು. ಕಾಶ್ಮೀರ ಸಂಸ್ಥಾನದ ಜನಪ್ರತಿನಿಧಿಗಳೂ ಮಹಾರಾಜರೂ ಒಪ್ಪಿ ಹಿಂದುಸ್ತಾನದಲ್ಲಿ ಆ ಸಂಸ್ಥಾನ ಸೇರ್ಪಡೆ ಹೊಂದಿರುವದರಿಂದ ಹಿಂದೀ ಸೈನ್ಯಗಳು ಅಲ್ಲಿಂದ ಹೊರಬೀಳಲಾರವು. ಏಕೆಂದರೆ ಕಾಶ್ಮೀರದಲ್ಲಿನ ಕಾಯದೆ ಸುವ್ಯವಸ್ಥೆಯ ನೈತಿಕ ಹೊಣೆ ಹಿಂದುಸ್ತಾನದ ಮೇಲಿದೆ. ಶೇಖ ಅಬ್ದುಲ್ಲಾರ ಸರಕಾರವಾದವರೂ ಕ್ರಾಂತಿ ಒಳಸಂಚುಗಳಿಂದ ಸ್ಥಾಪಿಸಲ್ಪಟ್ಟಿರದೆ ಶಾಸನಬದ್ಧ ರೀತಿಯಿಂದ ಸ್ಥಾಪಿಸಲ್ಪಟ್ಟದ್ದು, ಮತಗಣನೆಯ ಪರಿಣಾಮ ತದ್ವಿರುದ್ಧವಾಗಿ ಸಿದ್ಧಪಡಿಸಿದ ಹೊರತು ಆ ಸರಕಾರಕ್ಕೆ ಜನತೆಯ ಬೆಂಬಲವಿಲ್ಲವೆಂದು ಹೇಳುವದು ಸಮಂಜಸವಾಗಲಾರದು. ಜನಮತಗಣನೆಯ ಮೊದಲು ಶೇಖ ಅಬ್ದುಲ್ಲಾರ ಸರಕಾರ ರಾಜೀನಾಮೆ ಕೊಡಬೇಕಾದರೆ ಗ್ರೀಸಿನಲ್ಲಿ ಕಳೆದ ವರ್ಷ ಅರಸೊತ್ತಿಗೆಯ ವಿಷಯದಲ್ಲಾದ ಮತಗಣನೆ ಕೇವಲ ಅನ್ಯಾಯದ್ದೆಂದು ಆಂಗ್ಲೋ ಅಮೇರಿಕನ್ನರು ಒಪ್ಪಬೇಕಾದೀತು. ಮತ್ತು ಅದಕ್ಕೆ ಸೈಗೂಟ್ಟಿದ ಯುಕ್ತರಾಷ್ಟ್ರ ಸಂಸ್ಥೆಯೂ ಉತ್ತರ ಕೊಡಬೇಕಾದೀತು. ಏಕೆಂದರೆ ಅಲ್ಲಿ ಸರಕಾರದ ಮತ್ತು ಬ್ರಿಟಿಶ ಸೈನ್ಯಗಳ ಕೈಕೆಳಗೆ ನಡೆದ ಆ ಮತಗಣನೆಗೂ ಎಡ ಪಕ್ಷಗಳು ಆಕ್ಷೇಪವೆತ್ತಿದ್ದವು. ಹೀಗಿದ್ದರೂ ಭದ್ರತಾ ಮಂಡಲದ ಅಧ್ಯಕ್ಷರು ಪಾಕಿಸ್ತಾನದ ವಾದಕ್ಕೆ ಅನುಕೂಲರಿರುವರೆಂದು ಹೇಳಲಾಗಿದೆ. ಭದ್ರತಾ ಮಂಡಲದ ಅಭಿಪ್ರಾಯವೂ ಹೀಗೆಯೆ ಇದ್ದಲ್ಲಿ ಕಾಶ್ಮೀರದಲ್ಲಿ ಮತಗಣನೆಯ ಬದಲು ಉಗ್ರ ಅಂತರ್ಯುದ್ಧಕ್ಕೆ ಅದು ಉತ್ತೇಜನ ಕೊಟ್ಟಂತಾಗುವದು. ದಾಳಿಗಾರರ ಮೇಲೆ ತನ್ನ ಹಿಡಿತವಿಲ್ಲ, ಅವರೊಡನೆ ಸಂಬಂಧವಿಲ್ಲ ಎಂದು ಪಾಕಿಸ್ತಾನ ಸಾರಿರ ವಾಗ ಹಿಂದೀ ಸೈನ್ಯ ತಿರುಗಿ ಹೋದರೆ ಅವರೂ ತಿರುಗಿ ಹೋಗುವರೆಂದು ಪಾಕಿಸ್ತಾನ ಹೇಗೆ ಆಶ್ವಾಸನ ಕೊಡುವದು? ಭದ್ರತಾ ಮಂಡಲದಲ್ಲಿ ಈ ಪ್ರಶ್ನೆ ಚರ್ಚೆಯಲ್ಲಿರುವಾಗಲೆ ಪಾಕಿಸ್ತಾನ ಗಡಿಯಿಂದ ಪಠಾಣ ಪುಂಡರು ಹಿಂದೀ ಒಕ್ಕೂಟದಲ್ಲಿ ಸೇರಿದ ಜೈಸಲಮೀರ ಸಂಸ್ಥಾನದ ಮೇಲೆ ದಾಳಿ ಮಾಡಿದರೆಂದು ಸುದ್ದಿ ಬಂದಿದೆ. ಪಾಕಿಸ್ತಾನದ ಸದಾಶಯಕ್ಕೆ ಇದಕ್ಕಿಂತ ಹೆಚ್ಚಿನ ಪ್ರಮಾಣ ಬೇಕೆ! ಭದ್ರತಾ ಮಂಡಲ ನ್ಯಾಯ ಕೊಡಲಾರದಾದರೆ ತೆಪ್ಪಗೆ ಕುಳಿತು ಉಭಯ ಪಕ್ಷಗಳಿಗೆ ಶಕ್ತಿ ಪರೀಕ್ಷೆ ಮಾಡಲು ದಾರಿಬಿಡುವದೊಳಿತಲ್ಲವೇ?

ಶಿಕ್ಷಣ ಪರಿಷತ್ತಿನ ತೀರ್ಮಾನಗಳು

ಕಳೆದ ವಾರ ಹೊಸದಿಲ್ಲಿಯಲ್ಲಿ ಹಿಂದುಸ್ತಾನದ ಶಿಕ್ಷಣ ಮಂತ್ರಿ ಡಾ. ಆಝಾದರ ಅಧ್ಯಕ್ಷತೆಯಲ್ಲಿ ನಡೆದ ಅ. ಭಾ. ಶಿಕ್ಷಣ ಪರಿಷತ್ತು ಈ ನಿರಕ್ಷರ ದೇಶಕ್ಕೆ ಬಹಳ ಅವಶ್ಯಕವೆನಿಸಿದ ಕೆಲ ತೀರ್ಮಾನಗಳನ್ನು ಮಾಡಿತು. ಅವುಗಳಲ್ಲಿ ಎಲ್ಲಕ್ಕಿಂತ ಮಹತ್ವದ್ದೆಂದರೆ, ಸಾರ್ಜಂಟ ವರದಿಯಲ್ಲಿ ಹಿಂದುಸ್ತಾನದಲ್ಲಿ ಸಾರ್ವತ್ರಿಕ ಶಿಕ್ಷಣವನ್ನು ಹಬ್ಬಿಸಲು ಹಾಕಿದ್ದ ೪೦ ವರ್ಷಗಳ ಅವಧಿಯನ್ನು ತಗ್ಗಿಸಿ ಅದಕ್ಕಿಂತ ಮೊದಲೇ ಆ ಕೆಲಸವನ್ನು ಸಾಧಿಸಬೇಕೆಂದು ನಿರ್ಣಯಿಸಿದ್ದು. ೨೦೦ ವರ್ಷಗಳ ವಿದೇಶಿ ಪ್ರಭುತ್ವದಿಂದ ಶೈಕ್ಷಣಿಕ ದುರವಸ್ಥೆಯಲ್ಲಿ ಕೊಳೆಯುತ್ತ ಬಂದ ಈ ದೇಶ ಭರದಿಂದ ಸಾಗುತ್ತಿರುವ ಜಗತ್ತಿನಲ್ಲಿ ಅಭಿಮಾನದಿಂದ ಬಾಳಬೇಕಾದರೆ ಸಾರ್ವತ್ರಿಕ ಶಿಕ್ಷಣಕ್ಕೆ ೪೦ ವರ್ಷಗಳ ಅವಧಿ ಹಾಕಿಕೊಂಡರೆ ನಡೆಯದು. ಅಷ್ಟು ದೀರ್ಘಾವಧಿಯಲ್ಲಿ ಹೊಸ ತೊಡಕುಗಳು ಹುಟ್ಟಿ ಬಂದು ಪ್ರಗತಿಯನ್ನೇ ತಡೆದುಬಿಡಬಹುದು. ಆದರಿಂದ ಪರಿಷತ್ತಿನ ಈ ತೀರ್ಮಾನವನ್ನು ದೇಶ ಒಮ್ಮತದಿಂದ ಸ್ವಾಗತಿಸುವದರಲ್ಲಿ ಸಂಶಯವಿಲ್ಲ. ಅದೇ ಮೇರೆಗೆ ಒತ್ತಾಯದ ಮೂಲ ಶಿಕ್ಷಣದ ಅವಧಿ ಸಾರ್ಜಂಟ ಸಮಿತಿಯ ಅಭಿಪ್ರಾಯದಲ್ಲಿ ಎಂಟು ವರ್ಷದ್ದಾಗಿರಬೇಕೆಂದಿದ್ದರೂ ಅನೇಕ ವ್ಯಾವಹಾರಿಕ ಅಡಚಣೆಗಳಿಂದ ಅದನ್ನು ಐದು ವರ್ಷಕ್ಕಿಳಿಸಬೇಕೆಂದೂ ಪ್ರಾರಂಭ ದಶೆಯಲ್ಲಿ ಮೂಲ ಶಿಕ್ಷಕರ ತರಬೇತಿಯ ನಿಯಮಗಳನ್ನು ಸ್ವಲ್ಪ ಸಡಲಿಸಬೇಕೆಂದೂ ಪರಿಷತ್ತು ಸೂಚಿಸಿದ್ದು ಮೂಲ ಶಿಕ್ಷಣ ಸಾಕಷ್ಟು ಶೀಘ್ರವಾಗಿ ವ್ಯಾಪಿಸುವ ಮತ್ತು ಅವಶ್ಯ ಸಂಖ್ಯೆಯಲ್ಲಿ ಶಿಕ್ಷಕರನ್ನು ದೊರಕಿಸುವ ದೃಷ್ಟಿಯಿಂದ ವಿಹಿತವೇ ಆಗಿದೆ. ಆದರೆ ಪರಿಷತ್ತಿನಿಂದ ಈ ಸಂಧಿಕಾಲದಲ್ಲಿ ಸ್ಫುಟವಾದ ಮಾರ್ಗದರ್ಶನವನ್ನೂ ಶೀಘ್ರವಾದ ಕಾರ್ಯವನ್ನೂ ಹಾರೈಸಿದವರಿಗೆ ಸ್ವಲ್ಪ ನಿರಾಶೆಯೆ ಆಯಿತು. ಸಾರ್ವತ್ರಿಕ ಶಿಕ್ಷಣವನ್ನು ಬೇಗನೆ ಕೈಗೂಡಿಸಿಕೊಳ್ಳುವದವಶ್ಯವಾಗಿದ್ದರೂ ಸಾಕಷ್ಟು ಶಿಕ್ಷಕರ ತರಬೇತಿಯೇ ಮೊದಲಾದ ಅಡಚಣೆಗಳನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಪರಿಷತ್ತು ಮೌನವಾಗಿದ್ದುದು ಆಶ್ಚರ್ಯದ ಸಂಗತಿ. ಇದೂ ಅಲ್ಲದೆ ಶಿಕ್ಷಣ ಮಾಧ್ಯಮದ ವಿಷಯದಲ್ಲಿಯೂ ಪರಿಷತ್ತಿನಿಂದ ಸರಿಯಾದ ಮಾರ್ಗದರ್ಶನ ಲಭಿಸಲಿಲ್ಲ. ಮಾತೃಭಾಷೆ, ಪ್ರಾಂತಭಾಷೆ, ರಾಷ್ಟ್ರಭಾಷೆ ಮೊದಲಾದವುಗಳ ಅನ್ಯೋನ್ಯಸ್ಥಾನಮಾನಗಳನ್ನು ಚರ್ಚಿಸಿ ಒಡನೆ ನಿರ್ಣಯಕ್ಕೆ ಬರುವದು ಅವಶ್ಯವಾಗಿತ್ತು. ಬದಲಿಗೆ ಅದು ಈ ಬಗ್ಗೆ ಒಂದು ಸಮಿತಿಯನ್ನು ಮಾತ್ರ ನೇಮಿಸಿದೆ. ವಿಶ್ವವಿದ್ಯಾಲಯ ಹಾಗು ಮಾಧ್ಯಮಿಕ ಶಿಕ್ಷಣಗಳು ಕುಂಠಿತವಾಗಬಾರದೆಂದಿದ್ದರೆ ಈ ಸಮಿತಿ ಬೇಗನೆ ತನ್ನ ನಿರ್ಣಯವನ್ನು ಸಾರುವದು ಅವಶ್ಯ. ವಿವಿಧ ಅವಸ್ಥೆಗಳಲ್ಲಿ ಶಿಕ್ಷಣಕ್ಕೆ ಬೇಕಾದ ಧನಸಹಾಯದ ವಿಚಾರವನ್ನೂ ಮಾಧ್ಯಮಿಕ ಶಿಕ್ಷಣದ ಸಮಸ್ಯೆಗಳನ್ನೂ ವಿಚಾರಿಸಲು ಎರಡು ಸಮಿತಿಗಳನ್ನು ನೇಮಿಸಿದ್ದು ಪರಿಷತ್ತು ಮಾಡಿದ ಇನ್ನೊಂದು ಅವಶ್ಯಕ ಕೆಲಸ. ಆ ಸಮಿತಿಗಳು ಬೇಗನೆ ಕಾರ್ಯಪ್ರವೃತ್ತವಾಗಿ ದಾರಿದೋರುವವೆಂದು ಹಾರೈಸುತ್ತೇವೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕೆಂದು ಅವರ ಸಿನೇಟ ಸಭೆ ತೀರ್ಮಾನಿಸಿದ ಸುದ್ದಿಯನ್ನು ಎಲ್ಲರೂ ಸ್ವಾಗತಿಸದಿರರು. ಪರಕೀಯರ ಪ್ರಭುತ್ವದೊಂದಿಗೆ ಬಂದ ಸ್ವಭಾಷೆಯ ಉಪೇಕ್ಷೆಯ ಫಲವಾಗಿ ನಮ್ಮ ದೇಶದ ಸಂಸ್ಕೃತಿ ಸಾಹಿತ್ಯಗಳನ್ನು ಕೂಡ ಇಂಗ್ಲೀಷಿನಮೂಲಕ ಪರಿಚಯಮಾಡಿಕೊಳ್ಳುವ ನಾಚಿಕೆಗೇಡಿ ಸ್ಥಿತಿ ನಮಗುಂಟಾಗಿತ್ತು. ಆದರೆ ದೇಶದಲ್ಲಿ ಉಂಟಾದ ರಾಜಕೀಯ ಜಾಗ್ರತಿಯ ಸಂಗಡ ಸ್ವಾಭಿಮಾನ ಸ್ವಭಾಷಾಭಿಮಾನಗಳೂ ಬೆಳೆದು ಬಂದುದರಿಂದ ಕತ್ತಲಲ್ಲಿದ್ದ ಕನ್ನಡಕ್ಕೆ ತನ್ನ ತೇಜಸ್ಸನ್ನು ತಿರುಗಿ ಮೆರೆಸಲು ಅವಕಾಶವಾಯಿತು. ಈಗ ಎರಡು ಮೂರು ದಶಕಗಳಿಂದ ಇತರ ಭಾರತೀಯ ಭಾಷೆಗಳಲ್ಲಿ ಆದಂತೆ ಕನ್ನಡದ ಸಾಹಿತ್ಯದಲ್ಲಿಯೂ ಆದ ಪ್ರಗತಿ ಈ ಜಾಗ್ರತಿಯ ದ್ಯೋತಕವಾಗಿದೆ. ಆದರೆ ಪ್ರಭುತ್ವದವರು ನಡೆಸುವ ಶಿಕ್ಷಣ ಸಂಸ್ಥೆಗಳು ಮಾತ್ರ ಇತ್ತೀಚಿಗಿನ ವರೆಗೂ ಹಳೆಯ ಕೊಳಚೆಯಿಂದ ಕಾಲು ತೀಳಲಾರದೆ ಬಿದ್ದಿದ್ದವು. ಇದರಿಂದ ಕನ್ನಡದ ಸರ್ವತೋಮುಖ ಪ್ರಗತಿಗೆ ಆತಂಕವಾಗಿತ್ತೆಂಬಲ್ಲಿ ಸಂಶಯವೇ ಇಲ್ಲ. ತಾಂತ್ರಿಕ ಪ್ರಗತಿ-ಪರಿಭಾಷೆಗಳ ವಿಷಯವಲ್ಲಂತೂ ಕನ್ನಡ ತೀರ ಹಿಂದುಳಿಯಿತು. ಆದ ಪ್ರಗತಿಯೂ ಅಸ್ತವ್ಯಸ್ತವಾಗಿತ್ತು. ಅದರೂ ಅನೇಕ ಶಿಕ್ಷಣ ಪ್ರಾರಂಭಿಸಿಕೊಳ್ಳುವವರಿಗೆ ಯಾವುದೇ ವಿಷಯವನ್ನು ಪರಭಾಷೆಯಲ್ಲಿ ಕಲಿಯುವದಕ್ಕಿಂತ ಸ್ವಭಾಷೆಯಲ್ಲಿ ಕಲಿಯುವದು ಸುಲಭವೂ ಸರಳವಾದ ಸತ್ಯ ಮನಸಿಗೆ ಹೊಕ್ಕಿರಲಿಲ್ಲ. ಸ್ವಾತಂತ್ರ್ಯ ಪ್ರಭಾವದಲ್ಲಿ ಈಗೀಗ ಆ ಭಾವನೆ ಸಂಶಯ ಕೊಚ್ಚಿಕೊಂಡು ಹೋಗತೊಡಗಿದೆ. ಮೈಸೂರು ವಿಶ್ವವಿದ್ಯಾನಿಲಯದವರು ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲು ನಿರ್ಧರಿಸಿದ್ದಕ್ಕೆ ಮೈಸೂರು ಸರಕಾರ ತನ್ನ ಸಮ್ಮತಿ ಮುದ್ರೆಯನ್ನೊತ್ತಿ ಅವಶ್ಯಕ ಯೋಜನೆಯನ್ನು ಬಳಕೆಯಲ್ಲಿ ತರುವದವಶ್ಯ.

ಔದ್ಯೋಗಿಕ ಶಾಂತಿ

ಮೊನ್ನಿನ ಕಾಂಗ್ರೆಸ್ ಕಾರ್ಯ ಸಮಿತಿಯ ಅಧಿವೇಶನದಲ್ಲಿ ಸ್ವೀಕೃತವಾದ ಔದ್ಯೋಗಿಕ ಶಾಂತಿಗೆ ಸಂಬಂಧಿಸಿದ ಗೊತ್ತುವಳಿಯ ಮಹತ್ವವನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೆ. ಕಾಲಿಲ್ಲದ ಯುದ್ಧದಲ್ಲಿ ಒತ್ತಾಯದಿಂದ ಭಾಗವಹಿಸಿದ ಫಲವಾಗಿ ಈ ದೇಶದ ಆರ್ಥಿಕ ಪರಿಸ್ಥಿತಿ ತೀರ ವಿಪನ್ನವಾಗಿ ಹೋಗಿದೆ. ಈ ದುಃಸ್ಥಿತಿಯಿಂದ ನಾವು ಮೇಲೆದ್ದು ಬರಬೇಕಾದರೆ ಎಲ್ಲರೀತಿಯಿಂದಲೂ ಉತ್ಪಾದನೆಯನ್ನು ಹೆಚ್ಚಿಸುವದೊಂದೇ ಉಪಾಯ. ಕೂಲಿಕಾರರ ಸಂಪುಗಳು, ಒಡೆಯರು ಕೂಲಿಕಾರರನ್ನು ಹೊರಗಿಕ್ಕಿ ಕೀಲಿ ಹಾಕುವದು ಮೊದಲಾದ ಔದ್ಯೋಗಿಕ ತಿಕ್ಕಾಟಗಳಿಂದ ಸಂಬಂಧಪಟ್ಟವರಿಗಷ್ಟೇ ಅಲ್ಲ, ಇಡಿ ದೇಶಕ್ಕೆ ಹಾನಿಯಾಗುವದು. ಇದನ್ನು ತಡೆಯುವ ಸಲುವಾಗಿ ಮೂರು ವರ್ಷಗಳ ವರೆಗೆ ಇಂಥ ತಿಕ್ಕಾಟಗಳಿಗೆ ಅವಕಾಶ ಕೊಡದೆ, ಕೇವಲ ಉತ್ಪಾದನೆಯನ್ನು ಹೆಚ್ಚಿಸಲು ಒಡೆಯರೂ ಕೂಲಿಕಾರರೂ ತಮ್ಮ ಸತ್ವವನ್ನು ವಿನಿಯೋಗಿಸಬೇಕೆಂದು ಕೆಲವಾರ ಕೆಳಗೆ ದಿಲ್ಲಿಯಲ್ಲಿ ಸೇರಿದ ಕೂಲಿಕಾರ ಹಾಗು ಒಡೆಯರ ಪ್ರತಿನಿಧಿಗಳನ್ನೊಳಗೊಂಡ ಔದ್ಯೋಗಿಕ ಪರಿಷತ್ತು ತೀರ್ಮಾನಿಸಿತು. ಆದರೆ ಆ ಒಪ್ಪಂದದ ಮೇಲಿನ ಮಸಿ ಆರುವ ಮೊದಲೇ ಕ್ಷುಲ್ಲಕ ಕಾರಣಗಳಿಗಾಗಿ ಮುಂಬಯಿ ಮೊದಲಾದೆಡೆಗಳಲ್ಲಿ ಕೂಲಿಕಾರ ಸಂಪುಗಳು ನಡೆದು ಈಗ ಎಲ್ಲೆಲ್ಲೂ ಹಾವಳಿ ಮಾಡುತ್ತಿವೆ. ಇದಕ್ಕೆ ಮುಖ್ಯವಾಗಿ ಕೂಲಿಕಾರರ ಅಧಿಕಾರಲಾಲಸಿ ಮುಂದಾಳುಗಳ ಕೈವಾಡವೇ ಕಾರಣವೆಂದು ಹೇಳಬೇಕಾಗಿದೆ. ಮುಂಬರುವ ಚುನಾವಣೆಗಳಲ್ಲಿ ವಯಸ್ಕ ಮತದಾನ ಪದ್ಧತಿಯು ಪ್ರಯೋಗವಾಗುವದರಿಂದ ಅರಿಯದ ಕೂಲಿಕಾರರಿಗೆ ಸಿಕ್ಕಾಬಟ್ಟೆ ಆಶ್ವಾಸನ ಕೊಟ್ಟು ಅವರ ಬೆಂಬಲದಿಂದ ಅಧಿಕಾರದ ಪೀಠವನ್ನು ಏರುವ ಹಂಬಲು ಅನೇಕ ಮುಂದಾಳುಗಳಿಗೆ ಹಿಡಿದಿದೆ. ಇದರಿಂದ ಈಗಾಗಲೆ ದುರ್ಲಭವಾಗಿರುವ ಅವಶ್ಯಕ ವಸ್ತುಗಳು ಇನ್ನಷ್ಟು ದುರ್ಲಭವಾಗುವದು ಖಂಡಿತ. ಆದರಿಂದ "ಇಂದಿನ ಸನ್ನಿವೇಶದಲ್ಲಿ ಉತ್ಪಾದನೆಯನ್ನು ಯಾವುದೇ ರೀತಿಯಿಂದ ಪ್ರತಿಬಂಧಿಸುವದು ಸಮಾಜಕ್ಕೆ ವಿಘಾತಕವೂ ಆಹ್ವಾನ ರೂಪವೂ ಆಗಿದೆಯೆಂದು" ಕಾರ್ಯ ಸಮಿತಿ ಎಚ್ಚರಿಸಿರುವದು ಸಮಯೋಚಿತವಾಗಿದೆ. ಸಂಪುಗಳಿಂದ ಕೂಲಿಕಾರರು ಯಾವ ಆರ್ಥಿಕ ಸೌಲಭ್ಯವನ್ನು ಸಂಪಾದಿಸಬೇಕೆನ್ನುವರೊ ಅದು ಲಭ್ಯವಾದರೂ ಕೊರತೆಯ ರೋಗ ಹಿಡಿದಿರುವ ದೇಶದಲ್ಲಿ ಪೇಟೆಯ ಮೇಲೆ ಅದರ ಪರಿಣಾಮ ಬಿದ್ದು ಬೆಲೆಗಳು ಮತ್ತೆ ಏರಿ ಕೂಲಿಕಾರರ ಇಚ್ಛಿತ ಉದ್ದೇಶಕ್ಕೇ ಕೊಡಲಿಬೀಳುವದೆಂಬುದನ್ನು ಕೂಲಿಕಾರರು ಮನಗಂಡು ಉತ್ಪಾದನೆಯನ್ನು ಹೆಚ್ಚಿಸಲು ಪ್ರವೃತ್ತರಾಗಬೇಕು. ಇಲ್ಲದಿದ್ದರೆ ಕೂಲಿಕಾರರ ಉತ್ಪನ್ನದ ಮಟ್ಟ ಏರಬಹುದೇ ಹೊರತು ಜೀವನದ ಮಟ್ಟ ಏರಲಾರದೆಂದು ಅವರು ಚನ್ನಾಗಿ ನೆನೆಯಬೇಕು. ಅದೇ ಪ್ರಕಾರ ಒಡೆಯರಾದರೂ ಕೂಲಿಕಾರರ ನ್ಯಾಯ್ಯವಾದ ಬೇಡಿಕೆಗಳನ್ನೂ ಸುಖ ಸೌಕರ್ಯಗಳನ್ನೂ ಪೂರೈಸಿ ಯೋಗ್ಯ ವಾತಾವರಣವನ್ನು ಕಲ್ಪಿಸಬೇಕೆಂಬ ಕಾರ್ಯ ಸಮಿತಿಯ ಸೂಚನೆ ಗಮನಾರ್ಹವಾಗಿದೆ. ಇದಕ್ಕಾಗಿ ಕೂಲಿಕಾರ ವಿವಾದಗಳಲ್ಲಿ ಕೈಹಾಕಲು ಅಧಿಕಾರಸಂಪನ್ನವಾದ ಸಮಿತಿ, ನ್ಯಾಯಮಂಡಲಗಳನ್ನು ಸರಕಾರ ಬೇಗನೆ ರಚಿಸಬೇಕು. ಹೀಗಾದರೆ ಮಾತ್ರ ಔದ್ಯೋಗಿಕ ತಿಕ್ಕಾಟಗಳನ್ನು ತಡೆಯಬಹುದು. ಕಾಂಗ್ರೆಸ್ಸಿಗರೂ ಸಮಿತಿಯ ಆದೇಶವನ್ನು ಗಮನಿಸಿ ಎಲ್ಲಿಯೂ ವರ್ಗಕಲಹದ ಸಿದ್ಧಾಂತಕ್ಕೆ ಮಾರುಹೋಗದೆ ವರ್ಗಸಾಮರಸ್ಯಕ್ಕಾಗಿ ಹೋರುವ ಕೂಲಿಕಾರ ಸಂಘಟನೆಯನ್ನು ಕೈಕೊಳ್ಳುವದವಶ್ಯ. ರಾಷ್ಟ್ರೀಯ ಮಜದೂರ ಸಂಘ ಇದಕ್ಕೆ ಆದರ್ಶವಾದ ಸಂಘಟನೆ. ಆದರೆ ಇದರ ಕೆಳಗೆ ಕೂಲಿಕಾರ ಸಂಘಟನೆ ಮಾಡುವವರು ಕೇವಲ ಕಾಂಗ್ರೆಸ ಸರಕಾರದ ಮುಖನೋಡದೆ ನಿಜವಾದ ಸಂಘಟನೆಗೆ ಕೈಹಚ್ಚುವದವಶ್ಯ. ಇಲ್ಲದಿದ್ದರೆ ಮೊದಲೇ ಇದರಲ್ಲಿ ಪ್ರವೇಶಿಸಿದ ರಾಜಕೀಯ ವಿರೋಧಿಗಳನ್ನು ಸೋಲಿಸುವದು ಸಾಧ್ಯವಾಗದು.

ಘಟನಾಸಮಿತಿಯ ಒಂದುದಿನದ ಅಧಿವೇಶನ

ಹಿಂದುಸ್ಥಾನದ ಘಟನಾ ಸಮಿತಿಯ ಒಂದು ದಿನದ ಅಧಿವೇಶನವು [illegible] ಮಂಗಳವಾರ ತಾ. ಬಾಬೂರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿ ಎರಡು ಗೊತ್ತುವಳಿಗಳನ್ನು ಸಭೆಯು [illegible] ಅನೇಕ [illegible] ಸ್ವೀಕರಿಸಿತು.

ಈ ಸಭೆಯ ಪ್ರಮುಖ ಸದಸ್ಯರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ ಮತ್ತು ಶ್ರೀ ಕೆ. ಎಂ. ಮುನಶಿ ಅವರು ಅಧಿವೇಶನಕ್ಕೆ ಬಂದಿರಲಿಲ್ಲ. ಮೈಸೂರಿನಿಂದ ಬಂದಿದ್ದ ಹೊಸ ಸದಸ್ಯರಾದ ಶ್ರೀ ಹನುಮಂತಯ್ಯ, ಶ್ರೀ ಸಿದ್ದಲಿಂಗಯ್ಯ ಅವರು ಸದಸ್ಯರ [illegible] ಮಧ್ಯದಲ್ಲಿ ಸಹಿ [illegible] ಹಾಕಿದರು. [illegible] ಈ ಸಭೆ ಅನುಮೋದಿಸಿದರು.

ಕೊನೆಯಲ್ಲಿ ಗೊತ್ತುವಳಿಯನ್ನು ಶ್ರೀ ಅನಂತಶಯನಂ ಅಯ್ಯಂಗಾರರು ಮಂಡಿಸಿದರು. ಘಟನಾ ಸಮಿತಿಯಲ್ಲಿ ಪಶ್ಚಿಮ ಬಂಗಾಲಕ್ಕೆ ಇನ್ನೆರಡು ಪ್ರತಿನಿಧಿಗಳನ್ನು (ಒಂದು ಸಾಮಾನ್ಯ ಇನ್ನೊಂದು ಮುಸ್ಲಿಂ) ಕೊಡಬೇಕೆಂಬುದಾಗಿ ಅವರ ಅಭಿಪ್ರಾಯವಿತ್ತು.

ಈ ಬಗ್ಗೆ ಸ್ಪಷ್ಟೀಕರಣ ಮಾಡುತ್ತಾ ಅಯ್ಯಂಗಾರರು ಅಖಂಡ ಬಂಗಾಲದ ಕಟ್ಟಾ ವಿಭಜನೆಯಾದಾಗ ಪ. ಬಂಗಾಲಕ್ಕೆ ೧೫ ಸಾಮಾನ್ಯ ಮತ್ತು ೪ ಮುಸಲ್ಮಾನ ಸ್ಥಳಗಳನ್ನು ಕೊಡಲಾಗಿತ್ತು. ಆದರೆ ರಾಡ್‌ಕ್ಲಿಫ ನಿರ್ಣಯದಂತೆ ಅದರ ವಿಸ್ತಾರ ಮತ್ತು ಜನಸಂಖ್ಯೆ ಹೆಚ್ಚಿದೆ. ಕಾರಣ ಒಂದು ಸಾಮಾನ್ಯ ಒಂದು ಮುಸ್ಲಿಂ ಹೀಗೆ ಎರಡು ಸ್ಥಳ ಹೆಚ್ಚಿಗೆ ಮಾಡುವದು ಅವಶ್ಯ" ಎಂದು ಮೊದಲಾಗಿ ತಿಳಿಸಿದರು. ಒಂದೆರಡು ತಿದ್ದುಪಡಿಗಳ ಕೊನೆಗೆ ಅವರ ಗೊತ್ತುವಳಿ ಸ್ವೀಕೃತವಾಯಿತು.

ಅದರಂತೆ ಇನ್ನೊಂದು ಗೊತ್ತುವಳಿಯನ್ನು ಶ್ರೀ ಜ್ಞಾನಿ ಗುರುಮುಖಸಿಂಗರು, ಪೂರ್ವ ಪಂಜಾಬದ ಪ್ರತಿನಿಧಿಗಳ ಸ್ಥಳಗಳನ್ನು ಎರಡು ಸಾಮಾನ್ಯ ಮತ್ತು ಎರಡು ಸಿಖ ಸ್ಥಳಗಳಿಂದ ಹೆಚ್ಚಿಸಬೇಕೆಂದು ಸೂಚಿಸಿದರು.

ಪಂಜಾಬದ ವಿಭಜನೆಯ ನಂತರ ಪೂರ್ವ ಪಂಜಾಬದಿಂದ ಅನೇಕ ಮುಸಲ್ಮಾನರು ಪಾಕಿಸ್ತಾನಕ್ಕೆ ಹೋಗಿದ್ದಾರೆ. ಈಗ ಆ ಪ್ರಾಂತಕ್ಕೆ ೬ ಸಾಮಾನ್ಯ ೪ ಮುಸ್ಲಿಂ ಮತ್ತು ೨ ಸಿಖ ಸ್ಥಳಗಳಿವೆ. ಇನ್ನು ೮ ಸಾಮಾನ್ಯ ಮತ್ತು ೪ ಸಿಖ ಸ್ಥಳಗಳಾದರೂ ಇರಬೇಕಾದುದು ಅವಶ್ಯವೆಂದು ಅವರು ಪ್ರತಿಪಾದಿಸಿದರು.

ದಿವಾನ ಚಮನಲಾಲರು ಈ ಗೊತ್ತುವಳಿಗೆ ಬೆಂಬಲಕೊಟ್ಟರು. ಪೂರ್ವ ಪಂಜಾಬದ ಹಿಂದು ಮತ್ತು ಸಿಖ ಜನಸಂಖ್ಯೆ ೪೪ ಲಕ್ಷ ಹೆಚ್ಚಾಗಿರುವದರಿಂದ ೪ ಸ್ಥಳ ಹೆಚ್ಚಿಸುವದು ತಪ್ಪಲ್ಲವೆಂದು ಹೇಳಿದರು. ಅನೇಕರು ಈ ಬಗ್ಗೆ ಸಂದೇಹಗಳನ್ನು ವ್ಯಕ್ತಪಡಿಸಲು ಅಧ್ಯಕ್ಷ ಡಾ. ರಾಜೇಂದ್ರಪ್ರಸಾದರು, ಮಾರ್ಗದರ್ಶನ ಸಮಿತಿಯ ಸೂಚನೆಯ ಮೇರೆಗೆ ಈ ಗೊತ್ತುವಳಿ ಮಂಡಿತವಾಗಿರುವದಾಗಿ ತಿಳಿಸಲು ಹಾಗೂ ಸೂಚಕರು ಸಮರ್ಪಕ ಉತ್ತರಕೊಡಲು ಆಕ್ಷೇಪಕರಿಗೆ ಸರಿಯೆಂದು ಮನವರಿಕೆಯಾಗಿ ಗೊತ್ತುವಳಿಯು ಸ್ವೀಕೃತವಾಯಿತು.

ಈ ಎರಡು ಗೊತ್ತುವಳಿಗಳಿಂದ ಘಟನಾ ಸಮಿತಿಗೆ ಇನ್ನು ಮುಂದೆ ೬ ಜನ ಸದಸ್ಯರು ಹೆಚ್ಚಿದಂತಾಯಿತು.

ಕೇಂದ್ರ ಸರಕಾರದ ಮಂತ್ರಿಗಳು ಘಟನಾ ಸಮಿತಿಯ ಸದಸ್ಯರಾಗಿರದಿದ್ದರೂ ಅವರು ಈ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬಹುದೆಂದೂ ಆದರೆ ಅವರಿಗೆ ಮತಾಧಿಕಾರವಿರಲಾರದೆಂದೂ ಇನ್ನೊಂದು ಗೊತ್ತುವಳಿಯು ಸ್ವೀಕೃತವಾಯಿತು. ಸಂಸ್ಥಾನಗಳಲ್ಲಿ ತೆರವಾದ ಸ್ಥಳಗಳನ್ನು ತುಂಬುವ ಕ್ರಮವೂ ನಿಶ್ಚಯಿಸಲ್ಪಟ್ಟಿತು.

ಆ ಮೇಲೆ ಹಿಂದೀ ಸ್ವಾತಂತ್ರ್ಯ ಕಾಯದೆ [illegible] ಗವರ್ನರ ಜನರಲ್ಲರ ಸಮ್ಮತಿ ಅವಶ್ಯವೇ ಎಂಬ ಬಗ್ಗೆ ಶ್ರೀಯುತ [illegible] ಸೂಚನೆಯ ವಿಷಯದಲ್ಲಿ ದೀರ್ಘ ಚರ್ಚೆ ನಡೆದು ಅದು [illegible] ಉಪಸಮಿತಿಗೆ ಒಪ್ಪಿಸಲ್ಪಟ್ಟಿತು. ಮತ್ತೆ ಒಂದೆರಡು [illegible] ಸೂಚನೆಗಳು ಸ್ವೀಕೃತವಾಗಿ ಸಭೆಯನ್ನು [illegible] ಮುಂದೂಡಲಾಯಿತು.

ಅಮೇರಿಕದ ಸಂಯುಕ್ತರಾಜ್ಯದಲ್ಲಿರುವ [illegible] ೨೮ ತಾಸು [illegible] ಹೊಂದಿದ್ದರೆಂದು ತಿಳಿದುಬಂದಿದೆ. [illegible] ಸರಕಾರದ [illegible] ಸಂಘಟಿಸುವುದಾಗಿ [illegible] ಕಾರಣವಾಯಿತು.

ಕಾಂಗ್ರೆಸ ಕಾರ್ಯಸಮಿತಿಯ ಸಭೆಯಲ್ಲಿ ಕರ್ನಾಟಕ ಶಿಷ್ಟಮಂಡಲದ ಮನವಿ

ಕರ್ನಾಟಕ ಏಕೀಕರಣದ ಬಗ್ಗೆ ಭಾರತ ಸರಕಾರದ ಮುಖ್ಯ ಪ್ರಧಾನರಾದ ಪಂಡಿತ ಜವಾಹರಲಾಲರ ಹೇಳಿಕೆ, ಮುದ್ರಾಸದ ಮುಖಂಡರೂ ಮುದ್ರಾಸದ ಹಿಂದಿನ ಮುಖ್ಯ ಮಂತ್ರಿಗಳೂ ಆದ ಶ್ರೀ ಟಿ ಪ್ರಕಾಶಂ ಅವರು ಅಂಧ್ರ ಪ್ರಾಂತವು ಇಷ್ಟರಲ್ಲಿಯೇ ಅಗುವದಾಗಿ ಪಂ ಜವಾಹರರಿಂದ ತಾವು ತಿಳಿದೆನೆಂಬುದಾಗಿ ತೆಗೆದ ಅವರ ಪ್ರಕಟನೆ ಭಾರತದ ಉಪಮುಖ್ಯಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಕರ್ನಾಟಕ ಏಕೀಕರಣದ ವಿಷಯದಲ್ಲಿ ತೋರಿದ ಅನುದಾರಭಾವ ಇವೇ ಮೊದಲಾದವುಗಳ ಮೂಲಕ ಕನ್ನಡಿಗರು ಉದ್ವಿಗ್ನರಾಗಿದ್ದಾರೆ. ಎಂದೇ ಮೊನ್ನೆ ಕಾಸರಗೋಡಿನಲ್ಲಿ ಕೂಡಿದ ಏಕೀಕರಣ ಪರಿಷತ್ತಿನಲ್ಲಿಯೂ ಇದೇ ತಿಂಗಳ ೧೪ ನೇ ತಾ.ಸ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸಭೆಯಲ್ಲಿಯೂ ಅಂತಿಮ ಉಪಾಯವೆಂದು ಪ್ರಾಂತಿಕ ಮತ್ತು ಕೇಂದ್ರ ಶಾಸನ ಸಭೆಗಳ ಮತ್ತು ಘಟನಾ ಸಮಿತಿಯ ಸದಸ್ಯರು ರಾಜೀನಾಮೆ ಕೊಡತಕ್ಕದ್ದೆಂದು ತೀರ್ಮಾನಿಸಲಾಯಿತು.

ಅ. ಭಾ. ಕಾಂ. ಕಾರ್ಯಸಮಿತಿಗೆ ಮನವಿಯನ್ನು ಅರ್ಪಿಸಿದ್ದು ಮೇಲ್ಕಾಣಿಸಿದ ತೀರ್ಮಾನವನ್ನು ಕನ್ನಡಿಗರು ಆಚರಣೆಗೆ ತರುವಂತಹ ದುರ್ಧರ ಪ್ರಸಂಗ ಬರದಿರಲಿ ಎಂಬ ಉದ್ದೇಶದಿಂದಲೇ.

ಈ ಮನವಿಯನ್ನು ತಾ ೨೫ ಕ್ಕೆ ಕಾಂಗ್ರೆಸ ಕಾರ್ಯಸಮಿತಿಯ ೨ ನೆಯ ದಿನದ ಸಭೆಯಲ್ಲಿ ಸಾದರ ಪಡಿಸಲಾಯಿತು. ಅಂದಿನ ಸಭೆಗೆ ಮಹಾತ್ಮಾಗಾಂಧಿಯವರೂ ಬಂದಿದ್ದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿ, ಕರ್ನಾಟಕದ ಘಟನಾಸಮಿತಿಯ ಸದಸ್ಯರು ಮತ್ತು ಶಾಸನ ಸಭೆಯ ಸದಸ್ಯರ ಪರವಾಗಿ ಏರ್ಪಟ್ಟ ಒಂದು ಶಿಷ್ಟಮಂಡಲದ ಮುಖಾಂತರ, ಕರ್ನಾಟಕ ಪ್ರಾಂತವು ಕೂಡಲೇ ರಚಿತವಾಗಬೇಕೆಂದು ಬೇಡುವ ಈ ಮನವಿಯನ್ನು ಒಪ್ಪಿಸಲಾಯಿತು.

ಆ ಮನವಿಯ ಸಾರಾಂಶವು ಹೀಗೆ ಇದೆ—

ಈಗಿನ ಕರ್ನಾಟಕ ಪ್ರಾಂತದ ಜನ ಜರ್ಜರಿತವಾಗಿದೆ. ಅವರ ಜೀವನದಲ್ಲಿ ಸುಧಾರಣೆಯಾಗಬೇಕಾದರೆ ಕರ್ನಾಟಕದ ಏಕೀಕರಣ ಅತ್ಯವಶ್ಯ. ಇದಾಗದಿದ್ದರೆ ಸ್ವಾತಂತ್ರ್ಯ ಪ್ರಾಪ್ತಿಯು ಅವರಿಗೆ ನಿರರ್ಥಕವೆನಿಸುವದು ಸಹಜ.

ಮುದ್ರಾಸ ಮತ್ತು ಮುಂಬಯಿ ಪ್ರಾಂತಗಳ ಶಾಸನ ಸಭೆಗಳಲ್ಲಿ ಕರ್ನಾಟಕ ಪ್ರತಿನಿಧಿಗಳ ಅಭಿಪ್ರಾಯಕ್ಕೆ ಬೆಲೆಯೇ ಇಲ್ಲದಂತಾಗಿದೆ. ಅಂಧ್ರ ಪ್ರಾಂತವು ಮುದ್ರಾಸದಿಂದ ಈಗಲೇ ಸ್ವತಂತ್ರವಾಗಲಿದೆ. ಅಂಧ್ರದ ಜೊತೆಗೇ ಕರ್ನಾಟಕ ಪ್ರಾಂತರಚನೆಯೂ ಆಗದಿದ್ದರೆ ಗಡಿ ಪ್ರದೇಶದ ನೀಲಗಿರಿ, ದ. ಕನ್ನಡ, ಕೊಯಿಮತ್ತೂರ, ಸೇಲಂ, ಬಳ್ಳಾರಿ ಜಿಲ್ಲೆಯಲ್ಲಿಯ ಕನ್ನಡ ಪ್ರದೇಶಗಳು ಅಂಧ್ರವು ಸ್ವತಂತ್ರ ಪ್ರಾಂತವಾದ ನಂತರ ಉಳಿದ ತಮಿಳನಾಡ ಪ್ರಾಂತದಲ್ಲಿ ಉಳಿವುದು ಶಕ್ಯವೇ ಇಲ್ಲ. ಯಾಕಂದರೆ ಕರ್ನಾಟಕ ಜನತೆಯ ಪ್ರತಿನಿಧಿಗಳ ಅಭಿಪ್ರಾಯವನ್ನು ತಮಿಳ ನಾಡಿನಲ್ಲಿ ಯಾರು ಕೇಳಬೇಕು ? ಶಿಕ್ಷಣ, ಆಹಾರ, ನೀರಾವರಿ, ಔದ್ಯೋಗಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಮೊದಲಾದ ಜನಜೀವನದ ಮಹತ್ವದ ಪ್ರಶ್ನೆಗಳನ್ನು ಬಿಡಿಸಲು ಯಾವ ಯೋಜನೆಯನ್ನೂ ಕಾರ್ಯರೂಪಕ್ಕೆ ತರುವದು ಶಕ್ಯವೇ ಇಲ್ಲ. ಕರ್ನಾಟಕವು ಸ್ವತಂತ್ರ ಪ್ರಾಂತವಾದರೆ ಮಾತ್ರ ಇವೆಲ್ಲ ಸಾಧಿಸುವವು.

ಮುಖ್ಯ ಮಂತ್ರಿಗಳು ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಒಪ್ಪಿದ್ದು ಸಂತೋಷದ ಸಂಗತಿ. ಅದರೆ ಈ ತತ್ವವನ್ನು ಕಾರ್ಯರೂಪಕ್ಕೆ ತರುವಾಗ ಅಂಧ್ರ ಮತ್ತು ಕರ್ನಾಟಕಗಳಲ್ಲಿ ತಾರತಮ್ಯ ದೃಷ್ಟಿಯನ್ನಿಟ್ಟದ್ದು ತೀರ ವಿಷಾದಕರ.

ಯಾವ ಪ್ರಾಂತ ರಚನೆಯು ಮೊದಲು ಅಗತಕ್ಕದ್ದೆಂಬ ಬಗ್ಗೆ ವಿಶೇಷ ಸವಲತ್ತು ತೋರಿಸುವದಿದ್ದರೆ ಅದನ್ನು ಅನೇಕ ಅಡಳಿತಕ್ಕೆ ಹಂಚಿಹೋಗಿ ದುರ್ಗತಿಗೀಡಾದ ಕರ್ನಾಟಕದ ವಿಷಯದಲ್ಲಿ ತೋರುವದು ಅಗತ್ಯವಾಗಿದೆ. ಅದನ್ನು ಬಿಟ್ಟು ಕರ್ನಾಟಕ ಜನತೆಯ ಸ್ಥಿತಿ ಇನ್ನಷ್ಟು ಹದಗೆಡುವಂತಹ ಕಾರ್ಯ ಕೈಕೊಳ್ಳುತ್ತಿದೆಂದರೆ ವಿಚಿತ್ರವೇ ಸರಿ.

ಕಾಂಗ್ರೆಸ ಕಾರ್ಯದ ಸಲುವಾಗಿ ೧೯೨೦ ರಿಂದ ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಅನುಸರಿಸಿದ್ದ ಮಾತ್ರಕ್ಕೇ ಕರ್ನಾಟಕವು ಅದೆಷ್ಟೋ ಪ್ರಗತಿ ಸಾಧಿಸಿ ಸ್ವಾತಂತ್ರ್ಯ ಸಮರದಲ್ಲಿ ತನಗೊಂದು ಗಣ್ಯಸ್ಥಾನವನ್ನು ಕಲ್ಪಿಸಿಕೊಂಡಿತು. ಎಂದ ಮೇಲೆ ರಾಜಕೀಯ ಅಧಿಕಾರದಲ್ಲಿ ಕರ್ನಾಟಕವು ಸ್ವತಂತ್ರ ಪ್ರಾಂತವಾದರೆ ಅದೆಷ್ಟು ಪ್ರಗತಿಪರವಾಗಬೇಡ ?

ಈಗ ದೇಶವು ಎದುರಿಸಬೇಕಾದ ನಾನಾ ಸಮಸ್ಯೆಗಳ ಕಲ್ಪನೆ ನಮಗೂ ಉಂಟು. ಆದರೆ ಅಂಧ್ರಪ್ರಾಂತ ರಚನೆ ಮಾಡುವಾಗ ಇರಲಾರದ ಸಮಸ್ಯೆಗಳು ಕರ್ನಾಟಕದ ಪ್ರಾಂತರಚನೆ ಮಾಡುವಾಗಲೂ ಇರಲಾರವು. ಸ್ವತಂತ್ರ ಪ್ರಾಂತೀಕರಣದ ಸ್ಥಾನಿಕ ಸಮಸ್ಯೆಯನ್ನು ಬಿಡಿಸಿದ್ದಾದರೆ ಜನತೆಯಲ್ಲಿ ಹೆಚ್ಚಿನ ಹುರುಪು ಹುಟ್ಟಿ ಮುಂದಿನ ಕಠಿಣಕಾರ್ಯಗಳೆಲ್ಲ ಸಹಜವಾಗಿ ಕೈಗೂಡುವವು. ಇದರಿಂದ ಕೇಂದ್ರ ಸರಕಾರದ ಬಲ ಹೆಚ್ಚುವದು.

ಮೇಲ್ಕಾಣಿಸಿದ ಮನವಿಯನ್ನು ಒಪ್ಪಿಸಲು ಹೋದ ಶಿಷ್ಟಮಂಡಲಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಧುರೀಣರಾಗಿದ್ದರು. ಮುದ್ರಾಸದ ಹಿಂದಿನ ಮಂತ್ರಿಗಳಾಗಿದ್ದ ಶ್ರೀ ಕೆ ಅರ್ ಕಾರಂತರು, ಮುಂಬಯಿ ಸರಕಾರದ ಈಗಿನ ಒಕ್ಕಲುತನಖಾತೆಯ ಮಂತ್ರಿಗಳಾದ ಶ್ರೀ ಎಂ ಪಿ ಪಾಟೀಲರು ಮತ್ತು ಘಟನಾಸಮಿತಿಯ ಸದಸ್ಯರಾದ ಶ್ರೀ ರಂಗರಾವ ದಿವಾಕರರು ಮೊದಲಾದವರು ಶಿಷ್ಟಮಂಡಲದಲ್ಲಿದ್ದರು.

ಶಿಷ್ಟಮಂಡಲದ ಹೇಳಿಕೆಯನ್ನೆಲ್ಲ ಕಾಂಗ್ರೆಸ ಕಾರ್ಯಸಮಿತಿಯವರು ತುಂಬ ಶಾಂತರೀತಿಯಿಂದಲೂ ಆಸ್ಥೆಯಿಂದಲೂ ಕೇಳಿಕೊಂಡರಾಗಿ ತಿಳಿಯುತ್ತದೆ. ಈ ಮನವಿಯಿಂದ ಸಮಿತಿಯ ಸದಸ್ಯರ ಮೇಲೆ ಒಳ್ಳೇಪರಿಣಾಮವಾಗಿರುವದಾಗಿ ಶಿಷ್ಟಮಂಡಲದವರು ಕೊಡಿದ ವರದಿಯಿಂದ ತಿಳಿದುಬರುತ್ತದೆ. ಕಾಂಗ್ರೆಸ ಕಾರ್ಯಸಮಿತಿಯವರೂ ಭಾರತ ಸರಕಾರವೂ ಈ ವಿಷಯದಲ್ಲಿ ಬಿಕ್ಕಟ್ಟುಂಟುಮಾಡಗೊಡಲಿಕ್ಕಿಲ್ಲವೆಂದು ಆಶಿಸುವಾ.

ಕಾಂಗ್ರೆಸ ಕಾರ್ಯಸಮಿತಿಯ ಸಭೆ

ಕಾಂಗ್ರೆಸ ಕಾರ್ಯಸಮಿತಿಯ ಸಭೆಯು ದಿಲ್ಲಿಯಲ್ಲಿ ಮೂರು ದಿನ ಸೇರಿ ತಾ ೨೬ ಕ್ಕೆ ಮುಕ್ತಾಯಗೊಂಡಿತು. ದೇಶದ ಇಂದಿನ ಪರಿಸ್ಥಿತಿಯಲ್ಲಿ ಅನೇಕ ಹಿತಶತ್ರುಗಳು ಕೂಲಿಕಾರರ ಅಜ್ಞಾನದ ದುರುಪಯೋಗ ಮಾಡಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಹೊಂಚು ಹಾಕಿದ್ದಾರೆ. ಅವರು ಸಂಪು, ಕೆಲಸ ನಿಲ್ಲಿಸುವಿಕೆ ಮೊದಲಾದ ಚಟುವಟಿಕೆಗಳನ್ನು ಹೂಡಲು ಹುರುಪುಗೊಡುತ್ತಾರೆ. ಈ ಬಗ್ಗೆ ಕೆಲಸಗಾರರೂ ಉದ್ಯಮಗಾರರೂ ಎಚ್ಚರಿಕೆ ವಹಿಸದಿದ್ದರೆ ದೇಶದ ಉತ್ಪಾದನೆ ತಗ್ಗಿ ರಾಷ್ಟ್ರಕ್ಕೆ ಗಂಡಾಂತರವಿದೆಯೆಂದೂ ಆರ್ಥಿಕ ಅಭಿವೃದ್ಧಿಯೂ ಪುನರ್ನಿರ್ಮಾಣ ಯೋಜನೆಗಳೂ ಕೈಗೂಡಲಾರವೆಂದೂ ಕಾಂ. ಕಾರ್ಯ ಸಮಿತಿಯು ಎಚ್ಚರಿಕೆ ಹೇಳಿ ಈ ಬಗ್ಗೆ ಒಂದು ಗೊತ್ತುವಳಿಯನ್ನು ಅಂಗೀಕರಿಸಿದೆ.

ಗೊತ್ತುವಳಿಯು ದಿಲ್ಲಿಯ ಔದ್ಯೋಗಿಕ ಶಾಂತಿ ಸಂಧಾನವನ್ನು ಸ್ವಾಗತಿಸಿದೆ. ಕೂಲಿಕಾರರು ಇನ್ನು ಮೇಲೆ ಸಂಪುಹೂಡದೆ ನಾಡ ಹಿತವನ್ನೆ ಕಣ್ಮುಂದಿಟ್ಟು ದುಡಿಯಬೇಕೆಂದು ಸೂಚಿಸಿದೆ. ಕಾಂಗ್ರೆಸಿಗರು ಹಿಂದೀ ರಾಷ್ಟ್ರೀಯ ಮಜದೂರ ಸಂಘವನ್ನು ಬಲಪಡಿಸಬೇಕೆಂದು ಹೇಳಲಾಗಿದೆ.

ಕೊನೆಯ ದಿನದ ಸಭೆಗೆ ಸರದಾರ ಪಟೇಲರನ್ನುಳಿದು ಸದಸ್ಯರೆಲ್ಲ ಬಂದಿದ್ದರು. ಗಾಂಧೀಜಿಯವರೂ ಆಗಮಿಸಿದ್ದರು. ಶ್ರೀಗಳಾದ ಜಗಜೀವನರಾಮ ಮತ್ತು ಬಾಳಾಸಾಹೇಬ ಖೇರರು ವಿಶೇಷ ಆಮಂತ್ರಣದ ಮೇರೆಗೆ ಹಾಜರಿದ್ದರು.

ಗೊತ್ತುವಳಿಯ ಸಾರಾಂಶ ಹೀಗೆಉಂಟು.—

ಅಧಿಕ ಉತ್ಪಾದನವೇ ದಿನದ ಅವಶ್ಯಕ ವಸ್ತುಗಳ ಕೊರತೆಯನ್ನು ನಿವಾರಿಸಬಲ್ಲದು ಈ ಬಗ್ಗೆ ಹಿಂದುಸ್ತಾನ ಸರಕಾರದವರು ದಿಲ್ಲಿಯಲ್ಲಿ ಡಿಸೆಂಬರ ತಿಂಗಳು ಮಾಡಿಕೊಂಡ ಔದ್ಯೋಗಿಕ ಶಾಂತಿಯ ಒಪ್ಪಂದವನ್ನು ಈ ಸಭೆ ಸ್ವಾಗತಿಸುತ್ತದೆ.

ರಾಷ್ಟ್ರವು ಆರ್ಥಿಕ ಉತ್ಪಾದನೆಯನ್ನು ನಿರೀಕ್ಷಿಸುವಾಗ ದೇಶದಲ್ಲಿ ಸಂಪು, ಕೆಲಸ ನಿಲ್ಲಿಸುವಿಕೆ ಹಾಗೂ ಕಾರಖಾನೆಗಳಲ್ಲಿ ಕೂಲಿಕಾರರಿಗೆ ಪ್ರವೇಶ ಪ್ರತಿಬಂಧ ಇವೇ ಮೊದಲಾದವು ರಾಷ್ಟ್ರಕ್ಕೆ ತೀವ್ರ ಅಘಾತಗಳಾಗಿವೆ. ಆರ್ಥಿಕ ಪುನಾರಚನೆಗೂ ಸ್ವಾವಲಂಬನ ಯೋಜನೆಗಳಿಗೂ ಇವು ಗಂಡಾಂತರಪ್ರಾಯವಾಗಿವೆಯಾಗಿ ಕಾಂಗ್ರೆಸ ಕಾರ್ಯಸಮಿತಿಯು ಅವುಗಳನ್ನು ನಿಷೇಧಿಸುತ್ತದೆ.

ದಿಲ್ಲಿ ಔದ್ಯೋಗಿಕ ಪರಿಷತ್ತಿನ ನಿರ್ಣಯಗಳನ್ನು ಕಾರ್ಯಕಾರಿಯಾಗಿ ಮಾಡಬೇಕೆಂದು ಈ ಸಮಿತಿಯು ಒಡೆಯರನ್ನೂ ಕೂಲಿಕಾರರನ್ನೂ ಬಿನ್ನವಿಸುತ್ತದೆ. ಒಡೆಯರು ಕೂಲಿಕಾರರಿಗೆ ಯೋಗ್ಯ ಉತ್ತೇಜನ ಕೊಡಬೇಕು. ಅದರಂತೆ ಕೂಲಿಕಾರರು ತಮ್ಮ ಹಕ್ಕುಗಳ ಜೊತೆಗೆ ತಮ್ಮ ಕರ್ತವ್ಯವನ್ನೂ ಅರಿತು ಉತ್ಪಾದನೆಯನ್ನು ಶಕ್ಯವಿದ್ದಷ್ಟು ವರ್ಧಿಸಿ ರಾಷ್ಟ್ರಕ್ಕೆ ಸೇವೆ ಸಲ್ಲಿಸಬೇಕು.

ಶ್ರಮಜೀವಿಗಳ ಜೀವನವನ್ನು ಎತ್ತರಿಸಲೆಂದೇ ಕಾಂಗ್ರೆಸ್ಸು ಮಹಾತ್ಮಾಗಾಂಧಿಯವರ ನೇತೃತ್ವದಲ್ಲಿ ಸದಾ ದುಡಿಯಲು ಬದ್ಧಕಂಕಣವಾಗಿದೆ. ಅದರೆ ಕೆಲ ಸ್ವಾರ್ಥಸಾಧಕ ಹಿತಶತ್ರುಗಳ ಬಲಿಗೆ ಕೂಲಿಕಾರರು ಬೀಳುತ್ತಿರುವದನ್ನು ನೋಡಿ ಕಾರ್ಯಸಮಿತಿಗೆ ಕೆಡಕೆನಿಸುತ್ತದೆ. ಪಕ್ಷಪಂಗಡಗಳ ಹಿತಕ್ಕಿಂತ ರಾಷ್ಟ್ರಹಿತ ಹೆಚ್ಚಿನದೆಂಬುದನ್ನು ಕೂಲಿಕಾರರು ಅರಿಯಲಿ.

ಪ್ರಸಂಗಬಂದಾಗ ಸಂಪುಹೂಡುವದನ್ನೇ ಬಿಟ್ಟು ತಮ್ಮ ತಂಟೆಗಳನ್ನು ಬಗೆಹರಿಸಿಕೊಳ್ಳಲು ನ್ಯಾಯಮಂಡಲಗಳನ್ನು ಉಪಯೋಗಿಸಬೇಕೆಂದು ಕೂಲಿಕಾರ ವರ್ಗವನ್ನು ಈ ಸಮಿತಿ ಬಿನ್ನವಿಸುತ್ತದೆ.

ಕೂಲಿಕಾರರ ಸಂಘಟನೆಯಾಗಿ ಅವರ ಕಲ್ಯಾಣವಹಿಸಲೆಂದೇ ಸ್ಥಾಪಿತವಾದ ರಾಷ್ಟ್ರೀಯ ಮಜದೂರ ಸಂಘಕ್ಕೆ ಕಾಂಗ್ರೆಸು ಪ್ರೋತ್ಸಾಹಕೊಟ್ಟಿದೆ.

ಇದನ್ನು ಮನಗಂಡು ಅಧೀನ ಸಮಿತಿಗಳು ಕೂಲಿಕಾರರ ಸಂಘಟನೆಯನ್ನು ಮುಖ್ಯ ಕಾರ್ಯವೆಂದು ತಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕೆಂದು ಕಾರ್ಯಸಮಿತಿಯು ಆದೇಶಿಸುತ್ತದೆ.

ಹೊರನಾಡ ಕನ್ನಡಿಗರ ಸಮ್ಮೇಲನ

ಏಕೀಕರಣದಿಂದಲೇ ಕರ್ನಾಟಕದ ಉದ್ಧಾರ

ಕಾಶಿಯಲ್ಲಿ ತಾ. ೨೫ ಕ್ಕೆ ಹೊರನಾಡಿನಲ್ಲಿ ನೆಲಸಿದ ಕನ್ನಡಿಗರ ತೃತೀಯ ಸಮ್ಮೇಲನವು ನೆರೆದಿತು. ಈ ಸಮ್ಮೇಲನಕ್ಕೆ ಕನ್ನಡ ನಾಡಿನ ಮುಂದಾಳುಗಳಲ್ಲೊಬ್ಬರೂ ಘಟನಾ ಸಮಿತಿಯ ಸದಸ್ಯರೂ ಶ್ರೇಷ್ಠ ಗ್ರಂಥಕಾರರೂ ಆದ ಶ್ರೀ ರಂಗರಾವ ದಿವಾಕರರು ಅಧ್ಯಕ್ಷರಾಗಿ ನಿಯೋಜಿತರಾಗಿದ್ದರು. ಆದರೆ ಇದೇ ದಿನ ದಿಲ್ಲಿಯಲ್ಲಿ ಕರ್ನಾಟಕದ ಶಿಷ್ಟಮಂಡಲವು ಅ. ಭಾ. ಕಾಂಗ್ರೆಸ ಕಾರ್ಯ ಸಮಿತಿಗೆ ತನ್ನ ಮನವಿಯನ್ನು ಒಪ್ಪಿಸಬೇಕಾದ ಮಹತ್ವದ ಕೆಲಸದಲ್ಲಿ ಶ್ರೀ ರಂಗರಾವ ದಿವಾಕರರೂ ಭಾಗ ವಹಿಸಬೇಕಾಗಿದ್ದರಿಂದ ಅವರಿಗೆ ಸಮ್ಮೇಲನಕ್ಕೆ ಬರಲಾಗಲಿಲ್ಲ. ಆದ್ದರಿಂದ ಸಮ್ಮೇಲನವು ಕಾಶಿಯಲ್ಲಿ ಡಾಕ್ಟರರಾಗಿದ್ದ ಶ್ರೀಮತಿ ತುಂಗಮ್ಮನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಈ ಅಧಿವೇಶನಕ್ಕೆ ದಿಲ್ಲಿ, ಕೇದಾರ, ಕಟ್ನಿ ಅಲಹಾಬಾದ, ಜಬಲಪುರ, ಮುಂಬಯಿ, ಮಡಿಕೇರಿ, ಕೈಲಾಸನಾಥ ಮುಂತಾದ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಸ್ವಾಗತಾಧ್ಯಕ್ಷರಾದ ಡಾ. ದೇಶಿಕಾರ್ಯರು ಪ್ರತಿನಿಧಿಗಳನ್ನು ಸ್ವಾಗತಿಸಿ ಕರ್ನಾಟಕ ಏಕೀಕರಣವು ಅಗತ್ಯವಾಗಿ ಆಗಬೇಕೆಂದು ಹೇಳಿದರು. ನಂತರ ಪ್ರಮುಖರಿಂದ ಬಂದ ಸಂದೇಶಗಳನ್ನು ಓದಲಾಯಿತು. ಅಧ್ಯಕ್ಷ ಪೀಠವನ್ನು ಅಲಂಕರಿಸಿದ ಶ್ರೀಮತಿ ತುಂಗಮ್ಮನವರ ಭಾಷಣವಾದ ನಂತರ ಶ್ರೀ ಎಚ್. ಎಸ್. ಪಾಟೀಲರು ಶ್ರೀ ರಂಗರಾವ ದಿವಾಕರರ ಭಾಷಣವನ್ನು ಓದಿ ಹೇಳಿದರು. ಆ ಮೇಲೆ ಕೆಲವು ಗೊತ್ತುವಳಿಗಳು ಸೂಚಿತವಾಗಿ ಅವುಗಳ ಚರ್ಚೆಗಾಗಿ ಸಮ್ಮೇಲನವು ಮರುದಿನಕ್ಕೆ ಮುಂದರಿಸಲ್ಪಟ್ಟಿತು.

೨ ನೆಯ ದಿನದ ಬಹಿರಂಗ ಅಧಿವೇಶನದಲ್ಲಿ ಕೆಳಗಿನ ಗೊತ್ತುವಳಿಗಳು ಅಂಗೀಕೃತವಾದವು. (೧) ಕರ್ನಾಟಕ ಏಕೀಕರಣವು ಕೂಡಲೇ ಆಗಿ ಕರ್ನಾಟಕವು ಸ್ವತಂತ್ರಪ್ರಾಂತವಾಗಬೇಕು. (೨) ಧಾರವಾಡದಲ್ಲಿ ಆಕಾಶವಾಣಿ ಪ್ರಸರಣ ಕೇಂದ್ರವನ್ನು ಬೇಗ ಸ್ಥಾಪಿಸಬೇಕು. (೩) ಅಲಹಾಬಾದ ವಿಶ್ವವಿದ್ಯಾಲಯ ಮತ್ತು ಹಿಂದೀ ಸಾಹಿತ್ಯ ಸಮ್ಮೇಲನದವರು ಕನ್ನಡಕ್ಕೆ ಮನ್ನಣೆ ಕೊಡಬೇಕು. (೪) ಆಗ್ರಾ, ಕಾಶಿ, ಮುಂಬಯಿ, ಮದ್ರಾಸ, ನಾಗಪೂರ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಕಲಿಸುವ ಏರ್ಪಾಡಾಗಬೇಕು.

ಹೊರನಾಡ ಕನ್ನಡಿಗರ ಸಂಸ್ಥೆ ಎಂಬ ಒಂದು ಚಿರಸಂಸ್ಥೆಯನ್ನು ಸ್ಥಾಪಿಸುವದಕ್ಕಾಗಿ ಶ್ರೀ. ಎಚ್. ಎಸ್. ಪಾಟೀಲರು ಸಿದ್ಧಪಡಿಸಿದ ಘಟನೆಯನ್ನು ಒಪ್ಪಲಾಯಿತು.

—೧೧ನೆಯ ಪುಟಕ್ಕೆ

ಕರ್ಮವೀರ
ಹರಿಜನ ಪುರವಣಿ

ಮಹಾತ್ಮಾ ಗಾಂಧಿಯವರ ಕೊಲೆ

ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿ

ಜನನ: ಅಕ್ಟೋಬರ ೨, ೧೮೬೯ ಮರಣ: ೩೦ ಜನೆವರಿ, ೧೯೪೮

ಮಹಾತ್ಮಾ ಗಾಂಧಿಯವರು ತಾ. ೩೦—೧—೪೮ಕ್ಕೆ ಮರಣ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ

ಮಹಾತ್ಮಾ ಗಾಂಧಿಯವರು ತಾ. ೩೦-೧-೪೮ ಸಂಜೆ ೫ ಗಂಟೆಗೆ ದಿಲ್ಲಿಯಲ್ಲಿ ಪ್ರಾರ್ಥನಾ ಸಭೆಗೆ ಹೊರಟಿದ್ದಾಗ ಅವರ ಮೇಲೆ ಯಾರೋ ನಾಲ್ಕು ಬಾರಿ ಗುಂಡು ಹಾರಿಸಿದರು. ಗುಂಡುಗಳು ನೇರವಾಗಿ ಹೊಟ್ಟೆಯನ್ನೇ ಹೊಕ್ಕಿದ್ದವು. ಅವರು ಕೂಡಲೆ ಕುಸಿದು ಬಿದ್ದರು. ಒಡನೆ ಅವರನ್ನು ಬಿರ್ಲಾ ಭವನಕ್ಕೆ ಎತ್ತಿ ಒಯ್ಯಲಾಯಿತು. ಅವರ ಮೈಯಿಂದ ರಕ್ತಧಾರೆ ಸುರಿಯುತ್ತಿತ್ತು. ಅವರು ಮಲಗಿದ್ದ ಕೊಟಡಿಗೆ ಯಾರನ್ನೂ ಬರಗೊಡಿಸುತ್ತಿದ್ದಿಲ್ಲ. ಸುಮಾರು ಅರ್ಧ ಗಂಟೆಯ ನಂತರ ಅವರ ಸಂಗಾತಿಗಳಲ್ಲೊಬ್ಬರು ಹೊರಗೆ ಬಂದು "ಬಾಪೂಜಿಯ ಅವತಾರ ಮುಗಿಯಿತು ಎಂದು ತಿಳಿಸಿದರು. ಸುದ್ದಿಗಾಗಿ ಕಾದು ನಿಂತಿದ್ದ ಉದ್ವಿಗ್ನ ಜನಸಮೂಹಕ್ಕೆ ಸಿಡಿಲು ಬಡಿದಂತಾಯಿತು.

ಮ. ಗಾಂಧಿಯವರ ಕೊಲೆಯಾಗುವದನ್ನು ಕಣ್ಣಾರೆಕಂಡ ಅ. ಪ್ರೆ. ಪ್ರತಿನಿಧಿಯೊಬ್ಬನು ಈ ಕೆಳಗಿನಂತೆ ಆ ದುರಂತವನ್ನು ಬಣ್ಣಿಸಿದ್ದಾನೆ

ಐದು ಗಂಟೆಯ ಸುಮಾರಿಗೆ ೫೦೦ ಜನರ ಸಮೂಹವು ಪ್ರಾರ್ಥನಾಸಭೆಗೆ ಗಾಂಧೀಜಿಯ ಆಗಮನವನ್ನು ಆತುರದಿಂದ ನಿರೀಕ್ಷಿಸುತ್ತಿತ್ತು. ಅವರು ಬಿರ್ಲಾ ಭವನದಿಂದ ಹೊರಬೀಳಲು ೫ ನಿಮಿಷ ತಡವಾಯಿತು. ಅವರು ತಮ್ಮ ಮೊಮ್ಮಕ್ಕಳಾದ ಆಭಾ ಗಾಂಧಿ ಮತ್ತು ಮನು ಗಾಂಧಿಯವರ ಹೆಗಲ ಮೇಲೆ ಕೈ ಹಾಕಿಕೊಂಡು ಸಭೆಗೆ ಬಂದರು. ಜನರು ಇಬ್ಭಾಗವಾಗಿ ಅವರಿಗೆ ದಾರಿ ಬಿಟ್ಟರು. ಅವರು ವೇದಿಕೆಗೆ ಇನ್ನೂ ೧೫ ಗಜ ದೂರ ಇರುವಾಗ ನನಗೆ ಒಂದು ಗುಂಡಿನ ಸಪ್ಪಳ ಕೇಳಿತು. ಖಾಕಿ ಮಿಲಿಟರಿ ಉಡಿಗೆಯನ್ನು ಹಾಕಿಕೊಂಡ ಯುವಕನೊಬ್ಬನು ಸನಿ ಕೋನದಲ್ಲಿ ರಿವಾಲ್ವರ ಹಿಡಿದು ಗಾಂಧೀಜಿಯ ಮೇಲೆ ಮತ್ತೆ ಮೂರು ಗುಂಡುಗಳನ್ನು ಹಾರಿಸಿದ್ದನ್ನು ಕಂಡೆ. ಗಾಂಧೀಜಿಯ ಹೊಟ್ಟೆಯನ್ನೇ ಗುಂಡು ಹೊಕ್ಕಂತೆ ತೋರಿತು. ಅವರು ಕುಸಿದು ಬಿದ್ದರು. ಕೊಲೆಗಡಕನ ಹಿಂದೆ ನಿಂತಿದ್ದ ಜನರು ಅವನನ್ನು ಹಿಡಿದರು. ಅವನ ಕೈಲಿದ್ದ ರಿವಾಲ್ವರು ಕೆಳಗೆ ಬಿತ್ತು. ಗಾಂಧೀಜಿಯ ಕಡೆ ನಾನು ಧಾವಿಸಿದೆ. ನಾಲ್ಕೈದು ಜನ ಸೇರಿ ಅವರನ್ನು ಎತ್ತಿ ಕೂಡ್ರಿಸಿದರು. ಅವರ ಕೈಗಳು ಪ್ರಾರ್ಥನೆಯಲ್ಲೋ ಎಂಬಂತೆ ಮುಗಿದಿದ್ದವು. ಅವರನ್ನು ಎತ್ತಿ ಬಿರ್ಲಾ ಭವನದೊಳಗೆ ಒಯ್ಯಲಾಯಿತು. ಒಳಗೆ ಯಾರಿಗೂ ಪ್ರವೇಶವಿರಲಿಲ್ಲ. ಕೆಲ ಹೊತ್ತಿನ ಮೇಲೆ ಹೊರಗೆ ಬಂದ! ದಿವಾಣ ಚಮನಲಾಲರನ್ನು ಕೇಳಿದಾಗ ಅವರು "ಇನ್ನೂ ಬದುಕಿದ್ದಾರೆ" ಎಂದರು. ಮತ್ತೆ ಐದು ನಿಮಿಷಗಳಲ್ಲಿ ಹೊರಬಂದ ಇನ್ನೊಬ್ಬ ಸಂಗಡಿಗ ದುಃಖಾವೇಗದಿಂದ ಗದ್ಗದನಾಗಿ "ಬಾಪು ತೀರಿಕೊಂಡರು" ಎಂದು ತಿಳಿಸಿದನು.

ಈ ಸುದ್ದಿಯನ್ನು ಕೇಳಿದ ಜನತೆ ಅದನ್ನು ಮೊದಲು ನಂಬಲೇ ಇಲ್ಲ. ಆ ಮೇಲೆ ದಿಗಿಲುಗೆಟ್ಟು ಅಳತೊಡಗಿತು. ಸುದ್ದಿ ಕಾಳ್ಗಿಚ್ಚಿನಂತೆ ದೇಶವನ್ನೆಲ್ಲ ವ್ಯಾಪಿಸಿತು. ಶ್ರೀ. ಶಂಕರರಾವದೇವ, ಶರಚ್ಚಂದ್ರ ಬೋಸ, ರಾಜಗೋಪಾಲಾಚಾರಿ ಮೊದಲಾದವರು ಅವರ್ಣನೀಯ ದುಃಖಾಶ್ರುಗಳನ್ನು ಸುರಿಸಿದ್ದಾರೆ.

ಗಾಂಧೀಜಿಯ ಐಹಿಕ ಅವಶೇಷವನ್ನು ತಾ. ೩೧ ಸಂಜೆ ನಾಲ್ಕು ಗಂಟೆಗೆ ಯಮುನಾತೀರದಲ್ಲಿ ಮೆರವಣಿಗೆಯಿಂದೊಯ್ದು ಅಗ್ನಿ ಅರ್ಪಿಸಲಾಗುವದು.

ಆಚಾರ್ಯ ಸೂಕ್ತಿಗಳು

ಕದಿರಿನ ವಿಷಯವಾಗಿ ನಾನು ಬರೆದ ಪ್ರಬಂಧದ ಮೇಲೆ ಒಬ್ಬ ಸುದ್ದಿಗಾರನ ಉತ್ತರ [illegible]ಗಳನ್ನು ಓದಿದೆ.

ಸುಪ್ರಸಿದ್ಧ ಪಾದರಿ ಬಿಶಪ್ [illegible] ನಾದವಲ್ಲಿ ದಕ್ಷಿಣದ ಕಲೆಗಾರರೊಬ್ಬನ ಬಗ್ಗೆ ಒಬ್ಬನಿಗೆ ಒಂದು ಗೊತ್ತಿಲ್ಲದುದು ಹೇಳಿದನು. ಅವನು ತನ್ನ ಜೀವಮಾನವನ್ನೆಲ್ಲ ಚಿತ್ರಗಳ ರಚನೆ ಕಳೆದಿದ್ದನು. ಆ ಮಟ್ಟದ ಮೇಲೆ ಹೇಳುವುದಾದರೆ ಕಲಾ ಶಾಲೆಯನ್ನು ಕಾಯುವ ಬ್ರಿಟನಾಲಯ ಅತ್ಯಂತ ಮೌಲ್ಯದಗತಿಯ ಕಲಾ ವಿಮರ್ಶಕನಾಗಿರಬೇಕು ಎಂದು ವಿಶ್ವನು ಪ್ರತ್ಯುತ್ತರ ಕೊಟ್ಟನು. "ಬಹಳ ಕಾಲ ಸೂಲು ತೆಗೆಯುತ್ತಿದ್ದವ"ನೇ ಬಾಹನು ಕದಿರಿಗೆ "ಸೊಕ್ಕಿನ" ಗುಣ ವಿಶೇಷಗಳನ್ನು ಹಚ್ಚಿ "ತನ್ನ ಜೀವನದಲ್ಲಿ ಹಿಂದೆಂದೂ ಅನುಭವಿಸದಂಥ ಪ್ರತ್ಯಕ್ಷವನ್ನು"ಂಟು ಮಾಡಿತು ಎಂದು ಬರೆದಿರುವುದು ನಾನು ಬರೆದುದಕ್ಕೆ ಎಂದೂ ಪ್ರತಿವಾದವೆನಿಸದು. ಆದರದು ಅರ್ಥಗರ್ಭಿತವಾಗಿದೆ. ಅದು ಕೈಗಾರಿಕೆಗಳ ಬಗ್ಗೆ ಪೂರ್ವಗ್ರಹ ಮತ್ತು ಅಜ್ಞಾನಗಳ ಮೇಲೆ ನಿಂತ ಅವನ ತಿರಸ್ಕಾರ ಬುದ್ಧಿಯನ್ನು ವ್ಯಕ್ತಪಡಿಸುತ್ತದೆ ಮತ್ತು ಕೈಗಾರಿಕೆಗಳೆಂದರೆ ಕೇವಲ ನಾಲ್ಕು ಕಾಸುಗಳನ್ನು ಬಡವರಿಗೆ ಸಂಪಾದಿಸಿ ಕೊಡುವಂಥವುಗಳೆಂದು ತಿಳಿಯುವುದು ಮತ್ತು ಮನಸ್ಸಿಲ್ಲದ ಮನಸ್ಸಿನಿಂದ ಅದಕ್ಕೆ ಕೇವಲ ನೈತಿಕ ಮೌಲ್ಯವನ್ನು ಹಚ್ಚುವುದು ಅವುಗಳ ಬಗ್ಗೆ ಲೇಖಕನಿಗಿರುವ ತಿರಸ್ಕಾರವನ್ನಲ್ಲದೆ ಬೇರೇನನ್ನೂ ತೋರಿಸದೆಂದು ನನಗೆ ಕಾಣುತ್ತದೆ. ಹಾಗಿರುವಾಗ ಗಾಂಧಿಯವರು ನಮಗೆ ತಿಳಿಯಬೇಕೆಂದಂತೆ ಕೈಗಾರಿಕೆಗಳಿರಲಾರವು. —ಅಂದರೆ ಗಾಂಧಿಯವರ ಪ್ರಕಾರ ಅವು ಅಹಿಂಸಾತ್ಮಕ ಸಮಾಜ ಪದ್ಧತಿಗೆ ಚಟುವಟಿಕೆಯ ಕೇಂದ್ರಗಳೆನಿಸಬೇಕು. ಗಾಂಧಿಯವರೆದುರಿಗಿದ್ದುದು ಈ ಪ್ರಶ್ನೆ: ರಾಮರಾಜ್ಯಕ್ಕೆ ಮಾರ್ಗವಾವುದು? ಹೇಗೆ ಯುದ್ಧದಿಂದ ಬೇಸತ್ತ ಜಗತ್ತಿಗೆ ನ್ಯಾಯ, ಶಾಂತಿ, ಸುಖಗಳ ಮಾರ್ಗವನ್ನು ತೋರಿಸುವುದು? ಯಾವ ರೀತಿಯಿಂದ ಅತಿಪ್ರಬಲ ಸಾಮ್ರಾಜ್ಯವಾದಿ ಪ್ರಭುತ್ವವನ್ನು ಉರುಳಿಸುವುದು ಇವುಗಳಿಗಗತ್ಯವಾದ ಕಾರ್ಯೋತ್ಸಾಹವುಗಳ ಜಹಾಂಗವನ್ನು ತಯಾರಿಸಲು ಹೇಗೆ ಸಾಮಾನ್ಯ ಜನತೆಯು ಸಾಮಾನ್ಯವೂ ಅನಿವಾರ್ಯವೂ ಆದ ಜೀವನವನ್ನು ಬಳಸಿಕೊಳ್ಳಬೇಕು? ಇದಕ್ಕೆ ಅವರ ಉತ್ತರ "ನಯೀತಾಲೀಮು" ನಯೀತಾಲೀಮು ಅನಿವಾರ್ಯವಾದ ಜೀವನದಲ್ಲೇ ಅದನ್ನು ಅದರಲ್ಲಿರುವ ನಮ್ಮನ್ನು ತಿಳಿದುಕೊಳ್ಳಲು ಕಲಿಸುತ್ತಾರೆ. ಹೀಗಿರುವ ಮಾರ್ಗವೆಂದರೆ, ನಮಗೆ ಪರಿಹರಿಸಲು ಸಾಧ್ಯವಾದವುಗಳನ್ನು ಆಶ್ಚರ್ಯ, ಸಂಶೋಧನ ಮತ್ತು ವಿಷಯ ಸಂಗ್ರಹ ಬುದ್ಧಿ ಇವುಗಳ ಕಣ್ಣಿಂದ ನೋಡುವುದು. ನಮಗೆಲ್ಲರಿಗೂ ಬಟ್ಟೆ ಬೇಕೆ ಬೇಕು. ಅವನ್ನು ನಾವೇ ತಯಾರಿಸಿದರೆ ಮತ್ತು ತಯಾರಿಸುವಾಗ ವೈಜ್ಞಾನಿಕ ದೃಷ್ಟಿಯನ್ನು ತೆಗೆದುಕೊಂಡಿದ್ದರೆ, ನೀವು ಚನ್ನಾಗಿ ಬಟ್ಟೆ ಹಾಕಿಕೊಳ್ಳಬಹುದಲ್ಲದೆ ವಿಷಯಗಳ 'ಏಕೆ, ಎಲ್ಲಿ' ಎಂಬುದು ಜಾಜ್ವಲ್ಯಮಾನವಾದ ಜ್ಞಾನರಾಜ್ಯಕ್ಕೊಯ್ಯುವುದು. ಆದಾದರೂ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಸಂಶೋಧನ, ನವನಿರ್ಮಾಣ ಮತ್ತು ಪ್ರಗತಿಯ ಬುದ್ಧಿಯನ್ನು ಹುಟ್ಟಿಸತಕ್ಕ "ಜೀವನದ ಚಿಕ್ಕ ಸಾಮಾನ್ಯ ಸಂಗತಿಗಳ" ಸಾರ್ವಕಾಲಿಕ ಪರಿಶೀಲನವು ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿಯ ಓದು ಮನೆ ಇಲ್ಲವೆ ಪ್ರಯೋಗಶಾಲೆಯಲ್ಲಿಯ ಬೌದ್ಧಿಕ ವ್ಯಾಯಾಮಕ್ಕಿಂತ ಹೆಚ್ಚು ಪರಿಣಾಮಕಾರಿಯಾದುದು. ಪಂಡಿತನ ರೂಢವಾದ ನಿದ್ರಾ ಮುದ್ರೆ ಮತ್ತು ಬಾಹ್ಯ ಪ್ರಜ್ಞೆಯ ಅಭಾವ ಇವು ಗಾದೆಯ ಮಾತಾಗಿವೆ.

ಸುದ್ದಿಗಾರನು ಪಂಡಿತನನ್ನು ಮೀರಬೇಕಾಗುತ್ತದೆ. ಅವನು ಕದಿರಿನ ಬಹಳ ಕಾಲ ನೋಡುವ ನಿದ್ದಾನೆ; ಆದರೂ ಅವನು—ಕದಿರೇಕೆ ಸುತ್ತುವರಿಯುತ್ತದೆ? ಅದೇಕೇ ಏಳುತ್ತದೆ? ಅದರ ಪಟ್ಟಿಯೇಕೆ ದುಂಡಾಗಿರುತ್ತದೆ? ಹಿಡಿಯೇಕೆ ವೃತ್ತಾಕಾರದ್ದಿರುತ್ತದೆ? ಚಕ್ರದ ವ್ಯಾಸಾರ್ಧವೆಷ್ಟು? ಹಿಡಿಯುದ್ದವೆಷ್ಟು? ಎಂಬಂತಹ ಸಲಭ ಪ್ರಶ್ನೆಗಳನ್ನು ತನಗೆ ತಾನೇ ಕೇಳಿಕೊಳ್ಳಲಿಲ್ಲವೆ? ಅವು ಕುತೂಹಲ ಬುದ್ಧಿಯುಳ್ಳ ಯಾರಿಗಾದರೂ ಮಾಡದಿರವು. ಅವುಗಳ ಉತ್ತರಗಳು ಸುದ್ದಿಗಾರನು ಭಾವನಾಪರನಾದ ಅರ್ಥಹೀನ ಸಂಗತಿಗಳೆಂಬ ಆ ಯೋಚನೆಗಳನ್ನು ಹೇಳುತ್ತಿದ್ದವು.

ಆಗ ಅವುಗಳ ಸ್ವಾಭಾವಿಕತೆ ಅವನ ಬುದ್ಧಿ ನಿಲ್ಲಿಸುತ್ತಿದ್ದಿಲ್ಲ, ನಿಲ್ಲಿಸಿದವು, ನನ್ನೆದುರು ನನಗಾಗಿ ಎಷ್ಟು ಜ್ಞಾನವಿತ್ತು [illegible]." ಎಂದು ಆಶ್ಚರ್ಯಕ್ಕಾಗಿ ಮಾತ್ರ. [illegible] ಹೇಳುತ್ತಾನೆ.

—[illegible]

ಉಪವಾಸದ ಮುಗಿತಾಯ

ವಿವಿಧ ಧರ್ಮೀಯರ ಪ್ರತಿನಿಧಿಗಳ ಪ್ರತಿಜ್ಞೆ— ಮುಸಲ್ಮಾನ ಮುಖಂಡರ ಆಶ್ವಾಸನ— ಜಾತೀಯ ಸೌಹಾರ್ದ ಕಾಯ್ದುಕೊಳ್ಳಲು ಮಹಾತ್ಮರ ಸದಾಸಿದ್ಧ ಉಪವಾಸಾಸ್ತ್ರ—

ಜನವರಿ ೨೮ ರಂದು ಮಧ್ಯಾಹ್ನ ೧೨—೪೫ ಕ್ಕೆ ಬಿರ್ಲಾ ಭವನದಲ್ಲಿ ಗಾಂಧಿಜಿಯವರು ಉಪವಾಸ ವನ್ನು ಗಂಭೀರವಾಗಿ ಮುಗಿಸಿತು. ಇದು ಭಾರತ ಮತ್ತು ದಿಲ್ಲಿ ನಗರದಲ್ಲಿ ಉಂಟಾದ ಅಶಾಂತ್ಯ ಕಳ ವಳವನ್ನು ಕೊನೆಗಾಣಿಸಿತು. ಆ ವೇಳೆಗೆ, ನಗ ರದ ಪ್ರಮುಖ ಸಂಘ ಸಂಸ್ಥೆಗಳ ಮತ್ತು ನಗ ರದ ಅತ್ಯಂತ ದುರಂತಕ್ಕೊಳಗಾದ ಕರೋಲ ಭಾಗ ಸಬ್ಜೀಮಂಡಿ ಮತ್ತು ಪಹಾರಗಂಜ ಭಾಗ ಗಳ ನಿರಾಶ್ರಿತರ ಪ್ರತಿನಿಧಿಗಳು ಡಾ. ರಾಜೇಂದ್ರ ಪ್ರಸಾದರ ಮನೆಯಲ್ಲಿ ಸೇರಿ ಗಾಂಧಿಯವರು ಉಪವಾಸದ ಮುಗಿತಾಯಕ್ಕೆ ಹಾಕಿದ ಏಳು-ಮುದ್ದೆ ಕರಾರಿನ ಪತ್ರಕ್ಕೆ ಸಹಿ ಹಾಕಿದರು. ಗಾಂಧಿಯವರ ವಿಶೇಷ ಬಯಕೆಯ ಮೇರೆಗೆ ಹಸ್ತಾಕ್ಷರ ಪತ್ರವನ್ನು ದೇವನಾಗರಿ ಮತ್ತು ಪರ್ಶಿಯನ ಈ ಎರಡೂ ಲಿಪಿಗಳಲ್ಲಿ ಬರೆಸಿದ ರಾಯಿತು. ಸಭೆಯಲ್ಲಿ ಮೌಲಾನಾ ಆಜಾದ, ಮೇಜರ್ ಜನರಲ್ ಶಹಾನವಾಜಖಾನ, ಇವರೂ ಇದ್ದರು. ದಿಲ್ಲಿಯ ಮುಸಲ್ಮಾನರನ್ನು ಜಮಾ ಯತ ಉಲ್ ಉಲೇಮದ ಮೌಲಾನಾಗಳಾದ ಹಫೀಜುಲ್ ರಹಮಾನ ಮತ್ತು ಅಹಮದ ಸಾಯೀದರೂ ಮೌಲಾನಾ ಹಬೀಬುರ್‌ರಹಮಾ ನರೂ ಪ್ರತಿನಿಧಿಸಿದ್ದರು. ರಾಷ್ಟ್ರೀಯ ಸೇವಕ ಸಂಘವನ್ನೂ ಹಿಂದು ಮಹಾಸಭೆಯನ್ನೂ ಗೋಸ್ವಾಮಿ ಶ್ರೀ ಗಣೇಶದತ್ತ, ಶ್ರೀ ಬಸಂತಲಾಲ ಮತ್ತು ಶ್ರೀ ನಾರಾಯಣದಾಸರು ಪ್ರತಿನಿಧಿಸಿದ್ದರು. ವಿವಿಧ ಶೀಖ ಸಂಘದ ಪ್ರತಿನಿಧಿಗಳೂ ಅಲ್ಲಿ ದ್ದರು. ಒಟ್ಟಿನಲ್ಲಿ ೧೩೦ ಜನ (ಸುಮಾರು ೧೦೦ ಜನ) ಬಿರ್ಲಾ ಭವನಕ್ಕೆ ತೆರಳಿ ಗಾಂಧಿಯವರ ಕೊಠಡಿ ಯಲ್ಲಿ ನೆರೆದು ಉಪವಾಸ ಮುಗಿಸಬೇಕೆಂದು ಕೇಳಿಕೊಂಡರು. ಮೌಲಾನಾ ಸಾಹೇಬ ಮತ್ತು ಪಂ. ಜವಾಹರಲಾಲರು ಆಗಲೆ ಅಲ್ಲಿ ಹಾಜರಿ ದ್ದರು ಮತ್ತು ಸ್ವಲ್ಪ ಕಳೆದು ಪಾಕಿಸ್ತಾನದ ಹೈಕಮಿಶನರಾದ ಜನಾಬ್ ಜಹೀದ ಹುಸೇನ ಸಾಹೇಬರು ದಯ ಮಾಡಿಸಿದರು.

ಡಾ. ರಾಜೇಂದ್ರ ಪ್ರಸಾದರು ಅವರೆಲ್ಲರೂ ಮುಂಚಿನ ರಾತ್ರಿ ತಮ್ಮ ಮನೆಯಲ್ಲಿ ಸೇರಿ, ಚೆನ್ನಾಗಿ ಚರ್ಚಿಸಿ ಆಗಲೇ ಅಲ್ಲೇ ಆ ಪ್ರಕಟನೆಗೆ ಸಹಿ ಮಾಡಬೇಕೆಂದು ನಿರ್ಧರಿಸಿದ್ದನ್ನು ಗಾಂಧಿ ಯವರಿಗೆ ತಿಳಿಸುವುದರ ಮೂಲಕ ಕಾರ್ಯಕ್ರಮ ವನ್ನು ಪ್ರಾರಂಭಿಸಿದರು. ಆದರೆ, ಕೆಲವು ಸಂಘ ಗಳ ಪ್ರತಿನಿಧಿಗಳು ಹಾಜರಿಲ್ಲದ್ದರಿಂದ ಅವರು ಕೂಡಲೆ ಸಹಿ ಮಾಡಿದ ಪತ್ರ ತೆಗೆದುಕೊಂಡು ಗಾಂಧಿಯವರನ್ನು ನೋಡಿ ಹೋಗಬಾರದೆಂದೂ ಉಳಿದವರ ಸಹಿ ತೆಗೆದುಕೊಳ್ಳುವ ವರೆಗೆ ಕಾಯ ಬೇಕೆಂದೂ ಅವರು ಆಲೋಚಿಸಿದರೆಂದು ಪ್ರಸಾ ದರು ಮುಂಬರಿದರು. ಆ ಪ್ರಕಾರ ಅವರು ಬೆಳಿಗ್ಗೆ ಪುನಃ ಸೇರಿದರು ಮತ್ತು ರಾತ್ರಿ ಬಾರ ದಿದ್ದ ಎಲ್ಲರೂ ಬಂದು ತಮ್ಮ ತಮ್ಮ ಸಹಿ ಮಾಡಿ ದರು. ಬೆಳಿಗಿನ ಸಭೆಯಲ್ಲಿ ಮುಂಚಿನ ರಾತ್ರಿ ಯಲ್ಲಿ ಕೆಲಮಟ್ಟಿಗೆ ಸಂಶಯ ತಾಳಿದ್ದವರೂ ಕೂಡ ಸಂಪೂರ್ಣ ಜವಾಬ್ದಾರಿಯಿಂದ ಗಾಂಧಿ ಯವರನ್ನು ಉಪವಾಸ ಮುಗಿಸಲು ಕೇಳಿಕೊಳ್ಳ ಬಹುದೆಂಬ ಆತ್ಮವಿಶ್ವಾಸವನ್ನು ತಳೆದರು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ತಾವು ಸಂಯುಕ್ತ ವಾಗಿಯೂ ಬೇರೆ ಬೇರಾಗಿಯೂ ಅವರೆಲ್ಲರೂ ಸಹಿ ಮಾಡಿದ್ದಕ್ಕೆ ಜಾಮೀನಾಗಿ ಆ ಪತ್ರಕ್ಕೆ ಸಹಿ ಮಾಡುತ್ತಿರುವೆನೆಂದು ರಾಜೇಂದ್ರರು ನುಡಿ ದರು. ಅಲ್ಲಿ ಹಾಜರಿದ್ದ ದಿಲ್ಲಿಯ ಚೀಫ್ ಕಮಿಶ ನರರಾದ ಜನಾಬ ಖುರ್ಶೀದ ಮತ್ತು ಡೆಪ್ಯುಟಿ ಕಮಿಶನರರಾದ ಶ್ರೀ ರಂಧವ ಇವರು ಅಧಿಕೃತ ಪರವಾಗಿ ಸಹಿ ಮಾಡಿದ್ದರು. ಪ್ರತಿಜ್ಞೆಯನ್ನು ಜಾರಿಯಲು ಅನೇಕ ಸಮಿತಿಗಳನ್ನು ಸ್ಥಾಪಿಸ ಬೇಕೆಂದು ನಿರ್ಣಯವಾಗಿತ್ತು. ಗಾಂಧಿಯ ವರು ತಮ್ಮ ಉಪವಾಸ ಮುಗಿಸಬಹುದೆಂದು ಡಾ. ರಾಜೇಂದ್ರ ಪ್ರಸಾದರು ಅಂತಿಸಿದರು.

ಅನಂತರ ಶ್ರೀ ದೇಶಬಂಧು ಗುಪ್ತರು ಮಾತ ನಾಡಿದರು. ಆ ಬೆಳಿಗ್ಗೆ ಅಲ್ಲಿಯ ಸಬ್ಜಿ ಮಂಡಿ ಯಲ್ಲಿ ಸುಮಾರು ೧೫೦ ಮುಸ್ಲಿಮರ ಮೆರವಣಿಗೆ ಹೊರಟಾಗ ಅದನ್ನು ಆ ಸ್ಥಳದ ಹಿಂದು ನಿವಾಸಿ ಗಳು ಸ್ನೇಹದಿಂದ ಸ್ವಾಗತಿಸಿ ಹಣ್ಣು ಹಂಪಲು ಪಾನಕ ಪದಾರ್ಥಗಳನ್ನು ಕೊಟ್ಟು ಸ್ವಾಗತಿಸಿದ ರೆಂದು ಹೇಳಿದರು.

ನಾವು ಹೇಳಿದ್ದು ತಮ್ಮ ಹೃದಯದಾಳಕ್ಕೆ ಮುಟ್ಟಿತೆಂದರು ಗಾಂಧಿಯವರು. "ನೀವು ನಾನು ಕೇಳಿದ್ದೆಲ್ಲವನ್ನೂ ಕೊಟ್ಟಿದ್ದೀರಿ; ಆದರೆ ನೀವು ನಿಮ್ಮ ಮಾತಿಗೆ ಬದ್ಧರಾಗಿ ರಾಜಧಾನಿಯಲ್ಲಿ ಜನಾಬುದಾರರೆಂದೂ ಉಳಿದೆಡೆಗಳಲ್ಲಿ ಏನಾದರೂ ಸಂಭವಿಸಿದರೆ ನೀವು ಹೊಣೆಯಲ್ಲವೆಂದೂ ನಿಮ್ಮ ಮಾತಿಗೆ ಅರ್ಥವಾದರೆ ನಿಮ್ಮ ಜಾಮೀನಿಗೆ ಬೆಲೆಯಿಲ್ಲ; ಆಗ ನಾನೂ ನನ್ನ ಉಪವಾಸ ಮುಕ್ತಾಯ ವಿಫಲವೆಂದು ತಿಳಿಯುವಂತೆಯೂ 'ನೀವೂ ನಾನು ಉಪವಾಸ ನಿಲ್ಲಿಸಿದ್ದೊಂದು ದೊಡ್ಡ ಅಪರಾಧವಾ ಯಿತೆಂದು' ಅರಿಯುವಂತೆಯೂ ಆಗಬಹುದು. ಉ ದಾಹರಣೆಗಾಗಿ ಪತ್ರಿಕೆಯಲ್ಲಿ ಪ್ರಕಟವಾದ ಅಲಹಾ ಬಾದಿನ ಘಟನೆಗಳನ್ನು ತೆಗೆದುಕೊಳ್ಳಬಹುದು. ಏಳು ಮುದ್ದೆಯ ಕರಾರಿಗೆ ಆರ್. ಎಸ್. ಎಸ್. ಮತ್ತು ಹಿಂದುಮಹಾಸಭೆಯ ಪ್ರತಿನಿಧಿಗಳೂ ಸಹಿಹಾಕಿದವರೇ. ಅವರು ಸತ್ಯವಂತರಿದ್ದರೆ ಅವ ರೆಂದೂ ದಿಲ್ಲಿಯ ಹೊರಗಣ ಪ್ರದೇಶಗಳಲ್ಲಿ ಹುಚ್ಚು ಹರಿಯುವವರತ್ತ ಅಲಕ್ಷ್ಯತೋರಲಾರರು. ಹಾಗೆಮಾಡಿದರೆ ಅದು ದೇವರಿಗೆ ವಂಚನೆಮಾಡಿ ದಂತಾದೀತು. ದಿಲ್ಲಿಯು ಭಾರತೀಯ ಅಧಿರಾಜ್ಯದ ಹೃದಯ ಮತ್ತು ಇಲ್ಲಿನೆರೆದಿರುವ ಪ್ರತಿನಿಧಿಗಳಾದ ನೀವು ದಿಲ್ಲಿಯ ಜನತೆಯ ಕೆನೆಯೆನ್ನಿಸಿದ್ದೀರಿ. ಹಿಂದು ಮುಸಲ್ಮಾನರು ಸಹೋದರರೆಂಬುದನ್ನು ಇಡಿಭಾರತ ಅರಿಯುವಂತೆಮಾಡಲಾರಿರಾದರೆ ಎರಡು ಅಧಿರಾಜ್ಯಗಳಿಗೂ ಅದು ದುರ್ಭವಿಷ್ಯ ಸೂಚಕವಾದೀತು. ಅವರು ಪರಸ್ಪರ ಜಗಳವಾಡಿ ದರೆ ಹಿಂದುಸ್ತಾನಕ್ಕೆ ಏನು ಸಂಭವಿಸೀತು?"

ಇಲ್ಲಿ ಗಾಂಧಿಯವರ ಸ್ವರಬಿದ್ದು ಹೋಯಿತು. ಅವರು ಪುನಃ ಮಾತೆತ್ತುವಾಗ ತಮ್ಮ ಸ್ವರಬಿದ್ದು ಹೋಗಲು ಭಾವಾವೇಶವೇ ಕಾರಣವೆಂದು ಹೇಳಿ ದರು. ಆಕಾಲದಲ್ಲಿ ಅವರು ಹೇಳಿದ್ದನ್ನು ಸುಶೀಲಾ ನಯ್ಯರರೂ ನಾನೂ ಗಟ್ಟಿಯಾಗಿ ಎಲ್ಲರೂ ಕೇಳು ವಂತೆ ಹೇಳಿದೆವು.

ವಿರಮಿಸಿ ಪುನಃ ಮಾತೆತ್ತಿ "ನೀವು ನಿಮ್ಮ ಹೃದಯಗಳನ್ನು ಶೋಧಿಸಿರೆಂದು ಪುನಃ ಬೇಡಿ ಕೊಳ್ಳುತ್ತೇನೆ. ಏಕೆಂದರೆ ಆ ಮೇಲೆ ಪಶ್ಚಾತ್ತಾಪ ಪಡುವಂಥ ಯಾವಕಾರ್ಯವನ್ನೂ ಈಗ ನೀವು ಮಾತಕೂಡದು. ಈಗ ಅತ್ಯುನ್ನತವುಟ್ಟದ ಪ್ರೈರ್ಯ ಬೇಕು. ಇಂಥ ಸಂದರ್ಭದಲ್ಲಿ ನೀವು ನಿಮ್ಮ ಪ್ರತಿಜ್ಞೆಯ ಅರ್ಥವನ್ನು ಸ್ಪಷ್ಟವಾಗಿ ಅರಿತು ಕೊಳ್ಳಬೇಕು. ನೀವು ದಿಲ್ಲಿಯಲ್ಲಿ ಸಾಧಿಸಿದ್ದನ್ನೂ ಇಡಿ ಭಾರತದಲ್ಲಿ ಸಾಧಿಸಬೇಕಾಗಿದೆಯೆಂಬು ದಕ್ಕಿಂತ ಅದು ಎಳ್ಳಷ್ಟು ಕಡಿಮೆಯಿಲ್ಲ. ಅದ ರಿಂದ ಆದರ್ಶವನ್ನು ಒಂದೇ ದಿನದಲ್ಲಿ ಸಾಧಿಸ ಬಹುದೆಂದರ್ಥವಾಗುವುದಿಲ್ಲ. ಆದರೆ ಹಿಂದೆ ನೀವು ಏರಾಚಿಕರ್ಮನ್ನು ಮಾರಾಗಿದ್ದರೆ ಇಂದು ದೇವರೂ ನ್ನು ಖಿರಾಗಲು ಬದ್ಧ ಪ್ರತಿಜ್ಞರಾಗಿದ್ದೀರಿ. ನಾನು ನಿಮ್ಮ ಮಾರಿಗಿಟ್ಟದ್ದು ನಿಮ್ಮ ಹೃದಯಕ್ಕೆ ಹೋಗಿ ಮುಟ್ಟಿದ್ದರೆ ಇಲ್ಲವೆ ಅದು ನಿಮ್ಮಿಂದ ಸಾಧ್ಯ ವಾಗುವಂಥದಲ್ಲವೆಂದು ನಿಮಗನ್ನಿಸಿದರೆ ನನಗೆ ಸ್ಪಷ್ಟವಾಗಿ ಹಾಗೆ ಹೇಳಿಬಿಡಬೇಕು," ಎಂದರು ಗಾಂಧಿಯವರು.

ಮುಂಬರಿಯುತ್ತ ಅವರು, "ಹಿಂದುಸ್ತಾನವು ಹಿಂದುಗಳಿಗೆ ಮಾತ್ರ ಸೇರಿದ್ದು, ಮುಸಲ್ಮಾನರಿಗೆ ಇಲ್ಲಿ ಸ್ಥಾನವಿಲ್ಲ; ಪಾಕಿಸ್ತಾನವು ಮುಸಲ್ಮಾನರಿಗೆ ಮಾತ್ರ ಸೇರಿದ್ದು, ಹಿಂದು, ಶೀಖರಿಗೆ ಅಲ್ಲಿ ಸ್ಥಾನ ವಿಲ್ಲ— ಎಂದು ನೀವು ತಿಳಿದಿದ್ದರೆ ಅದಕ್ಕಿಂತ ಹೆಚ್ಚಿನ ತಪ್ಪಿಲ್ಲ. ದಿಲ್ಲಿಯಲ್ಲಿ ನನ್ನ ಸಲಹೆಯಂತೆ ಮೊದಲಿನ ಸ್ಥಿತಿಯನ್ನುಂಟು ಮಾಡಿದರೆ, ಪಾಕಿ ಸ್ತಾನದಲ್ಲೂ ಹಾಗೆ ಮಾಡುವುದೊಂದೇ ಸರಿ ಯಾದ ಮಾರ್ಗವೆನ್ನಿಸುವುದು ಎಂಬುದನ್ನು ನಿರಾಶ್ರಿತರು ಮನಗಾಣಬೇಕು. ನಾನು ಇನ್ನೊಂದು ಉಪವಾಸ ಮಾಡಲು ಎಂದೂ ಹಿಂಜರಿಯುವವನಲ್ಲವೆಂಬುದನ್ನು ನಿಮಗೆ ನೆನಪು ಮಾಡಿಕೊಡುತ್ತೇನೆ. ನನ್ನನ್ನು ನೀವುವಂಚಿಸಿದ್ದೀರಿ ಇಲ್ಲವೆ ಆಕಾಲದಲ್ಲೇ ನಾನು ಉಪವಾಸವನ್ನು ಮುಗಿಸಿದೆ ಎಂದು ನನಗೆ ಅನಂತರ ತಿಳಿದರೆ ನಾನು ಮತ್ತೊಮ್ಮೆ ಉಪವಾಸವನ್ನು ಕೈಕೊಳ್ಳುವುದೇ ಸರಿ. ಅದುದರಿಂದ ನೀವು ನಿಮ್ಮನ್ನು ಪರೀಕ್ಷಿಸಿ ಕೊಂಡು ಸೂರಕ್ಕೆ ಸೂರರಲ್ಲ ಪ್ರಾಮಾಣಿಕತೆ ಯಿಂದ ಕಾರ್ಯಾಸಕ್ತರಾಗಬೇಕು," ಎಂದರು. ಆ ಮೇಲೆ ಅವರು ಪದೇ ಪದೇ ತಮ್ಮ ಸಂದರ್ಶನ ವನ್ನು ತೆಗೆದುಕೊಳ್ಳುತ್ತಿದ್ದ ಮುಸಲ್ಮಾನ ಪ್ರತಿ ನಿಧಿಗಳನ್ನು ಕುರಿತು ತಾವು ಉಪವಾಸ ನಿಲ್ಲಿಸ ಬಹುದೆಂಬಷ್ಟು ದಿಲ್ಲಿಯ ಪರಿಸ್ಥಿತಿ ಶಾಂತವಿರುವು ದೆಂದು ಅವರಿಗೆ ಸಮಾಧಾನವಿರುವುದೋ ಹೇಗೆ ಎಂದು ತಿಳಿಸಬೇಕೆಂದು ಕೇಳಿದರು.

ಆ ಬಳಿಕ ವಿಶೇಷತಃ ಮುಸ್ಲಿಮರನ್ನು ಕುರಿತು ಗಾಂಧಿಯವರು ಒಂದೆರಡು ಮಾತುಗಳನ್ನು ಹೇಳಿದರು: "ಮುಸಲ್ಮಾನರು ಭಾರತವನ್ನು ತಮ್ಮ ದೇಶವೆಂದು ತಿಳಿದುಕೊಂಡಿಲ್ಲವೆಂಬ ಸಂಶಯ ಪಡಲು ಕಾರಣವುಂಟೇ? ಬೇರೆನು ಮಾಡಲೂ ಸಾಧ್ಯವಿಲ್ಲವಾಗಿ ನೀವು ಹಿಂದುಗಳ ನಡುವೆ ಇದ್ದೀರಿ; ಆದರೆ ಒಂದು ದಿನ ನೀವು ಬೇರಾಗಲೇ ಬೇಕು— ಎಂಬುದು ನಿಜವೆ? ಈ ಸಂಶಯಕ್ಕೆ ಬುಡವಿಲ್ಲವೆಂದು ನಾನು ನಂಬುತ್ತೇನೆ. ಹಾಗೆಯೇ, ಮುಸ್ಲಿಮರು ಯವನರು ಇಲ್ಲವೆ ಅಸುರರು. ಅವರಿಗೆ ದೇವತಾಜ್ಞೆ ಸ್ವಾಗತವಾಗದು ಎಂದು ತಿಳಿದ ಹಿಂದುವೊಬ್ಬನಿದ್ದರೆ ಅವನು ಅತ್ಯಧಮ ಪಾಖಂ ಡಿತ್ವದ ಅಪರಾಧ ಮಾಡಿದವನಾಗುತ್ತಾನೆ. ಇಲ್ಲಿ ಸಹಿ ಮಾಡಿದವರ ಆಶ್ವಾಸನ ವಚನದಲ್ಲಿ ಅಂಥ ಪಕ್ಕೆ ಎಂದೂ ಎಡೆಯಿರಲಾರದೆಂದು ಆಶಿಸು ತ್ತೇನೆ."

ಅನಂತರ ಗಾಂಧಿಯವರು ಪಾಟ್ನಾದಲ್ಲಿ ತಮಗೆ ಮುಸಲ್ಮಾನ ಗೆಳೆಯನೊಬ್ಬನು ಪ್ರೀತಿಯಿಂದ ಕೊಟ್ಟ ಪುಸ್ತಕವೊಂದನ್ನು ಗಮನಿಸಿದರು. ಆ ಪುಸ್ತಕದಲ್ಲಿ ಕುರಾನಿನ ಪ್ರಕಾರ ಕಾಫರರು (ಹಿಂದುಗಳು) ವಿಷಸರ್ಪಗಳಿಗಿಂತಲೂ ಹೇಯ ವಾದವರೆಂದೂ ಅವರು ಕೇವಲ ವಧಾರ್ಹರೆಂದೂ ಲೇಖಕನು ಸಾಧಿಸಿದ್ದನು; ಅವರನ್ನು ನಿರ್ನಾಮ ಗೊಳಿಸಲು ಕಲ್ಪನೆಗೆ ಹೊಳೆದ ಯಾವ ಬಲಾತ್ಕಾರ ಇಲ್ಲವೆ ವಂಚನೆಯನ್ನು ಬಳಸಿದರೂ ಪಾಪವಿಲ್ಲ ವಲ್ಲದೆ ಹಾಗೆ ಮಾಡುವುದೇ ದೇವರ ದೃಷ್ಟಿಯಲ್ಲಿ ಒಂದು ಪುಣ್ಯ ಎಂದು ಅವನು ಬರೆದಿದ್ದನು. ಅದ ನ್ನೆತ್ತಿಯಾವ ಪ್ರೈವಭಕ್ತಮುಸಲ್ಮಾನನೂ ಆ ನಂಬಿ ಗೆಗೆ ಬೆಂಬಲವೀಯಲಾರನಲ್ಲದೆ ಗುಪ್ತವಾಗಿಯಾ ದರೂ ಅದಕ್ಕೆ ಸಹಾನುಭೂತಿ ತೋರಲಾರನೆ ಎಂದು ತಮಗೆ ಧೃಢವಿಶ್ವಾಸವಿರುವುದೆಂದರು ಗಾಂಧಿಯವರು. "ಕೆಲವರು ಹಿಂದುಗಳು ವಿಗ್ರ ಹಾರಾಧಕರೆಂದು ಹಳಿಯುತ್ತಾರೆ! ಯಾರಿಲ್ಲದ ಒಂದು ಪದಾರ್ಥಕಣವೂ ಅಸ್ತಿತ್ವದಲ್ಲಿ ಇಲ್ಲವಾ ರದೋ ಅಂತಹ ವಿಗ್ರಹಕ್ಕೆ ದೇವರನ್ನಲ್ಲದೆ ಹಿಂ ದುಗಳು ಬರಿಯ ಕಲ್ಲುಗೊಂಬೆಯನ್ನು ಪೂಜಿಸು ವುದಿಲ್ಲ. ಒಬ್ಬ ಭಕ್ತನು ಒಂದು ವಿಗ್ರಹದಲ್ಲಿ ದೇವರನ್ನು ಕಂಡರೆ ಅದು ನಿಂದ್ಯವಲ್ಲ ನನ್ನ ಈ ನಂಬಿಗೆಯೊಂದು ಭ್ರಾಂತಿಯೆನಿಸಿದ ಪಕ್ಷದಲ್ಲೂ ಅದು ನನ್ನನ್ನಲ್ಲದೆ ಅನ್ಯರನ್ನು ಭ್ರಮೆಗೊಳಿಸಲಾ ರದು. ಇತರರ ಧಾರ್ಮಿಕ ಶ್ರದ್ಧೆ ಮತ್ತು ಆಚಾರ ಗಳನ್ನು ತಿಳಿಯಲು ಔದಾರ್ಯ ಮತ್ತು ದೃಷ್ಟಿ ವೈಶಾಲ್ಯ ಇರಬೇಕು. ಕುರಾನು ಇಲ್ಲವೆ ಗ್ರಂಥ ಸಾಹೇಬವನ್ನು ದೇವರೆಂದು ತಿಳಿದರೆ ಹೇಗೋ [illegible]"

ಮಾತು ಮುಗಿಸುತ್ತ, "ನೀವು ನಿಮ್ಮ ವಚನದ ಅರ್ಥವನ್ನು ಸಂಪೂರ್ಣವಾಗಿ ಸ್ವೀಕರಿಸಿದರೆ ಅದು ನನ್ನನ್ನು ದಿಲ್ಲಿಯಿಂದ ಬಿಡಿಸಿ ಪಾಕಿಸ್ತಾ ನಕ್ಕೆ ಹೋಗಲು ನಿರಾತಂಕಮಾಡಿಕೊಡುತ್ತದೆ. ನನ್ನ ಸ್ನೇರು ಹಾಜರಿ[illegible] ಮರಳಬೇ ಕೆಂಬ ಪಾಕಿಸ್ತಾನೀ [illegible] ಸ್ವಾಗತಿಸ ಬೇಕು. ಹಿಂದೀ [illegible]ಟದಲ್ಲಿ ಹಿಂದೀಯರು ಮುಸಲ್ಮಾನ[illegible]ಗಾರರನ್ನು [illegible] ಹೇಗೆ [illegible] ಹಾಗೇ ಪಾಕಿ[illegible] ಗಳು ಮು[illegible] ಉದ್ಯಮಿಗಳನ್ನು [illegible] [illegible] ಕಲಾ ಕೌಶಲ ನ್ನು [illegible] ಅಸ್ತೀ ನಾ [illegible] ಪಕ್ಷದಲ್ಲಿಗೂ ನಷ್ಟವೇ; [illegible] ಕೆಲಸವನ್ನು ಬುದ್ಧಿ ಸರಿಯುಳ್ಳ ಯಾರೂ ಮಾಡಲಾರರು" ಎಂದು ಗಾಂಧಿಯವರು ಸಾರಿದರು.

ಕೊನೆಯಲ್ಲಿ, "ಮತ್ತೊಮ್ಮೆ ಕೇಳುತ್ತೇನೆ: ದೀಪವನ್ನು ಒಳವೊಗ ಮಾಡಿ ಅತ್ಮ ಶೋಧ ಮಾಡಿಕೊಳ್ಳಿರಿ. ನನ್ನನ್ನು ನೀವು ವಂಚಿಸಿಕೊ ಳ್ಳಬೇಡಿರಿ; ಇತರರನ್ನು ಮೋಸಗೊಳಿಸದಿರಿ. ನಿಮ್ಮ ಹೃದಯದಲ್ಲಿ ನಾನು ಹೇಳಿದ್ದಕ್ಕೆ ಅನು ಕೂಲ ಪ್ರತಿಕ್ರಿಯೆ ಉಂಟಾಗದಿದ್ದರೆ ನನ್ನನ್ನು ಉಪವಾಸ ನಿಲ್ಲಿಸುವಂತೆ ಕೇಳಿಕೊಳ್ಳಬೇಡಿರಿ" ಎಂದು ಮಹಾತ್ಮರು ಅಂತಿ ಮಾಡಿಕೊಂಡರು.

ಏನಾದರೂ ಮಾತನಾಡಬೇಕೆಂದು ಆ ಬಳಿಕ ಮೌಲಾನಾ ಸಾಹೇಬ ಅಬ್ದುಲ್‌ಕಲಾಂ ಆಜಾದ ರನ್ನು ಕೇಳಿಕೊಂಡಾಗ ಅವರು— "ಜಾತೀಯ ಶಾಂತಿಯ ಪಾಮೀನಿನ ವಿಚಾರವಾಗಿ ಹೇಳುವು ದಾದರೆ, ಅದನ್ನು ದಿಲ್ಲಿಯ ನಾಗರಿಕರ ಪ್ರತಿನಿಧಿ ಗಳು ಮಾತ್ರ ಕೊಡಬಲ್ಲರು. ಆದರೆ ಗಾಂಧಿಯ ವರು ಉಸುರಿದ ಮುಸ್ಲಿಂ ಗೆಳೆಯನ ಅಭಿಪ್ರಾ ಯವನ್ನು ನಾನು ಪ್ರಶ್ನಿಸಿದರಲಾರೆ. ಏಕೆಂದರೆ ಅದು ಇಸ್ಲಾಮಿನ ತತ್ವಗಳಿಗೆ ಸಂಬಂಧಿಸಿದೆ. ಅವನ ಅಭಿಪ್ರಾಯವು ಇಸ್ಲಾಮಿನ ವಿರುದ್ಧ ಒಂದು ದಾಳಿಯೆಂದೇ ನಾನು ಸಾರುತ್ತೇನೆ. ನಾನು ಹೇಳುವ ಕುರಾನಿನ ಈ ಶ್ಲೋಕದಲ್ಲಿ ಮೂಸವರೆಲ್ಲರೂ ಸಹೋದರರು... ಕುಲ ಧರ್ಮ ಯಾವುದೇ ಇರಲಿ ಎಂದು ಹೇಳುವುದನ್ನು ಲಕ್ಷಿಸಿರಿ. ಗಾಂಧಿಯವರು ಉದ್ಧರಿಸಿದ ಅಭಿ ಪ್ರಾಯವು ಇಸ್ಲಾಮಿನ ಉಪದೇಶಗಳಿಗೆ ಶತ್ರು ರೂಪವಾದುದು. ಅದು ಇತ್ತೀಚಿಗೆ ಜನರ ಕೆಲ ಸಂಗಡಿಗಳಿಗೆ ಹಿಡಿದ ಹುಚ್ಚಿನ ಗುರುತಾಗಿದೆ" ಎಂದು ನಿವರಿಸಿದರು.

ಅವರ ನಂತರ ಮೌಲಾನಾ ಹಫೀಜುರ್‌ರಹ ಮಾನ ಸಾಹೇಬರು ಮಾತನಾಡಿದರು. ಮುಸಲ್ಮಾ ನರು ಪರಿಸ್ಥಿತಿಯ ಒತ್ತಾಯದಿಂದ ಅನಿವಾರ್ಯ ವಾಗಿ ಹಿಂದುಸ್ತಾನದಲ್ಲಿದ್ದಾರೆಂದೂ ಅವರ ಸಂಪೂರ್ಣವಾದ ಮತ್ತು ಅನಿಭಕ್ತವಾದ ಭಕ್ತಿ ಗೌರವಗಳಿಗೆ ಅರ್ಹವಾದ ಹಿಂದುಸ್ತಾನ ವನ್ನು ತಮ್ಮ ನಾಡೆಂದು ತಿಳಿಯುವುದಿಲ್ಲವೆಂದೂ ಹೇಳುವ ಅಪಾದನೆಯನ್ನು ತಾವು ಹಿಂದೆಮುಂದೆ ನೋಡದೆ ಖಂಡಿಸುವೆವೆಂದು ಹೇಳಿದರು. ಆ ಆಪಾದನೆ ಸುಳ್ಳೆಂದು ಸಿದ್ಧಪಡಿಸಲು ಬರೆದಿಟ್ಟ ತಮ್ಮ ೩೦ ವರ್ಷ ಅವಧಿಯ ಅಭಗ್ನ ಸೇವೆಯೇ ಸಾಕೆಂದು ಅವರು ಸಾರಿದರು: "ಭಾರತದ ಬಗ್ಗೆ ನಿಮಗೆ ಭಕ್ತಿ ಗೌರವಗಳಿವೆಯೆಂದು ಪುನಃ ಹೇಳಿರೆಂದು ಕೇಳುವುದು ಮುಸಲ್ಮಾನರ ರಾಷ್ಟ್ರೀ ಯತೆಗೆ ಅವಮಾನ ಮಾಡಿದಂತೆಯೇ ಸರಿ. ಇತ್ತೀ ಚಿಗೆ ದಿಲ್ಲಿಯಲ್ಲಿ ಗಲಭೆ ನಡೆದ ಒಂದು ಕಾಲದಲ್ಲಿ ನಗರದಲ್ಲಿ ತಕ್ಕ ರಕ್ಷಣೆಯನ್ನು ಕೊಡಲು ತಮಗೆ ಸಾಧ್ಯವೆಂಬುದರಲ್ಲಿ ನಂಬಿಗೆ ಕಡಿಮೆಯಾಗಿ ಕಾಂಗ್ರೆಸ ಗೆಳೆಯರು ತಮ್ಮನ್ನು ನಗರದ ಹೊರಗೆ ಸುರಕ್ಷಿತವಾಗಿಡುವುದಾಗಿ ಹೇಳಿದ್ದು ನಿಮಗೆ ಗೊತ್ತಿರಬಹುದು. ಆದರೆ ನಾವು ಅದರ ಅಗತ್ಯ ವಿಲ್ಲವೆಂದು ಹೇಳಿ, ದೇವರಲ್ಲಿ ನಂಬಿಗೆಯಿಟ್ಟು ಪೋಲೀಸರ ಕಾವಲಿಲ್ಲದೆ ಎಲ್ಲೆಂದರಲ್ಲಿ ನಗರದಲ್ಲಿ ತಿರುಗುವುದೇ ಒಳ್ಳೆಯದೆಂದು ಹೇಳಿ ಹಾಗೇ ಉಳಿದೆವು.

"ಜನಾಯತರ ಬಗ್ಗೆ ಹೇಳಬೇಕಾದರೆ, [illegible] ಕಾಂಗ್ರೆಸು ಮತ್ತು ಮೌಲಾನಾ ಆಜಾದರ [illegible] ವಾದ ಅನುಯಾಯಿಗಳು. ಪಾಕಿಸ್ತಾನಕ್ಕೆ [illegible] ಹೋದವರು ಹಾಗೆ ಮಾಡಿದ್ದು ಪ್ರಾಣ[illegible] ಮತ್ತು ಅವಕ್ಕಿಂತಹೆಚ್ಚಿನದರ ಭಯದಿಂದ ಹೊರತು ದಯೆ ಗೆ ಭಾಜನರಾಗಿ, ಇಲ್ಲವೆ ನಷ್ಟಕ್ಕೆ ಗುರಿಯಾಗಿ ಇರದೆ ತಮ್ಮ ಸ್ವಂತ ಹಕ್ಕಿನಲ್ಲಿ ಸ್ವಾಭಿಮಾನ ಗೌರವಗ ಳಿಂದ ಭಾರತದ ನಾಗರಿಕರಾಗಿ ಇರಬೇಕೆಂದು ಅಪೇಕ್ಷಿಸಿದ್ದರು. ಭಾರತದಮೇಲೆ ಹೊರಗಿನವರು ದಾಳಿಮಾಡಿದ್ದೇ ಇದರೆ ಸಾವೆಲ್ಲರೂ ಕಡೆಯ ಮನುಷ್ಯನವರೆಗೆ ರಕ್ಷಣೆಗಾಗಿ ಹೋರಾಡುತ್ತೇವೆ. ಹಾಗೆಮಾಡಲು ಸಿದ್ಧರಿಲ್ಲದವರು ಭಾರತವನ್ನು ಬಿಟ್ಟು ಪಾಕಿಸ್ತಾನಕ್ಕೆ ಹೋಗಬೇಕೆಂದು ನಾವು ಆಗಲೇ ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇವೆ." ಎಂದು ಒದರುತ್ತಿದರು.

ಮುಂಬರಿದು ಮೌ. ಹಫೀಜುರರು—"ಗಾಂಧಿ ಯವರ ಉಪವಾಸದಿಂದ ದಿಲ್ಲಿಯು ಬದಲಾಯಿ ಸಿಬಿಟ್ಟಿದೆ. ಇದನ್ನು ನಾವು ಒಂದು ಶುಭೋದಯ ವೆಂದು ತಿಳಿಯುತ್ತೇವೆ; ಮುಂದಿನ ಸಂಗತಿಗಳಿ ಗಿದೊಂದು ಶುಭಶಕುನವೆಂದು ಗಣಿಸುತ್ತೇವೆ. ಉಬ್ಬರವೇರು ಈಗ ನಿಶ್ಚಿತವಾಗಿ ಅಡ್ಡಿತಗಿದೆ. ಮೊದಲು ಮನುಷ್ಯಾಯ ಮತ್ತು ಹಗೆತನ ಕುದಿ ಯುತ್ತಿದ್ದ ಸ್ಥಳದಲ್ಲಿ ಈಗ ಜಾತೀಯ ಸನುತೆ ಮತ್ತು ಶಾಂತಿಯನ್ನು ಹೊತ್ತುಕೊಂಡು ಭಾರ ತದ ಪ್ರವಾಹವು ಹರಿಯತೊಡಗಿದೆ. ಈಗ ಜನರ ಪ್ರತಿನಿಧಿಗಳು ಕೊಟ್ಟ ಆಶ್ವಾಸನಕ್ಕೆ ಅಧಿಕೃತದ ಅಧಿಕಾರಿಗಳು ಅಂಕಿತವಿಟ್ಟಿರುವುದು ಆ ಆಶ್ವಾಸನ ವನ್ನು ಕೆಲಕಾಲದಲ್ಲಿ ಆಚರಣೆಯಲ್ಲಿ ತರಲಾಗು ವುದೆಂಬುದಕ್ಕೆ ಆಧಾರವಾಗಿದೆ. ಅದರಿಂದ ನಾವು ಸಮಾಧಾನ ಹೊಂದಿದ್ದೇವೆ. ಆದುದರಿಂದ ರಾಜೇಂದ್ರರೊಡನೆ ನಾನೂ ಗಾಂಧಿಯವರು ಉಪ ವಾಸವನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ" ಎಂದರು.

ಆ ಬೇಡಿಕೆಯನ್ನು ಹಿಂದುಮಹಾಸಭೆ ಮತ್ತು ಆರ್. ಎಸ್. ಎಸ್ಸಿನ ಪರವಾಗಿ ಶ್ರೀ ಗಣೇಶ ದತ್ತರು ಪುನರುಚ್ಚಾರ ಮಾಡಿದಮೇಲೆ ಜನಾಬ ಜಹೀದ ಹುಸೇನ ಸಾಹೇಬರು ಗಾಂಧಿಯವರಿಗೆ ಒಂದೆರಡು ಮಾತುಗಳನ್ನು ಹೇಳಿದರು.

"ನಿಮ್ಮ ಬಗ್ಗೆ ಪಾಕಿಸ್ತಾನದ ಜನರು ಎಷ್ಟು ಗಾಬರಿಗೊಳಗಾಗಿದ್ದಾರೆ. ಅವರು ದಿನವೂ ಕಾತ ರರಾಗಿ ಹೇಗೆ ನಿಮ್ಮ ಆರೋಗ್ಯದ ಬಗ್ಗೆ ನನ್ನನ್ನು ವಿಚಾರಿಸುತ್ತಿರುವರು ಎಂಬುದನ್ನು ತಿಳಿಸಲು ನಾನು ಇಲ್ಲಿಗೆ ಬಂದಿದ್ದೇನೆ. ನೀವು ಉಪವಾಸ ನಿಲ್ಲಿಸುವಂಥ ಪರಿಸ್ಥಿತಿಯು ಬೇಗ ಉಂಟಾಗಲೆಂದು ಅವರೆಲ್ಲರ ಹೃದಯದ ಅಪೇಕ್ಷೆ. ಆ ಬಗ್ಗೆ ಯು ಕ್ತವಾಗಿ ನಾನೇನಾದರೂ ಮಾಡತಕ್ಕದಿದ್ದರೆ ನಾನೂ ಪಾಕಿಸ್ತಾನದ ಜನರೂ ಸಿದ್ಧರಿದ್ದೇವೆ," ಎಂದು ಅವರು ಭಾಷಣಮಾಡಿದರು.

ಅನಂತರ ಬಳಿಕ ಅಧಿಕೃತ ಶಾಖೆಯ ಪರವಾಗಿ ಜನಾಬ ಖುರ್ಶೀದ ಮತ್ತು ಶ್ರೀ ರಂಧವರು ಹಾಗ ರಿಕರ ಪ್ರತಿಜ್ಞಾ ಪತ್ರದಲ್ಲಿ ಕಾಣಿಸಲಾದ ಎಲ್ಲ ಕರಾರುಗಳನ್ನು ಯಥಾವತ್ತಾಗಿ ಆಚರಣೆಗೆ ತರ ಲಾಗುವದೆಂಬ ಆಶ್ವಾಸನವನ್ನು ಪುನಃ ಕೊಟ್ಟರು.

—೧೦ನೆಯ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ ಹೊಸದಿಲ್ಲಿ

೧೮—೧—೪೮

ಮಹಾತ್ಮಾ ಗಾಂಧಿಯವರು ತಮ್ಮ ಹಾಸುಗೆಯ ಬದಿಗಿರಿಸಿದ ಧ್ವನಿವಾಹಕ ಯಂತ್ರದ ಮುಖಾಂತರ ರವಿವಾರ ಸಂಜೆ ೫-೩೦ಕ್ಕೆ ನೂತನಾಡುತ್ತ ಪ್ರಾರ್ಥನಾ ಸಭೆಗೆ ಓದಿಹೇಳಲು ತಮ್ಮ ಸಂದೇಶವನ್ನು ಬರೆಯಿಸಿದ್ದಾಗಿದೆ ಎಂಬುದನ್ನು ನಿರೂಪಿಸಿ ಹೀಗೆ ನುಡಿದರು.

ಗುರುಗೋವಿಂದ ಜಯಂತಿಯ ದಿನದಂತಹ ಮಂಗಲ ಕಾಲಕ್ಕೆ ನಿಮ್ಮೆಲ್ಲರ ಕರುಣೆಯ ಫಲವಾಗಿ ನಾನು ನನ್ನ ಉಪವಾಸದ ಕಾಂಚ ಮಾಡಿದ್ದಕ್ಕೆ ನನಗೆ ಅತ್ಯಂತ ಆನಂದವಾಗಿದೆ. ನೀವೂ ಇದರಿಂದ ಆನಂದಿತರಾಗಿರಲು ಸಾಕು. ನನ್ನ ಉಪವಾಸವು ಪ್ರಾರಂಭವಾದಂದಿನಿಂದಲೂ ದಿಲ್ಲಿಯ ನಗರವಾಸಿಗಳಿಂದ ಪಾಕಿಸ್ತಾನದ ನಿರಾಶ್ರಿತರಿಂದ ಮತ್ತು ಅಲ್ಲಿಯ ಸರಕಾರದ ಅಡಳಿತಗಾರರಿಂದಲೂ ಅಧಿಕಾರಿಗಳಿಂದಲೂ ಸುರಿಮಳೆಯಾಗಿ ಬರುತ್ತಿರುವ ನಿಮ್ಮ ಕಾರುಣ್ಯವನ್ನು ನಾನೆಂದಿಗೂ ಮರೆಯಲಾರೆನು. ಇದೇ ಬಗೆಯ ಪ್ರೇಮ ಸುಖವನ್ನು ನಾನು ಕಲಕತ್ತೆಯಲ್ಲಿಯೂ ಅನುಭವಿಸಿದ್ದೆನು. ಕಲಕತ್ತೆಯಲ್ಲಿ ಶಾಂತಿಸ್ಥಾಪನೆಗಾಗಿ ಶಾಹೀದಸಾಹೇಬರು ನೀಡಿದ ಸಹಕಾರವನ್ನು ನಾನೆಂದಿಗೂ ನೆನಪಿಟ್ಟಿರುವೆನು. ನನಗೋಸುಗವಲ್ಲದೆ ಅವರು ಕಲಕತ್ತೆಯಲ್ಲಿ ನಿಲ್ಲುತ್ತಿರಲಿಲ್ಲ. ಜನರು ಅವರ ಸದಾಶಯದ ಬಗೆಗೆ ಇನ್ನೂ ಸಾಶಂಕರಾಗಿಯೇ ಇದ್ದರು. ಜನರು ಎಲ್ಲರೊಡನೆಯೂ ಸ್ನೇಹಭಾವದಿಂದಿರುವದನ್ನು ಕಲಿಯಬೇಕಲ್ಲದೆ ಯಾರೊಡನೆಯೂ ವೈರಭಾವವನ್ನು ಇಟ್ಟುಕೊಳ್ಳಕೂಡದೆಂಬುದನ್ನೂ ಅಭ್ಯಸಿಸಬೇಕು. ಕೋಟ್ಯನುಕೋಟಿ ಮುಸಲ್ಮಾನರು ದೇವತಾ ಮನುಷ್ಯರು ಆಗಿರ ವದು ಸಾಧ್ಯವಿಲ್ಲ. ಹಿಂದುಗಳಾಗಲೀ ಶೀಖರಾಗಲೀ [illegible]ಗಿರುವರೇ? ಎಲ್ಲ ಧರ್ಮಗಳಲ್ಲಿಯೂ [illegible] ಜನರ ಸಮ್ಮಿಶ್ರ ವಣವು ಇದ[illegible] ತಮ್ಮ ಸಂಗಡದೊಳಗಿನ ದುಷ್ಟರೊಡನೆ ಇರುವಾಗ ಕಡನು ಕ್ಷೇಪ ತೋರುವದಲ್ಲಿಯಾದರೂ ಉಂಟೆ?

ಮುಸಲ್ಮಾನರು ಪ್ರಪಂಚದಲ್ಲೆಲ್ಲ [illegible] ಅಸಂಖ್ಯಾತ ಜನತೆ. ಅಖಂಡ [illegible] ಸ್ನೇಹವಾಗಿದ್ದವರು ಒಕ್ಕೂಟದ ಮುಸ[illegible]ನರೊಡನೆ ಸ್ನೇಹವಾಗಿರಲಾರರೆ? ನಾನೇನು ಭವಿಷ್ಯ ಹೇಳುವವನಲ್ಲ. ಆದರೂ ದೇವರು ನನಗೆ ಸಾಕಷ್ಟು ಬುದ್ಧಿ ಶಕ್ತಿಯನ್ನು [illegible] ಅದರ ನೆರವಿನಿಂದ, ಮುಸಲ್ಮಾನರು [illegible] ಮುಸಲ್ಮಾನರೊಡನೆ ಅದಾವುದೇ [illegible]ದಿಂದ ಸ್ನೇಹವಾಗಿ ನಡೆದುಕೊಳ್ಳಲಾರದೆ ಹೋದರೆ ಇಡೀ ಜಗತ್ತಿನ ಮುಸಲ್ಮಾನರು ಇದನ್ನು ಖಂಡಿತ ವಿರೋಧಿಸುವರೆಂದೂ ಹಾಗೂ ಅವರು ಹಿಂದುಸ್ತಾನಕ್ಕೆ ಎರವಾಗಬೇಕಾಗುವದೆಂದೂ ನಾನು ತಿಳಿದುಕೊಳ್ಳಬಲ್ಲೆ. ಆ ಮೇಲೆ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಮತ್ತೊಮ್ಮೆ ಪರಕೀಯರ ಪ್ರಭುತ್ವಕ್ಕೆ ಒಳಗಾಗಬೇಕಾಗುವದು.

ನನಗೆ ಅನೇಕಾನೇಕ ಸ್ತ್ರೀ ಪುರುಷರಿಂದ ಶುಭಾಶಯಗಳು ಬಂದಿವೆ. ದಿಲ್ಲಿಯಲ್ಲಿ ಹಿಂದುಗಳು, ಮುಸಲ್ಮಾನರು, ಶೀಖರು, ಪಾರಸಿಗಳು, ಜ್ಯೂ ಜನರು, ಕ್ರಿಶ್ಚಿಯನ್ನರು ಇನ್ನುಳಿದವರು ಎಲ್ಲರೂ ಅಣ್ಣ ತಮ್ಮಂದಿರಂತೆ ಕೂಡಿ ಇರುವದಾಗಿ ನನಗೆ ಅಭಿವಚನ ಕೊಡಲಾಗಿದೆ. ಅವರು ಇನ್ನೆಂದೂ ತಮ್ಮ ತಮ್ಮೊಳಗೆ ಬಡಿದಾಡುವದಿಲ್ಲವೆಂದು ಹೇಳಿದ್ದಾರೆ. ಹೀಗೆ ಹೇಳಿದವರಲ್ಲಿ ಪಾಕಿಸ್ತಾನದಿಂದ ಬಂದ ದುಃಖಿಗಳೂ ಇದ್ದರು. ಇದೇನು ಸಣ್ಣ ಮಾತಲ್ಲ. ಈ ಶುಭ ಕಾರ್ಯಪ್ರಾರಂಭವಾಗಿ ಮುಂದರಿದಲ್ಲಿ ಹಿಂದುಸ್ತಾನದಲ್ಲಿಯೂ ಪಾಕಿಸ್ತಾನದಲ್ಲಿಯೂ ಖಂಡಿತ ಶಾಂತಿಯು ನೆಲೆಗೊಳ್ಳುವದು, ಇದು ಬಲ್ಪರ ಕೆಲಸವಲ್ಲ. ಹೆಣ್ಣು, ಗಂಡು, ಹುಡುಗರು, ಮುದುಕರು ಎಲ್ಲರೂ ಈ ಕೆಲಸದಲ್ಲಿ ಪ್ರಾಮಾಣಿಕವಾಗಿ ಸಹಕರಿಸಬೇಕು. ಇದಾಗದಿದ್ದಲ್ಲಿ ನಾನು ಉಪವಾಸ ಮುರಿದದ್ದಕ್ಕೆ ಅರ್ಥವೇ ಇಲ್ಲ. ಹೀಗಾದರೆ ಅವರು ತಮ್ಮ ವಚನದ ಅಕ್ಷರವನ್ನು ಮಾತ್ರ ಪಾಲಿಸಿ ಅದರ ಅಂತರ್ಗತ ಸಾರವನ್ನು ಕೊಲೆ ಮಾಡಿದಂತೆಯೇ. ದಿಲ್ಲಿಯಲ್ಲಿ ಸಾಧ್ಯವಾದದ್ದು ಒಕ್ಕೂಟದ ಇನ್ನುಳಿದ ಭಾಗಗಳಲ್ಲಿಯೂ ಸಾಧ್ಯ. ಒಕ್ಕೂಟದಲ್ಲಿ ಎಲ್ಲೆಡೆಗೆ ಜಾತೀಯ ಐಕ್ಯವು ತಲೆದೋರಿದರೆ ಪಾಕಿಸ್ತಾನವೂ ಇದನ್ನು ನಿಶ್ಚಯವಾಗಿ ಅನುಸರಿಸುವದು. ಎಲ್ಲ ಭಯವನ್ನು ತೊರೆದು ಬಿಡಬೇಕು. ಹಿಂದೂ ಮತ್ತು ಶೀಖರ ಮಧ್ಯದಲ್ಲಿ ಪ್ರತಿಯೊಂದು ಮುಸಲ್ಮಾನ ಕೂಸು ಕೂಡ ತಾನು ಸುರಕ್ಷಿತನಾಗಿರುವೆನೆಂದು ಭಾವಿಸುವಂತಾಗಬೇಕು. ಅವರಿಗೆ ನಮ್ಮ ಮುಖವು ಸೈತಾನನ ಕಡೆಗೆ ಹೊರಳಿತ್ತು. ಇನ್ನು ಮೇಲಾದರೂ ನವು ದೇವರನ್ನು ಒಲಿಸಿಕೊಳ್ಳುವೆವೆಂದು ಆಶಿಸುವಾ. ಹೀಗೆ ಮಾಡಿದ್ದಾದರೆ ಹಿಂದೀ ಒಕ್ಕೂಟವು ಜಾಗತಿಕ ಶಾಂತಿಗೆ ಮಾರ್ಗದರ್ಶಿಯಾಗುವದು. ಇನ್ನಾವ ಧ್ಯೇಯಸಾಧನೆಗೂ ನಾನು ಬಾಳಬಯಸುವದಿಲ್ಲ, ಕೇವಲ ಶಾಬ್ದಿಕ ಸೇವೆಯು ಕೆಲಸಕ್ಕೆ ಬಾರದು. ನೀವು ನಿಮ್ಮ ಹೃದಯದಲ್ಲಿ ದೇವರನ್ನು ಅಧಿಷ್ಠಾನಗೊಳಿಸಬೇಕು. ಯಾವ ಹೆಸರಿದ್ದರೂ ದೇವರು ಒಬ್ಬನೇ. ಈ ಸತ್ಯದ ಆವಿಷ್ಕರಣವು ಎಲ್ಲಬಗೆಯ ಅಸಹನೆಯನ್ನೂ ವೈರವನ್ನೂ ಕೊನೆಗೊಳಿಸಬೇಕು.

ಬಿರ್ಲಾಭವನ ಹೊಸದಿಲ್ಲಿ

೧೯—೧—೪೮

ಅಭಿನಂದನೆ ಮತ್ತು ಕ್ಷೇಮಾಭಿಲಾಷೆ

ಜಗತ್ತಿನ ಮೂಲೆ ಮೂಲೆಗಳಿಂದ ಹಿಂದೀಯರೂ ಹಿಂದೀಯರಲ್ಲದವರೂ ತಮ್ಮ ಶುಭೇಚ್ಛೆಯನ್ನು ಕಾತರ ಭಾವವನ್ನು ವ್ಯಕ್ತಗೊಳಿಸಿ ಅಸಂಖ್ಯಾತ ತಂತಿಯ ಸಂದೇಶಗಳನ್ನು ಕಳುಹಿಸಿದ್ದಾರೆ. ಇವುಗಳು ನಾನು ಇಟ್ಟ ಹೆಜ್ಜೆಯು ಯುಕ್ತವೆಂಬುದನ್ನು ತೋರಿಸಿ ಕೊಡುತ್ತವೆ. ಇದರಿಂದ ಈ ಬಗ್ಗೆ ನನಗೆ ಹುಸು ಸಂದೇಹವಿತ್ತು ಎಂದು ಅರ್ಥವಲ್ಲ. ದೇವರು ಇರುವನೆಂಬ ಬಗ್ಗೆ ಮತ್ತು ಅವನು ಸತ್ಯಸ್ವರೂಪನೆಂಬ ಬಗ್ಗೆ ನನಗೆ ಎಳ್ಳಷ್ಟು ಸಂದೇಹವಿಲ್ಲದಿರುವಂತೆ ಈ ಬಗ್ಗೆಯೂ ನನಗೆ ಹುಸು ಕೂಡ ಸಂದೇಹವಿರಲಿಲ್ಲ. ಗಂಡಾಂತರ ತೊಲಗಿತೆಂದು ಉಸಿರಿಟ್ಟು ಶುಭ ಕೋರುವ ಅಭಿನಂದನೆಗಳು ಪ್ರವಾಹವಾಗಿ ಬರುತ್ತಿವೆ. ವೈಯಕ್ತಿಕವಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲು ಅಸಾಧ್ಯವಾದ ಕಾರಣ ಈ ಮಿತ್ರರು ನನ್ನನ್ನು ಕ್ಷಮಿಸಬೇಕು. ಈ ಬಗೆಯ ವೈಯಕ್ತಿಕ ಸ್ವೀಕಾರ ವಚನವನ್ನು ಅವರು ನನ್ನಿಂದ ನಿರೀಕ್ಷಿಸಲ್ಲವೆಂದೇ ನಾನು ಗ್ರಹಿಸಿದ್ದೇನೆ. ಇವುಗಳಲ್ಲಿ ಎರಡನ್ನು ಉಲ್ಲೇಖಿಸಬೇಕೆಂದು ನನ್ನ ಇತ್ತಾಶೆ. ಒಂದು ಪಶ್ಚಿಮ ಪಂಜಾಬದ ಮುಖ್ಯಮಂತ್ರಿಗಳು ಕಳುಹಿಸಿದ್ದು ಇನ್ನೊಂದು ಭೋಪಾಲದ ನವಾಬರು ಕಳುಹಿಸಿದ್ದು. ಅವರು ಇಂದು ಅಪರಿಚಿತ ಅವಿಶ್ವಾಸದ ಮಧ್ಯದಲ್ಲಿ ತೊಳಲಾಡುತ್ತಿದ್ದಾರೆ. ಇಲ್ಲಿ ಉಲ್ಲೇಖಿಸಿದ ಮಾತುಗಳೇ ಹೇಳಬೇಕಾದುದನ್ನು ಹೇಳಲಿ. ಇವುಗಳನ್ನು ಕಳುಹಿಸಿದವರಲ್ಲಿ ಪ್ರಾಮಾಣಿಕತೆ ಇರದಿದ್ದರೆ ಉಪವಾಸದಂಥ ಗಂಭೀರ ಸಮಯದಲ್ಲಿ ಅದನ್ನು ಕಳುಹಿಸದಿರಬಹುದಿತ್ತು.

ಇದು ಭೋಪಾಳದ ನವಾಬ ಸಾಹೇಬರಿಂದ ಬಂದುದು.

“ಸರ್ವಮತೀಯರ ಹೃದಯಗಳ ಪುನರ್ಮಿಲನಕ್ಕೆ ನೀವು ಮಾಡಿಕೊಳ್ಳುವ ಅವೇದನೆಯು, ಎರಡೂ ರಾಷ್ಟ್ರಗಳ ಸದಭಿಪ್ರಾಯದ ಜನಗಳ ಬೆಂಬಲವನ್ನು ದೊರಕಿಸದಿರದು. ಇದೇ ಪ್ರಕಾರವಾಗಿ ಪಾಕಿಸ್ತಾನ ಮತ್ತು ಹಿಂದುಸ್ತಾನಗಳ ಸ್ನೇಹಭಾವವೂ ತೀವ್ರತೆಯೂ ಬೆಳೆಯದಿರದು. ನಾವು ಭೋಪಾಲದಲ್ಲಿ ಕಳೆದ ಒಂದು ವರ್ಷದಿಂದ ಎಲ್ಲ ತೊಂದರೆಗಳನ್ನು ಸರ್ವಮತೀಯರೂ ಕೂಡಿ ಒಮ್ಮತದಿಂದ ಸ್ನೇಹಭಾವದಿಂದ ಸದಭಿಪ್ರಾಯ ಪ್ರೇರಣೆಯಿಂದು ಒಳ್ಳೆ ಯಶಸ್ವಿಯಾಗಿ ಎದುರಿಸುತ್ತಿದ್ದೇವೆ. ಇದರ ಫಲವಾಗಿ ಸಂಸ್ಥಾನದಲ್ಲಿ ಶಾಂತಿ ಭಂಗವಾಗುವಂತಹ ಒಂದಾದರೂ ಅನಿಷ್ಟ ಘಟನೆಯು ಸಂಭವಿಸಿರುವದಿಲ್ಲ. ನಮ್ಮಲ್ಲಿದ್ದ ಶಕ್ತಿ ಸರ್ವಸ್ವವನ್ನೂ ಸಂಚಯಿಸಿ ಈ ಸ್ನೇಹ ಭಾವವು ಕೊನೆವರೆಗೆ ಉಳಿವಂತೆ ನಾವು ಪ್ರಯತ್ನಿಸುತ್ತೇವೆಂದು ನಾವು ನಿಮಗೆ ಅಭಿವಚನ ಕೊಡುತ್ತೇವೆ.”

ಪಶ್ಚಿಮ ಪಂಜಾಬದ ಮುಖ್ಯ ಮಂತ್ರಿಗಳಿಂದ ಬಂದ ತಂತಿಯ ಪೂರ್ಣ ಪಾಠವನ್ನೂ ಕೊಡುತ್ತೇನೆ.

“ಉದಾತ್ತ ಧ್ಯೇಯ ಸಾಧನೆಗಾಗಿ ನೀವು ಮಾಡುತ್ತಿರುವ ಅಮೋಘ ಪ್ರಯತ್ನಕ್ಕಾಗಿ ಪಶ್ಚಿಮ ಪಂಜಾಬದ ಮಂತ್ರಿ ಮಂಡಲವು ತಮ್ಮ ಪ್ರಾಮಾಣಿಕವಾದ ಮೆಚ್ಚುಗೆಯನ್ನು ವ್ಯಕ್ತಗೊಳಿಸುತ್ತದೆ. ಈ ಮಂತ್ರಿಮಂಡಲವು ಅಲ್ಪಸಂಖ್ಯಾಕರ ವಿತ್ತ, ಜೀವನ, ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಸಾಧ್ಯವಾದುದನ್ನೆಲ್ಲ ಮಾಡಲು ಸದಾ ಹೆಣಗುತ್ತಲಿದೆ. ಹಾಗೂ ಅವರಿಗೆ ನಾಗರಿಕತೆಯ ಎಲ್ಲ ಅಧಿಕಾರಗಳನ್ನೂ ಕೊಡಬಯಸುತ್ತದೆ. ಈ ಮಂತ್ರಿಮಂಡಲವು ಈ ಧೋರಣವನ್ನು ಇನ್ನೂ ದ್ವಿಗುಣಿತ ಉತ್ಸಾಹದಿಂದ ಕಾರ್ಯಕಾರಿಯಾಗಿ ಮಾಡಲು ಪ್ರಯತ್ನಿಸುವದೆಂದು ನಾವು ನಿಮಗೆ ಅಭಿವಚನ ಕೊಡುತ್ತೇವೆ. ಭಾರತದಂತಹ ವಿಶಾಲ ದೇಶದಲ್ಲೆಲ್ಲ ಕೂಡಲೆ ಪರಿಸ್ಥಿತಿಯು ಸುಧಾರಿಸಿ ನೀವು ಉಪವಾಸವನ್ನು ನಿಲ್ಲಿಸುವಂತಾಗಲಿ ಎಂದು ನಾವು ಅತ್ಯಂತ ಕಾತರಭಾವದಿಂದ ನಿರೀಕ್ಷಿಸುತ್ತಿದ್ದೇವೆ. ನಿಮ್ಮಂತಹ ಅಮೌಲ್ಯವಾದ ಜೀವನವನ್ನುಳಿಸಲು ಈ ಪ್ರಾಂತವು ಅಗತ್ಯವಾದ ಸರ್ವ ಪ್ರಯತ್ನಗಳನ್ನೂ ಮಾಡುತ್ತದೆ.”

ಒಂದು ಎಚ್ಚರಿಕೆ

“ಔಚಿತ್ಯಹೀನ ಅನುಕರಣದ ಈ ದಿನಗಳಲ್ಲಿ ಯಾರಾದರೂ ಈ ಬಗೆಯ ಉಪವಾಸವನ್ನು ಕೈಕೊಂಡು ಇಷ್ಟೇ ಅಲ್ಪಾವಕಾಶದಲ್ಲಿ ಇಂತಹ ಪರಿಣಾಮವೂ ಫಲವೂ ದೊರಕುವದೆಂದು ನಿರೀಕ್ಷಿಸಿದರೆ ಅದು ಶುದ್ಧ ಮೂರ್ಖತನವೇ ಸರಿ. ಯಾರಾದರೂ ದುಡುಕಿದ್ದಾದರೆ ಅವರಿಗೆ ನಿರಾಶೆ ಕಟ್ಟಿಟ್ಟಂತೆಯೇ. ಅಲ್ಲದೆ ಅವರು ಸೋಲರಿಯದ ಒಂದು ಅಮೋಘ ಅಸ್ತ್ರವನ್ನು ನಿಷ್ಫಲಗೊಳಿಸುತ್ತಾರೆ. ಇದಕ್ಕಾಗಿ ಎರಡು ಕಠಿಣ ಅರ್ಹತೆ ಅವಶ್ಯ. ದೇವರಲ್ಲಿ ಅಚಲ ಶ್ರದ್ಧೆ ಮತ್ತು ಅವಮಾನವಾದ ಅಸಂದಿಗ್ಧವಾದ ಅಂತರ್ವಾಣಿಯ ಆದೇಶ ಮೂರನೆಯದೊಂದನ್ನೂ ನಾನು ಜೋಡಿಸಬಯಸುತ್ತೇನೆ. ಆದರೆ ಅದು ಅನಾವಶ್ಯಕ. ಅಮಾನವಾದ ಅಸಂದಿಗ್ಧ ಅಂತರ್ವಾಣಿಯ ಮೂಲಕ ಬಂದ ದೇವರ ಆದೇಶವು ಉಪವಾಸದ ಔಚಿತ್ಯವನ್ನೂ ಅವಧಿಯನ್ನೂ ಸೂಚಿಸುವದಲ್ಲದೆ ಆದರ ಕಾರಣದ ಯುಕ್ತಾಯುಕ್ತತೆಯನ್ನೂ ತೋರಿಸಿಕೊಡುವದು. ಇದರಿಂದ ದೀರ್ಘಕಾಲದ ಪೂರ್ವ ಸಿದ್ಧತೆಯು ಅವಶ್ಯವೆಂಬುದು ಒಡೆದು ಕಾಣುವಂತಿದೆ. ಆದ್ದರಿಂದ ಈ ಬಗೆಯ ಉಪವಾಸವನ್ನು ಯಾರೂ ಲಘುಭಾವದಿಂದ ಕೈಕೊಳ್ಳದಿರಲಿ.

ನಿಮ್ಮ ಎದುರಿಗಿದ್ದ ಕರ್ತವ್ಯ

“ದಿಲ್ಲಿಯ ನಿವಾಸಿಗಳ ಹಾಗೂ ನಿರಾಶ್ರಿತರೆಂದುರಿಗೆ ಗಂಭೀರ ಕರ್ತವ್ಯವಿದೆ. ಅವರು ಪರಸ್ಪರರನ್ನು ವಿಶ್ವಾಸ ಪೂರ್ವಕವಾಗಿ ಮತ್ತೆ ಮತ್ತೆ ಕಾಣುವ ಸಂದರ್ಭಗಳನ್ನು ಕಲ್ಪಿಸಿಕೊಳ್ಳಬೇಕು. ನಿನ್ನೆ ನಾನು ಮುಸಲ್ಮಾನ ಭಗಿನಿಯರ ದೊಡ್ಡ ಸಮೂಹವನ್ನು ನೋಡಿದಾಗ ನನಗೆ ತುಂಬ ಕಳವಳವಾಯಿತು. ನನ್ನನ್ನು ಕಾಣಬಹುದೊ ಇಲ್ಲವೊ ಎಂದು ಸಂದೇಹದಿಂದ ಅವರು ಬಿರ್ಲಾ ಭವನದಲ್ಲಿ ಕುಳಿತಿದ್ದರೆಂದು ನನ್ನ ಜೊತೆಗಿದ್ದ ಹುಡುಗಿಯರು ನನಗೆ ತಿಳಿಸಿದರು. ಅವರಲ್ಲಿ ಅನೇಕರು ಪರ್ದಾದಲ್ಲಿಯೇ ಇದ್ದರು. ಅವರನ್ನು ಒಳಗೆ ಕರೆತರಲು ಹೇಳಿದೆ. ಅವರು ಒಳಗೆ ಬಂದರು. ತಮ್ಮ ತಂದೆಗಳ ಅಥವಾ ಅಣ್ಣ-ತಮ್ಮಂದಿರ ಎದುರಲ್ಲಿ ಪರ್ದಾ ಹಾಕುವದಿಲ್ಲವೆಂದಮೇಲೆ ನನ್ನ ಬಳಿಗೇಕೆ ಅದಿರಬೇಕು ಎಂದು ಕೇಳಿ ಅವರಿಗೆ ನಾನು ತಂದೆಯ ಅಥವಾ ಬಂಧು ಸಮಾನನೆಂದು ಹೇಳಿದೆ. ಕೂಡಲೆ ಅವರ ಮುಖದ ಆವರಣವು ಅನಿರೀಕ್ಷಿತವಾಗಿ ಸರಿದು ಹೋಯ್ತು. ನನ್ನೆದುರು ಮುಖಾವರಣವು ಕಳಚಿದ್ದು ಇದೇ ಮೊದಲಸಲವೇನಲ್ಲ. ನನ್ನದು ನಿಜವಾದ ಪ್ರೀತಿ. ಸತ್ಯವಾದ ಪ್ರೀತಿಯು ಏನನ್ನು ಮಾಡಬಹುದೆಂಬುದಕ್ಕೆ ಒಂದು ಘಟನೆಯನ್ನು ಉದಾಹರಿಸುತ್ತೇನೆ. ಹಿಂದು ಮತ್ತು ಶೀಖ ಸ್ತ್ರೀಯರು ಮುಸಲ್ಮಾನ ಭಗಿನಿಯರ ಬಳಿಗೆ ಹೋಗಿ ಅವರೊಡನೆ ಸ್ನೇಹ ಕಟ್ಟಿಕೊಳ್ಳಬೇಕು. ಅವರನ್ನು ಹಬ್ಬ ಹರಿ ದಿನಗಳಿಗೆ ಆಮಂತ್ರಿಸಬೇಕಲ್ಲದೇ ತಾವೂ ಆಮಂತ್ರಿತರಾಗಬೇಕು. ಮುಸಲ್ಮಾನ ಹುಡುಗ ಹುಡುಗಿಯರು ಸಾಮಾನ್ಯ ಜಾತೀಯ ಶಾಲೆಗಳಲ್ಲಿ ಎಲ್ಲರೂ ಬಂದು ಕಲಿವಂತೆ ಅವರನ್ನು ಆಕರ್ಷಿಸಬೇಕು. ಅವರು ಆಟ ನೋಟಗಳಲ್ಲಿ ಬೆರೆಯಬೇಕು. ಮುಸಲ್ಮಾನರೊಡನೆ ಅಸಹಕಾರ ಅಥವಾ ಬಹಿಷ್ಕಾರವಂತೂ ಇರಲೇಬಾರದು. ಅವರು ಮೊದಲಿನಂತೆ ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗಿಕೊಳ್ಳುವಂತೆ ಅವರ ಮನವೊಲಿಸಬೇಕು. ಮುಸಲ್ಮಾನ ಕಲಾಕುಶಲರು ಹೊರಟು ಹೋದುದರಿಂದ ದಿಲ್ಲಿಯ ಶಿಲ್ಪಕಲೆಯಲ್ಲಿ ಅಸ್ಥಿರಮಟ್ಟಿಗೆ ಬಡವಾಗಿದೆ. ಮುಸಲ್ಮಾನರ ಜೀವನ ಧಾರ ಸಾಧನ [illegible] ಕಸಿಯುವದೆಂದರೆ ಹಿಂದುಗಳಿಗೂ ಶೀಖರಿಗೂ ಭೂಷಣವಲ್ಲವಷ್ಟೇ ಅಲ್ಲ, ಅದು ಅವರ ಕ್ಷುದ್ರತನವನ್ನೂ ತೋರಿಸುತ್ತದೆ. ಯಾರೂ ಯಾವುದರ ಬಗ್ಗೆಯೂ ಗುತ್ತಿಗೆ ಹೊತ್ತಂತೆ ಮಾಡಬಾರದು. ಮತ್ತು ಯಾರನ್ನೂ ಯಾವುದರಿಂದಲೂ ವಂಚಿತಗೊಳಿಸಬಾರದು. ಈ ನಮ್ಮ ವಿಶಾಲವಾದ ದೇಶದಲ್ಲಿ ಎಲ್ಲರಿಗೂ ಸಾಕಷ್ಟು ಸ್ಥಳವಿದೆ. ಅನೇಕ ದೇಶಗಳಲ್ಲಿ ಅನೇಕ [illegible] ಗ್ಯವಂತೆ ಹೊಸದಾಗಿ ರಚಿತವಾದ ನಮ್ಮ ಶಾಂತಿ ಸಮಿತಿಗಳೂ ನಿದ್ರಾಮಗ್ನವಾಗಬಾರದು. ನಿಮ್ಮ ಮಧ್ಯದಲ್ಲಿ ನಾನಿರುವದಕ್ಕೆ ನ [illegible] ರೆಂದರೆ ಎಲ್ಲ ಮತದವರೂ ತಮ್ಮ [illegible] ಜಗ[illegible]ವಾಡದೆ ಶಾಂತರೀತಿಯಿಂದ ಇದ್ದುಕೊಳ್ಳುವದೇ ಆಗಿದೆ. ಈ ಶಾಂತತೆಯು ಶಸ್ತ್ರಬಲದಿಂದ ನೆಲೆಸಿದ್ದ ಪ್ರೇಮಾನುಭವದಿಂದ ನೆಲೆಸಬೇಕು. ಪ್ರೇಮ [illegible] ಕ್ಕಿಂತ ಶ್ರೇಷ್ಠ ವಸ್ತುಗಿಯು ಜಗತ್ತಿನಲ್ಲಿ ಮತ್ತಾವ ದಿರುವದಿಲ್ಲ.

ಬಿರ್ಲಾಭವನ ಹೊಸದಿಲ್ಲಿ ೨೦—೧—೪೮

ಮಹಾತ್ಮಾ ಗಾಂಧಿಯವರು ಇಂದಿನ ಪ್ರಾರ್ಥನೋತ್ತರ ಸಭೆಯಲ್ಲಿ ಭಾಷಾವಾರ ಪ್ರಾಂತರಚನಾ ಪ್ರಶ್ನೆಯನ್ನು ಪ್ರಸ್ತಾಪಿಸಿ, ಆ ತತ್ವಕ್ಕೆ ಕಾಂಗ್ರೆಸ್ಸದ ಬೆಂಬಲ ಗೆಯದೆಂಬುದನ್ನು ಸಾರಿದರು.

[illegible] ಮತ್ತು ಹೋಳಿಸ್ತೇವೆಂದರೆ:—

ಇಂದು ಕಾಂಗ್ರೆಸ್ಸ ಕಾರ್ಯ ಸಮಿತಿ ಸಭೆಯಲ್ಲಿ ಪ್ರಾಂತಗಳ ‘ಭಾಷಾವಾರ ಪುನರ್ಘಟನೆಯ ಬಗ್ಗೆ ಚರ್ಚೆ ನಡೆಯಿತು. ಮಂ. ನೆಹರು ಮತ್ತು ಸರದಾರ ಪಟೇಲರೂ ಹಾಜರಿದ್ದರು.

ಕಾಂಗ್ರೆಸು ಆ ತತ್ವವನ್ನು ಮೊದಲೇ ಅಂಗೀಕರಿಸಿದ್ದು, ಭಾಷಾವಾರ ಪ್ರಾಂತರಚನೆಯಿಂದ ರಾಷ್ಟ್ರದ ಸಾಂಸ್ಕೃತಿಕ ಪ್ರಗತಿಗೆ ಸಹಾಯವಾಗುವದರಿಂದ ಅಧಿಕಾರಕ್ಕೆ ಬಂದಕೂಡಲೇ ಅದನ್ನು ಕಾರ್ಯಕಾರಿ ಮಾಡುವುದಾಗಿ ಸಾರಿದೆ. ಆದರೆ ಪ್ರಾಂತಗಳ ಅಂಥ ಪುನರ್ಘಟನೆ ರಾಷ್ಟ್ರದ ಒಕ್ಕಟ್ಟಿಗೆ ಧಕ್ಕೆ ತರಕೂಡದು. ಪ್ರಾಂತಿಕ ಸ್ವಾಯತ್ತತೆ ವಿನಾಶಕರವಾಗಕೂಡದು. ಅಥವಾ ಪ್ರಾಂತಗಳು ಕೇಂದ್ರವನ್ನು ಲೆಕ್ಕಿಸದೆ ಮನಬಂದ ಹಾದಿ ಹಿಡಿಯಕೂಡದು. ಪ್ರತಿಯೊಂದು ಪ್ರಾಂತವು ತಾನು ಸರ್ವತಂತ್ರಸ್ವತಂತ್ರವೆಂದು ವರ್ತಿಸಹತ್ತಿದರೆ, ಹಿಂದೀ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲದಾಗಿ ಅದರ ಜೊತೆಗೆ ಅಂಗಗಳ ಸ್ವಾತಂತ್ರ್ಯವೂ ಕಣ್ಮರೆಯಾಗುವದು. ಕಾಂಗ್ರೆಸು ಹಿಂದೀ ಸ್ವಾತಂತ್ರ್ಯವನ್ನು ಹಳ್ಳಿಗಳ ಸ್ವಾಯತ್ತತೆಯಮೇಲೆ ನಿಲ್ಲಿಸಿದೆ, ಆದರೆ ಕೇಂದ್ರ ಸರಕಾರವು ಹಳ್ಳಿಯಿಂದ ತನ್ನ ಅಧಿಕಾರ ಪಡೆಯುವಂತೆ, ಹಳ್ಳಿಗಳು ಕೇಂದ್ರದಿಂದ ತಮ್ಮ ಶಕ್ತಿ ಪಡೆಯಬೇಕು. ಸಂಕುಚಿತ ಪ್ರಾಂತೀಯತೆಯಲ್ಲಿ ತಿಕ್ಕು ಆಂಧ್ರ ಮತ್ತು ತಮಿಳರು ಹಾಗೂ ಮುಂಬಯಿ ಮತ್ತು ಕರ್ನಾಟಕದವರು ಪರಸ್ಪರ ದ್ವೇಷ ಮಾಡಲು ಪ್ರಾರಂಭಿಸಿದರೆ ಅದರಂಥ ಘಾತುಕವಾದುದು ಇನ್ನೊಂದಿಲ್ಲ.

ಪ್ರಾಂತಿಕ ಭಾಷೆಗಳು ವಿಕಾಸಗೊಳ್ಳಬೇಕಾದರೆ ಭಾಷಾವಾರ ಪ್ರಾಂತರಚನೆ ಆವಶ್ಯಕ. ಹಿಂದುಸ್ತಾನಿಯನ್ನು ರಾಷ್ಟ್ರಭಾಷೆಮಾಡತಕ್ಕದ್ದು. ಆದರೆ ಅದು ಪ್ರಾಂತಿಕ ಭಾಷೆಗಳ ಸ್ಥಾನವನ್ನಾಕ್ರಮಿಸಬಾರದು. ಅದು ಪ್ರಾಂತಗಳಲ್ಲಿ ಬೋಧ ಭಾಷೆಯೂ ಆಗಲಾರದು. ಹಿಂದೀಯರಲ್ಲಿ ಹಿಂದುಸ್ತಾನವು ಒಂದು ಎಂಬ ಅರಿವನ್ನುಂಟುಮಾಡುವದೇ ಅದರ ಮುಖ್ಯ ಕೆಲಸ. ಜಗತ್ತಿನಲ್ಲಿ ನಮ್ಮನ್ನು ಗುಜರಾತಿಗಳು, ಮರಾಠಿಗರು ಅಥವಾ ತಮಿಳರು ಎಂದು ಗುರುತಿಸದೆ ಹಿಂದೀಯರೆಂದು ಗುರುತಿಸುತ್ತಾರೆ. ಆದುದರಿಂದ ನಾವು ವಿಖ್ಯಾತ ವ್ಯಕ್ತಿಗಳಿಗೆ ಉತ್ತೇಜನ ಕೊಡದೆ ಹಿಂದೀಯರಂತೆ ವರ್ತಿಸಬೇಕು. ಈ ಮುಖ್ಯ ವಿಚಾರವೊಂದನ್ನು ಗಮನದಲ್ಲಿಟ್ಟುಕೊಂಡು ಪ್ರಾಂತಗಳ ಪುನರ್ಘಟನೆಯು ಶಿಕ್ಷಣ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ ಕೊಡಬೇಕು. ಹೊಸ ಪ್ರಾಂತಗಳ ಗಡಿ ನಿರ್ಣಯಿಸಲು ನೇಮಿಸಿದ ಸಮಿತಿಯ ಬೇಡಿಕೆ ಮುಂದೆ ಬರುವದಿಲ್ಲೆಂದು ಆಶಿಸುತ್ತೇನೆ. ಅದು ವಿದೇಶೀಯ ಪದ್ಧತಿ. ಅದನ್ನು ನಾವು ತಿರಸ್ಕರಿಸಿದ್ದೇವೆ. ಪರಸ್ಪರ ಒಪ್ಪಿಗೆಯಿಂದ ಗಡಿ ನಿರ್ಣಯ ಮಾಡಿಕೊಂಡು ಅಪ್ಪಿಗೆಗಾಗಿ ಮುಖ್ಯ ಮಂತ್ರಿಗಳ ಮುಂದಿಡಬೇಕು. ಅದೇ ನಿಜವಾದ ಸ್ವಾತಂತ್ರ್ಯ. ನ್ಯಾಯ ಸಮಿತಿಯಂಥ ಮೂರನೇ ಪಕ್ಷಕ್ಕೆ ಮೊರೆ ಹೊಗುವದು ಸ್ವಾತಂತ್ರ್ಯದ ನಿರಾಕರಣೆ. ಪರಸ್ಪರ ನ್ಯಾಯವನ್ನೇ ಅವಲಂಬಿಸಬೇಕು.

ಬಿರ್ಲಾಭವನ ಹೊಸದಿಲ್ಲಿ ತಾ. ೨೭—೧—೪೮

ಗಾಂಧಿಯವರು ಪ್ರಾರ್ಥನೋತ್ತರ ಭಾಷಣ ಮಾಡುತ್ತ, ಮಂಗ್ಳವಾರು ಪ್ರಾರ್ಥನಾ ಸಭೆಗೆ ಜಾರದ್ದಕ್ಕೆ [illegible]. ತಾವು ಮುಂಜಾನೆ ಮಹಾಮ ದರ್ಗಾದ ಉರಸಿಗೆ ಹೋಗಿದ್ದನ್ನು ವಿವರಿಸುತ್ತ ಹೀಗೆ ಹೇಳಿದರು. ಮುಸ್ಲಿಮರಲ್ಲದೆ ಬಹುಸಂಖ್ಯಾಕ ಹಿಂದೂ ಶೀಖರು ಬಂದಿದ್ದರಿಂದ ನನಗೆ ಆನಂದವಾಯಿತು. ಯಾರ [illegible] ದಿಂದಲೇ ಮುಸ್ಲಿಮರ ಸಂಖ್ಯೆ [illegible]. ಮಾನವನು ಮಾನವನಿಗೆ ಅಂಜುವದು ನಾಚಿಗೇಡು. ಇಂಥ ಅಮೌಲ್ಯ ಉರುಸಿಗೆ ತೊಂದರೆಯಾದುದು ವಿಷಾದಕರ. [illegible]

[illegible]

ಭಾರತಕ್ಕೆ ಏಶಿಯದಲ್ಲಿ ಗಣ್ಯಸ್ಥಾನ ಸಿಗುವಂತೆ ಮಾಡಿರಿ

ಅದು ಅಧೋಗತಿಗಿಳಿಯುವದನ್ನು ತಪ್ಪಿಸಿರಿ

ಸರದಾರ ಪಟೇಲರ ಬಿನ್ನಹ

ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಕಳೆದ ೧ ತಾ ೨೭ ರಲ್ಲಿ ದಿಲ್ಲಿಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹಿಂದುಸ್ತಾನವು ತನ್ನ ಪ್ರಾಚೀನ ನೈತಿಕ ಹಾಗೂ ಆಧ್ಯಾತ್ಮಿಕ ವೈಭವವನ್ನು ಪುನಃ ಪಡೆದು ಬಲಾಢ್ಯ ಹಾಗೂ ಸುಖ ಸಂಪತ್ತುಳ್ಳ ರಾಷ್ಟ್ರವಾಗುವಂತೆ ಎಲ್ಲರೂ ಒಕ್ಕಟ್ಟಿನಿಂದ ಸಹಕಾರದಿಂದ, ಶಾಂತರೀತಿಯಿಂದ ವರ್ತಿಸಬೇಕೆಂದು ಒಳ್ಳೇ ಕಳಕಳಿಯಿಂದ ಜನರಿಗೆ ಬಿನ್ನವಿಸಿದರು.

ಹಿಂದುಸ್ತಾನದ ರಾಜಕಾರಣಿಗಳು, ಬಂಡವಲದಾರರು, ಕಾರಖಾನೆದಾರರು, ರೈತರು, ಕೂಲಿಕಾರರು ಎಲ್ಲ ವರ್ಗದವರೂ ತಮ್ಮ ನಿಜವಾದ ಧರ್ಮವನ್ನು ಅರಿತು ಅದರಂತೆ ವರ್ತಿಸಬೇಕು. ತರುಣರ ಪ್ರಭಾವಕ್ಕೆ ಒಳಗಾದ ಹಲವು ಸಂಸ್ಥೆಗಳು ರಾಷ್ಟ್ರವಿಘಾತಕ ಧೋರಣೆ ವಹಿಸಿದ್ದು ಸರಿಯಾಗಿರುವದಿಲ್ಲ. ಅಧಿಕಾರ ಲಾಲಸೆಯಿಂದ ವ್ಯರ್ಥವಾಗಿ ರಾಷ್ಟ್ರದ ಶಕ್ತಿಹ್ರಾಸ ಮಾಡದೆ ಈ ಸಂಸ್ಥೆಯವರು ಸ್ವತಂತ್ರ ಹಿಂದುಸ್ತಾನವು ಬಲಾಢ್ಯವಾದ ರಾಷ್ಟ್ರವಾಗುವಂತೆ ಎಲ್ಲರೊಡನೆ ಕೂಡಿ ಸಂಯುಕ್ತ ಪ್ರಯತ್ನ ಮಾಡಬೇಕಾಗಿದೆ. ಹಿಂದುಸ್ತಾನವು ಆರ್ಥಿಕ ವಿಪತ್ತಿನಿಂದ ಪಾರಾಗಬೇಕಿದ್ದರೆ 'ಹೆಚ್ಚು ಉತ್ಪತ್ತಿ ಮಾಡಿರಿ' ಎಂಬ ಒಂದೇ ಕೂಗು ಎಲ್ಲ ಪಕ್ಷದವರ ಮುಖದಿಂದಲೂ ಬರಬೇಕು. ಪಕ್ಷದ ಹಿತಸಂಬಂಧಗಳಿಗಿಂತ ರಾಷ್ಟ್ರದ ಏಳಿಗೆಗೆ ಹೆಚ್ಚು ಮಹತ್ವ ಕೊಡುವದು ಈಗ ಅಗತ್ಯವಿದೆ.

ಮಹಾತ್ಮಾ ಗಾಂಧಿಯವರ ಮುಖಂಡತ್ವದಲ್ಲಿ ಹೋರಾಡಿ ಸಂಪಾದಿಸಿದ ಸ್ವಾತಂತ್ರ್ಯವು ನಮಗೆ ಒಗ್ಗಬೇಕಾದರೆ ಎಲ್ಲ ಜನರೂ—ರಾಜರು ಮಹಾರಾಜರು ರೈತರು ಕೂಲಿಕಾರರು, ಬಂಡವಲದಾರರು—ಸಂಯುಕ್ತ ಪ್ರಯತ್ನದಿಂದ ಕಾರ್ಯ ಮಾಡಬೇಕಾಗುವದು. ಕಾಂಗ್ರೆಸ ಸರಕಾರದವರು ಚುನಾವಣೆಯ ಘೋಷಣೆಯಲ್ಲಿ ಜಮೀನದಾರಿ ನಿರ್ಮೂಲನ ಮಾಡುವಾಗ ಜಮೀನದಾರರಿಗೆ ಯೋಗ್ಯ ಪರಿಹಾರ ಕೊಡಬೇಕಾಗುವದೆಂದು ಸಾರಿದೆ. ಕಾಂಗ್ರೆಸು ಕೊಟ್ಟ ವಚನ ಪಾಲಿಸಲೇಬೇಕು. ಸಾಮ್ಯವಾದಿಗಳು ಇನ್ನೂ ಕಮ್ಯುನಿಸ್ಟರು ಜಮೀನದಾರರಿಗೆ ಪರಿಹಾರ ಕೊಡಕೂಡದೆಂದು ಹೇಳುವ ಮಾತಿಗೆ ತೆರವುಬೇಕಾಗಿಲ್ಲ. ಜಮೀನದಾರರಿಗೆ ಪರಿಹಾರ ಕೊಡಬಾರದೆಂದು ಹೇಳುವದು ಅದರಂತೆ ನಡೆಯುವದಾದರೆ ಅದು ದರೋಡೆಗಿಂತ ಹೀನಕೃತ್ಯವಾದೀತು. ಕಾಂಗ್ರೆಸಿನಂಥ ದೊಡ್ಡ ಸಂಸ್ಥೆಯು ವಚನ ಪಾಲಿಸದೆ ಇಂಥ ಕೃತಿಗಿಳಿಯುವದು ಅವರ ಗೌರವಕ್ಕೆ ಸಲ್ಲದಮಾತು.

ಪಾಕಿಸ್ತಾನದ ಬಗ್ಗೆ ಎಚ್ಚರ

ನಾವು ಪಾಕಿಸ್ತಾನದೊಡನೆ ಸ್ನೇಹಭಾವದಿಂದ ವರ್ತಿಸಲು ಶಕ್ತಿ ಮೀರಿ ಪ್ರಯತ್ನಿಸಿದೆವು. ಆದರೂ ಪಾಕಿಸ್ತಾನ-ಹಿಂದುಸ್ತಾನದಲ್ಲಿರುವ ಸಂಬಂಧವು ನೆರೆರಾಷ್ಟ್ರಗಳಲ್ಲಿರಬೇಕಾದ ಸೌಹಾರ್ದಭಾವನೆಯುಳ್ಳದ್ದಾಗಿರುವದಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಆದುದರಿಂದ ನಾವು ಯಾವಾಗಲೂ ಜಾಗರೂಕರಾಗಿರುವದು ಕ್ಷೇಮಕರ. ಈ ದೃಷ್ಟಿಯಿಂದ ನಾವು ಬಲಾಢ್ಯವಾದ ಸೈನ್ಯ ಹಾಗು ವಿಮಾನದಲ ಕಟ್ಟುವದು ಸಂರಕ್ಷಣೆಯ ದೃಷ್ಟಿಯಿಂದ ಅಗತ್ಯವಾದುದಾಗಿದೆ. ದೇಶದಲ್ಲಿ ಎಲ್ಲ ಪಕ್ಷಗಳು ಒಮ್ಮತದಿಂದ ಜಾತೀಯ, ರಾಜಕೀಯ ಆರ್ಥಿಕ ಶಾಂತತಾವರಣ ನಿರ್ಮಾಣ ಮಾಡದಿದ್ದರೆ ರಾಷ್ಟ್ರದ ಶಕ್ತಿ ಸಂವರ್ಧನೆಗೆ ಅತ್ಯಂತ ಅಗತ್ಯವಾದ ಉತ್ಪತ್ತಿ ಹೆಚ್ಚಿಸುವ ಕಾರ್ಯ ಸಾಧಿಸಲಾರದು.

ಭಾರತವು ಅಧೋಗತಿಯ ಕಡೆಗೆ ತಿರುಗಿದೆ

ನಾನು ನನ್ನ ಮನಬಿಚ್ಚಿ ನನಗೆ ಅನಿಸಿದ್ದನ್ನು ಅಭಿತೋರಿಸುವೆ. ನನ್ನ ಮಾತಿನಲ್ಲಿ ದ್ವೇಷಭಾವನೆ ಇರದೆ ನಿಮ್ಮ ಕಲ್ಯಾಣಕ್ಕಾಗಿಯೇ ನಾನು ಒರಟಾಗಿ ಹೇಳಿದರೂ ನೀವು ಕ್ಷಮಿಸುವಿರೆಂದೂ ಆಶಿಸುವೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನರು ಅನುಸರಿಸುತ್ತಿದ್ದ ಒಳ್ಳೇ ಉಚ್ಚ ನೀತಿ ಮತ್ತು ಜೀವನ, ಸೇವಾಬುದ್ಧಿ, ತ್ಯಾಗ ಇವು ಸ್ವಾತಂತ್ರ್ಯಪ್ರಾಪ್ತಿಯ ನಂತರ ಮಾಯವಾಗಿದ್ದು ಕಂಡು ನನಗೆ ಅತೀವ ದುಃಖವಾಗಿದೆ. ಈಗ ಹಿಂದುಸ್ತಾನವು ಅಧೋಗತಿಯ ದಾರಿ ಹಿಡಿಯುತ್ತಿದೆ. ವಿದೇಶಿಯರ ಪ್ರಭುತ್ವ ಕೊನೆಗಂಡಿತೆಂಬು ಕಾಂಗ್ರೆಸು ಹಾಗೂ ಹಿಂದುಸ್ತಾನದ ಜನತೆ ಯಾವ ಗುರಿ ಸಾಧಿಸಲು ಹೋರಾಡುತ್ತಿದ್ದರೋ ಆ ಗುರಿ ಸಾಧಿಸಿದಂತಾಗಿಲ್ಲ. ಸ್ವಾತಂತ್ರ್ಯದ ನಿಜವಾದ ಲಾಭವು ಜನತೆಗೆ ಸಲ್ಲಿಸಬೇಕಾದರೆ ಇನ್ನೂ ಅನೇಕ ಉಪಾಯಗಳನ್ನು ನಾವು ಸಾಧಿಸಬೇಕಾಗಿದೆ ಎಂಬುದನ್ನು ಮರೆಯತಕ್ಕದ್ದಲ್ಲ. ಜನರು ಜಾತೀಯ ದ್ವೇಷ ಭಾವನೆಯು ಹೆಚ್ಚಿ ಕಲಕತ್ತೆಯಲ್ಲಿ ಹತ್ಯಾಕಾಂಡ ಪ್ರಾರಂಭವಾಗಿ ಅದು ಕ್ರಮೇಣ ದೇಶದ ಅನೇಕ ಭಾಗಗಳಲ್ಲಿ ವ್ಯಾಪಿಸಿತು. ಇನ್ನು ಈ ಜಾತೀಯ ದ್ವೇಷದ ಉಬ್ಬಾಟೆ ಸಂಪೂರ್ಣವಾಗಿ ಆರಿಲ್ಲ. ಈಗ ಮೊದಲಿಗಿಂತ ಶಾಂತ ಪರಿಸ್ಥಿತಿ ನಿರ್ಮಾಣವಾದದ್ದೇನೋ ನಿಜ. ಕಾಂಗ್ರೆಸ್ಸಿಗರಲ್ಲಿಯೇ ಹೊಡೆದಾಟ ಪ್ರಾರಂಭವಾಗಿದ್ದು ಅದು ಅತಿ ಅಸಹ್ಯ ಸ್ವರೂಪ ತಾಳುತ್ತಲಿದೆ. ಬಿಹಾರದ ಬಗ್ಗೆಯೇ ಹೇಳುವದಾದರೆ ಮಂತ್ರಿಮಂಡಲ ಹಾಗೂ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷರ ಮೇಲೆ ಅವಿಶ್ವಾಸ ಗೊತ್ತುವಳಿ ಬಂದಿದೆ. ಲಂಚಗುಳಿತನ, ಪಕ್ಷಪಾತ, ಈ ಆರೋಪಗಳೂ ಇವೆ. ಸ್ವಾತಂತ್ರ್ಯ ಪ್ರಾಪ್ತಿಯಾದೊಡನೆಯೇ ಜನರಲ್ಲಿ ಅಧಿಕಾರ ಲಾಲಸೆ ಹಾಗೂ ಮುಖಂಡತ್ವದ ಹಪಾಹಪಿತನ ಬೆಳೆದಿದೆ. ಈ ವೃತ್ತಿಯಿಂದ ರಾಷ್ಟ್ರಕ್ಕೆ ಬಹುದೊಡ್ಡ ಹಾನಿಯಾಗುವದರಲ್ಲಿ ಸಂದೇಹವೇ ಇಲ್ಲ. ಸ್ವಾತಂತ್ರ್ಯವನ್ನು ಈ ರೀತಿ ಜನರು ಅಧೋಗತಿಗಿಳಿಸುವದಕ್ಕಾಗಿ ಪಡೆದುದಿಲ್ಲ. ಕಾಂಗ್ರೆಸ್ಸಿನ ಪ್ರತಿಷ್ಠೆ ಗೌರವಗಳಿಗೆ ಧಕ್ಕೆ ಬರದಂತೆ ನೋಡಿಕೊಳ್ಳುವ ಹೊಣೆ ಇದ್ದವರಲ್ಲಿ ನಾನೂ ಒಬ್ಬ. ಆದುದರಿಂದ ಕಾಂಗ್ರೆಸಿಗರಲ್ಲಿ ಈ ರೀತಿಯ ನೈತಿಕ ಅಧಃಪತನ, ಅಧಿಕಾರ ಲಾಲಸೆಯ ಕುಸ್ತ್ಯಾಟ ನಡೆದದ್ದನ್ನು ನೋಡಿ ನಾನು ಸಹಿಸಲಾರೆ.

ಬಿಹಾರ ಪ್ರಾಂತಿಕ ಕಾಂಗ್ರೆಸ ಸಮಿತಿ ಹಾಗೂ ಬಿಹಾರ ಸರಕಾರಗಳಲ್ಲಿ ಏಕಮತ ಇರುವದು ಅಗತ್ಯವಾದುದು. [illegible] ವಿಷಯದಲ್ಲಿ ಪಕ್ಷಪಾತ, ಲಂಚಬಡಕತನದ ಆರೋಪಗಳಿಗೆ ಗುರಿಯಾದ ಜನರು ವಿಚಾರಣೆಗೆ ಗುರಿಪಡಿಸಲ್ಪಡಬೇಕು. ಅವರು ಅಪರಾಧಿಗಳೆಂದು ಸಿದ್ಧವಾದದ್ದಾದರೆ ಅವರಿಗೆ ಉಗ್ರಶಿಕ್ಷೆ ವಿಧಿಸಬೇಕು. ಇಂಥ ಅಪನಿಂದೆಗಳಿಂದ ಬಿಹಾರದ ಹೆಸರಿಗೆ ಕಲಂಕ ಹತ್ತಿದೆ ಇಷ್ಟೇ ಅಲ್ಲ. ಕಾಂಗ್ರೆಸಿನ ಧವಳಕೀರ್ತಿಗೂ ಮಸಿ ಬಳಿದಂತಾಗಿದೆ.

ಕೂಲಿಕಾರರಿಗೆ ಹಿತೋಪದೇಶ

ಜನರು ಮೊದಲು ರಾಷ್ಟ್ರೀಯ ಸಂಪತ್ತು ಹೆಚ್ಚಿಸಲು ದುಡಿದು ಸಂಪತ್ತು ಹೆಚ್ಚಿದಂತೆ ಅದರಲ್ಲಿ ಪಾಲು ಕೇಳುವದು ಕ್ರಮಪ್ರಾಪ್ತವು. ಇದನ್ನು ಬಿಟ್ಟು ಹುಟ್ಟುವಳಿ ಹೆಚ್ಚಿಸುವ ಪೂರ್ವದಲ್ಲಿಯೇ ಹೆಚ್ಚಿನ ಪಾಲು ದೊರಕಿಸಿರಿ ಎಂದು ಕೂಲಿಕಾರರೇ ಮೊದಲಾದ ಜನರಲ್ಲಿ ಸಂಪು ಹೂಡಿ ಹೆಚ್ಚಿನ ಪಾಲು ದೊರಕಿಸಲು ಪ್ರಚಾರ ಮಾಡಲಾಗುತ್ತಿದೆ. ಇದೆಂತು ಸರಿಯಾಗುವದು? ಎಲ್ಲ ಪಕ್ಷದವರು ಈಗ ಕೂಲಿಕಾರರಿಗೆ, ರೈತರಿಗೆ ಹೆಚ್ಚು ಉತ್ಪತ್ತಿ ಕಡಿಮೆಯಾಗುವ ರೀತಿಯಲ್ಲಿ ಯಾರೂ ವರ್ತಿಸಬಾರದು. ಕೂಲಿಕಾರರ ನ್ಯಾಯವಾದ ಬೇಡಿಕೆಗಳನ್ನು ಪೂರೈಸಲಾಗುವದು. ಇದನ್ನು ಸಾಧಿಸಲು ಸಂಪು ಹೂಡಬೇಕಾಗಿಲ್ಲ. ಸಂಪು ಹೂಡುವದರಿಂದ ಉತ್ಪತ್ತಿ ಕಡಿಮೆಯಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಹದಗೆಟ್ಟರೆ ಅದರಿಂದ ಕೂಲಿಕಾರರಿಗೆ ಹೆಚ್ಚಿನ ಹಾನಿಯೇ ತಟ್ಟುವದೆಂಬದನ್ನು ಮರೆಯ ಕೂಡದು.

ಔದ್ಯೋಗಿಕ ರಾಷ್ಟ್ರೀಕರಣವಾಗಬೇಕೆಂಬ ಕೂಗು ಅಲ್ಲಲ್ಲಿ ಕೇಳಬರಹತ್ತಿದೆ. ಈಗಾಗಲೇ ಸರಕಾರವು ವಹಿಸಿಕೊಂಡ ಹೊಣೆಗಳೇ ಬಹಳಾಗಿದ್ದು ಅವುಗಳನ್ನೇ ಸರಕಾರವು ಸಮರ್ಪಕವಾಗಿ ನಿರ್ವಹಿಸುವದು ಅಸಾಧ್ಯವಾಗುತ್ತಿರುವಾಗ ಔದ್ಯೋಗಿಕ ರಾಷ್ಟ್ರೀಕರಣದಿಂದ ಹೆಚ್ಚಿನ ಹೊಣೆ ಸರಕಾರದ ಮೇಲೆ ಹೇರುವದು ಈ ಪರಿಸ್ಥಿತಿಯಲ್ಲಿ ವ್ಯವಹಾರ ದೃಷ್ಟಿಯಿಂದ ಸರಿಯಾಗಲಾರದು.

ಸಂಸ್ಥಾನಗಳ ಲೀನೀಕರಣ

ಸರೈಕಲಾ, ಖಾರಸ್ವಾನ, ಸಂಸ್ಥಾನಗಳನ್ನು ತಾತ್ಪೂರ್ತಿಕವಾಗಿ ಓರಿಸಾ ಪ್ರಾಂತದಲ್ಲಿ ಸೇರಿಸಲಾದದ್ದನ್ನು ಕಂಡು ಬಿಹಾರ-ಓರಿಸಾ ಎರಡೂ ಕಾಂಗ್ರೆಸ ಮಂತ್ರಿ ಮಂಡಲವಿದ್ದ ಪ್ರಾಂತಗಳೇ ಇದ್ದರೂ ದೊಡ್ಡ ಸಂಸ್ಥಾನಗಳು ತಾತ್ಪೂರ್ತಿಕ ವಿಲೀನ ಹೊಂದುವವೆಂದೂ ಒಂದು ನ್ಯಾಯ ಮಂಡಲದ ವಿಚಾರಣಾ ಸಮಿತಿ ನೇಮಿಸಿ ಅದರ ನಿರ್ಣಯದಂತೆ ಈ ಸಂಸ್ಥಾನಗಳನ್ನು ನ್ಯಾಯವಾಗಿ ಅವು ಸೇರಬೇಕಾದ ಪ್ರಾಂತದಲ್ಲಿ ಸೇರಿಸಲಾಗುವದೆಂದೂ ಸ್ಪಷ್ಟವಾಗಿ ಸಾರಿದ್ದರೂ ಈ ಚಿಲ್ಲರೆ ವಿಷಯದ ಮೇಲೆ ದೊಡ್ಡ ಹೋರಾಟದ ಪ್ರಸಂಗವೇ ಉಂಟಾದದ್ದು ದುರ್ದೈವದ ಸಂಗತಿ. ಇಂಥ ವಾದವಿವಾದದಿಂದ ರಾಷ್ಟ್ರದ ಪ್ರಗತಿಗೆ ಹಾನಿ ತಪ್ಪದೆ ಹೋಗದು. ಇಂಥ ಸಂಕುಚಿತ ದೃಷ್ಟಿಯ ವಾದವಿವಾದ ನಿಲ್ಲಲೇಬೇಕು.

ಜನತೆಯ ಕರ್ತವ್ಯ

ಈ ವರೆಗೆ ನಾವು ಚಳವಳಿ ಮಾಡುತ್ತ ಬಂದವರಾಗಿದ್ದೇವೆ. ಇನ್ನು ಮೇಲೆ ನಾವು ಹಿಂದುಸ್ತಾನವು ಬಲಾಢ್ಯ ರಾಷ್ಟ್ರವಾಗಿ ಏಶಿಯ ಖಂಡದ ರಾಷ್ಟ್ರಗಳ ಮುಖಂಡತ್ವ ವಹಿಸುವ ಶಕ್ತಿ ಹೊಂದ ಸ್ಥಾನಕ್ಕೆ ಬರುವಂತೆ ನಾವು ದುಡಿಯಬೇಕಾಗಿದೆ. ಎಲ್ಲ ವರ್ಗದ ಜನರಿಗೂ ಅವರ ನಿಜವಾದ ಕರ್ತವ್ಯವೇನೆಂಬುದನ್ನು ತಿಳಿಸಿ ಹೇಳಬೇಕು. ರಾಷ್ಟ್ರದ ಸಲುವಾಗಿ ಪ್ರತಿಯೊಬ್ಬನೂ ತನ್ನ ಕರ್ತವ್ಯ ಕರ್ಮವನ್ನು ಪ್ರಾಮಾಣಿಕ ರೀತಿಯಲ್ಲಿ ನೆರವೇರಿಸಬೇಕು. ಕಾಂಗ್ರೆಸು ಎಲ್ಲ ವರ್ಗದವರ ಹಿತಸಂಬಂಧಗಳನ್ನು ನೋಡಿಕೊಳ್ಳುವದೆಂದು ನಾನು ಆಶ್ವಾಸನ ಕೊಡುವೆ. ಆದರೂ ಯಾವದೇ ಒಂದು ಗುಂಪು ಈಗಿನ ಸರಕಾರದ ವಿರುದ್ಧ ಹೋರಾಡುವ ಹಮ್ಮಿನ್ನಿಟ್ಟುಕೊಂಡಿದ್ದರೆ ಅವರು ಘಟನಾತ್ಮಕವಾಗಿ ಈಗಿನ ಸರಕಾರವನ್ನು ಉರುಳಿಸಲು ಅಡ್ಡಿಯಿಲ್ಲ. ಆದರೆ ರಾಷ್ಟ್ರದ ಹಿತಕ್ಕೆ ವಿಘಾತಕವಾದ ಕೃತ್ಯಗಳ ಪ್ರಚೋದನೆ ಮಾಡಕೂಡದು. ಜನರಿಗೆ ನಾವು ಅಧಿಕಾರದಲ್ಲಿರುವದು ಬೇಕಾಗಿಲ್ಲವೆಂಬುದು ತಿಳಿದಾಕ್ಷಣ ನಾವು ಅಧಿಕಾರ ತ್ಯಾಗ ಮಾಡಲು ಹಿಂದೆಮುಂದೆ ನೋಡುವದಿಲ್ಲ. ವಿದೇಶೀಯರನ್ನು ಸತ್ತಾತ್ಯಾಗ ಮಾಡಲು ಒತ್ತಾಯಗೊಳಿಸುವ ರೀತಿ ನೀತಿಗಳನ್ನು ನಿಮ್ಮವರೇ ಆದ ನಿಮ್ಮ ಮುಖಂಡರನ್ನು ಅಧಿಕಾರದಿಂದ ನಿವೃತ್ತಿಗೊಳಿಸಲು ಮಾಡುವದೆಲ್ಲಿಯ ನ್ಯಾಯ? ಘಟನಾತ್ಮಕವಾಗಿ ಜನಮತ ದೊರಕಿಸಿದರೆ ಸರಕಾರದಲ್ಲಿ ಬದಲಾವಣೆ ಆಗಲೇಬೇಕು. ಹೀಗಿದ್ದರೂ ಸಂಪು ಹೂಡಲು ಪ್ರಚೋದನೆ ಮಾಡುವದು ರಾಷ್ಟ್ರಘಾತಕತನವು. ಪೋಲೀಸರಿಗೆ ಸಂಪು ಹೂಡಲು ಪ್ರಚೋದನೆ ಮಾಡಿದ್ದಂತೂ ತೀರ ಮನೆಮುರುಕತನವು. ಸರಕಾರಕ್ಕೆ ನಿಷ್ಠರಾಗಿರುವದು ಪೋಲೀಸರ ಆದ್ಯ ಕರ್ತವ್ಯವಾಗಿದೆ. ಪೋಲೀಸರಿಗೆ ಸಂಪು ಹೂಡಲು ಪ್ರೋತ್ಸಾಹ ಕೊಡುವವರು ತೀರ ಅದೂರದೃಷ್ಟಿಯ ಚಳವಳಿಗಾರರೆಂದು ಹೇಳಬಯಸುವೆ. ಈ ಜನರು ಇಂಥ ಸಂಪು ಹೂಡುವದೆಂದರೆ ಬೆಂಕಿಯೊಡನೆ ಚಿನ್ನಾಟ ನಡೆಸಿದಂತೆ. ಈಗ ಪೋಲೀಸರಿಗೆ ಸಂಪು ಹೂಡಲು ಕಲಿಸಿದ ಜನರೇ ನಾಳೆ ಅಧಿಕಾರ ವಹಿಸಿದಾಗ ಇದೇ ಮಂತ್ರವನ್ನು ಪೋಲೀಸರು ಇವರ ಮೇಲೆಯೂ ಪ್ರಯೋಗ ಮಾಡಲಾರರೆಂದು ಯಾರು ಹೇಳಬೇಕು?

ಕೇಂದ್ರ ಶಾಸನ ಸಭೆ

ಒಂದು ಲಕ್ಷ ಹಿಂದು ಮತ್ತು ಶೀಖರ ಕೊಲೆ ಅಥವಾ ಮತಾಂತರವಾಗಿದೆ

ಭಾವಲಪೂರ ಸಂಸ್ಥಾನದಲ್ಲಿ ದಬ್ಬಾಳಿಕೆ ನಡೆದಿದೆ

ಹಿಂದುಸ್ತಾನದ ಕೇಂದ್ರ ಶಾಸನ ಸಭೆಯ ಮುಂಗಡ ಪತ್ರಿಕೆಯ ಅಧಿವೇಶನವು ತಾ ೨೮ ಕ್ಕೆ ಮುಂಜಾನೆಯಿಂದ ಶ್ರೀ ಮಾವಳಣಕರರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಒಂದೂ ಕಾಲು ತಾಸು ಕಾರ್ಯಕಲಾಪ ನಡೆಸಿ ಸಭೆಯು ತಾ ೩೦ ಕ್ಕೆ ಮುಂದುವರಿದಿತು.

ಈ ದಿನದ ಸಭೆಯಲ್ಲಿ ೮ ಪ್ರಶ್ನೆಗಳು ಕೇಳಲ್ಪಟ್ಟವು. ಅವೆಲ್ಲ ಮುಖ್ಯವಾಗಿ ನಿರಾಶ್ರಿತರಿಗೇ ಸಂಬಾಧಿಸಿದ್ದವು. ಶ್ರೀ ಆರ್. ಕೆ ಸಿಧ್ವಾರ ಪ್ರಶ್ನೆಗೆ ಉತ್ತರ ಕೊಡುತ್ತ ನಿರಾಶ್ರಿತರ ಪುನರ್ವಾಸದ ಮಂತ್ರಿಗಳಾದ ಶ್ರೀ ಕೆ. ಸಿ. ನಿಯೋಗಿಯವರು, ಭಾವಲಪೂರ ಸಂಸ್ಥಾನದಲ್ಲಿ ಇನ್ನೂ ೭೦ ಸಾವಿರ ಹಿಂದೂ ಮತ್ತು ಶೀಖರು ಇರುವರೆಂದೂ ಒಂದೂವರೆ ಲಕ್ಷ ಹಿಂದುಗಳು ಅಲ್ಲಿಂದ ಹಿಂದುಸ್ತಾನಕ್ಕೆ ಬಂದಿರುವರೆಂದೂ ಇನ್ನು ಒಂದು ಲಕ್ಷ ಜನರ ಲೆಕ್ಕವಿಲ್ಲವೆಂದೂ ಅವರ ಕೊಲೆಯಾಗಿರಬೇಕು ಇಲ್ಲವೆ ಅವರು ಒತ್ತಾಯದ ಮತಾಂತರಕ್ಕೆ ಗುರಿಯಾಗಿರಬೇಕೆಂದೂ ತಿಳಿಸಿದರು.

ಭಾವಲಪೂರ ಸಂಸ್ಥಾನದಲ್ಲಿರುವ ಬಹುಜನ ಮುಸಲ್ಮಾನೇತರರು ಹಿಂದುಸ್ತಾನಕ್ಕೆ ಬರಬೇಕೆಂದು ಬಯಸುತ್ತಿದ್ದರೂ ಅಲ್ಲಿಯ ಅಧಿಕಾರಿಗಳು ಅವರಿಗೆ ಸಾರಿಗೆಯ ವ್ಯವಸ್ಥೆ ಮಾಡಲು ಒಪ್ಪಿರುವದಿಲ್ಲವೆಂಬುದಾಗಿ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತ ಶ್ರೀ ನಿಯೋಗಿ ಅವರು ಹೇಳಿದರು.

ಪಾಕಿಸ್ತಾನ ಸರಕಾರವನ್ನು ಈ ಬಗ್ಗೆ ವಿಚಾರಿಸಬೇಕೆಂದು ಕೇಳಿದ ಪ್ರಶ್ನೆಗೆ ಪಂ. ಜವಾಹರರು ಸ್ಪಷ್ಟೀಕರಣ ಹೇಳುತ್ತ ಡಾ. ಸುಶೀಲಾನಯ್ಯರ ಹಾಗೂ ಅಂತರ್ರಾಷ್ಟ್ರೀಯ ರೆಡ್‌ಕ್ರಾಸಿನ ಪ್ರತಿನಿಧಿಯೊಬ್ಬರ ಸರಕಾರೇತರ ಶಿಷ್ಟಮಂಡಲವನ್ನು ಈ ಬಗ್ಗೆ ಅಲ್ಲಿಗೆ ಕಳಿಸಲಾಗಿದೆಯೆಂದೂ ಅವಶ್ಯಕತೆ ತೋರಿದೆ ಮತ್ತು ಪಾಕಿಸ್ತಾನವು ಒಪ್ಪಿದರೆ ಹೆಚ್ಚು ಡೆಪ್ಯೂಟಿ ಹೈಕಮಿಶನರರನ್ನು ನೇಮಿಸಲಾಗುವದೆಂದೂ ನುಡಿದರು.

ಪೆಟ್ರೋಲಿನ ಬಗ್ಗೆ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಲೋಕೋಪಯೋಗಿ ಖಾತೆಯ ಮಂತ್ರಿ ಶ್ರೀ ಎನ್. ವಿ. ಗಾಡಗೀಳರು ಈ ರೀತಿ ತಿಳಿಸಿದರು.

ಸೀದಾ ಲೆಕ್ಕದಂತೆ ಹಿಂದುಸ್ತಾನದಲ್ಲಿ ಈಗ ಪ್ರತಿವರ್ಷ ೩೦ ಲಕ್ಷ ಟನ್ ಪೆಟ್ರೋಲು ವೆಚ್ಚವಾಗುತ್ತಿದ್ದು ಅದರಲ್ಲಿ ನೂರಕ್ಕೆ ಏಳರಷ್ಟು ಮಾತ್ರ ನಮ್ಮ ದೇಶದಲ್ಲಿ ಹುಟ್ಟುತ್ತದೆ. ಯುದ್ಧಪೂರ್ವದಲ್ಲಿ ನಮಗೆ ೨೦ ಲಕ್ಷ ಟನ್ನ ಮಾತ್ರ ಬೇಕಾಗುತ್ತಿತ್ತು. ಸೀದಾ ಕಿತ್ತಿದರೆ ೮೦ ಲಕ್ಷದ ವರೆಗೆ ಬಳಿಕೆಯು ಏರಬಹುದು.

ಯುದ್ಧಕ್ಕೆ ಮೊದಲು ನಮ್ಮ ದೇಶಕ್ಕೆ ನೂರಕ್ಕೆ ೩೫ ರಷ್ಟು ಪೆಟ್ರೋಲು ಬ್ರಹ್ಮದೇಶದಿಂದ ೮ ರಷ್ಟು ಪಾಕಿಸ್ತಾನದಿಂದ ೯ ರಷ್ಟು ಸ್ಥಾನಿಕ ಉತ್ಪತ್ತಿಯಿಂದ ಹಾಗೂ ಉಳಿದುದು ಬೇರೆ ದೇಶಗಳಿಂದ ಬರುತ್ತಿತ್ತು. ಪೆಟ್ರೋಲ ಖಣಿಗಳ ಶೋಧಕ್ಕಾಗಿ ಬ್ರಿಟನದಿಂದ ಹಿಂದುಸ್ತಾನಕ್ಕೆ ಓರ್ವ ತಜ್ಞರನ್ನು ಕರೆಸಲಾಗಿದೆ. ಜೋಧಪುರ ಸಂಸ್ಥಾನದಲ್ಲಿ ಈಗ ಈ ಬಗ್ಗೆ ಪರಿಶೀಲನೆ ನಡೆದಿರುವದು.

ಆ ಮೇಲೆ ೬ ನಿಲುವಳಿ ಸೂಚನೆಗಳು ಬಂದವು ಅವುಗಳಲ್ಲಿ ಐದು ಮಂಡಿಸಲ್ಪಡಲಿಲ್ಲ. ಇನ್ನೊಂದನ್ನು ಅಧ್ಯಕ್ಷರು ನಿಯಮಬಾಹ್ಯ ಮಾಡಿದರು.

ನಂತರ ಪರಿಶೀಲಕ ಸಮಿತಿಯ ಕೆಲವು ವರದಿಗಳು ಮಂಡಿಸಲ್ಪಟ್ಟವು. ಕಾರ್ಯಸೂಚಿಕೆಯಲ್ಲಿದ್ದ ಇನ್ನುಳಿದವುಗಳನ್ನು ಕೈಕೊಳ್ಳುವದಕ್ಕೆ ಸರಕಾರವು ಈ ದಿನ ಸಿದ್ಧವಿಲ್ಲದ್ದರಿಂದ ಸಭೆ ತಾ. ೩೦ ಶುಕ್ರವಾರಕ್ಕೆ ಮುಂದುವರಿಯಿತು.

ಉಪವಾಸದ ಮುಗಿತಾಯ

(೮ನೇ ಪುಟದಿಂದ)

ಸುತ್ತೇವೆಂದು ನುಡಿದರು. ಮತ್ತು ಭಾರತದ ರಾಜಧಾನಿಯಲ್ಲಿ ಅದರ ಇತಿಹಾಸೋಜ್ವಲವಾದ ಜಾತೀಯ ಸೌಹಾರ್ದ ಮತ್ತು ಶಾಂತಿಯನ್ನು ಪುನಃಸ್ಥಾಪಿಸುವಲ್ಲಿ ಮಾಡಬೇಕಾಗಿರುವ ಯಾವ ಪ್ರಯತ್ನವನ್ನು ಮಾಡದೆ ಉಳಿಯೆವು ಎಂದೂ ಮಾತು ಮುಗಿಸಿದರು.

ತನ್ನ ಹಿಂದಿನ ಭಾಷಣಕಾರರು ಹೇಳಿದ್ದನ್ನು ಶೀಖರ ಪರವಾಗಿ ಸರದಾರ ಹರಬನ್ಸ್ ಸಿಂಗರು ಬೆಂಬಲಿಸಿ ಮಾತನಾಡಿದರು. ಆಗ ಗಾಂಧಿಯವರು ಉಪವಾಸ ನಿಲ್ಲಿಸಲು ತಾವು ಸಿದ್ಧರಿರುವೆವೆಂದು ಹೇಳಿದರು. ಅದರಂತೆ ಹಾಗೆ ಮಾಡುವಾಗ ಯಥಾಪ್ರಕಾರ ಜಪಾನೀ, ಇಸ್ಲಾಮಿ ಮತ್ತು ಪಾರಸೀಧರ್ಮ ಗ್ರಂಥಗಳಿಂದ ಕೆಲವು ಭಾಗಗಳನ್ನು ಓದಿ ಹೇಳಲಾಯಿತಲ್ಲದೆ ಈ ಕೆಳಗಿನ ಮಂತ್ರವನ್ನು ಪಠಿಸಲಾಯಿತು:

"ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ-ಸುಳ್ಳಿಂದ ಸತ್ಯ ಪಥದತ್ತ ನೀನೊಯ್ಯೆನ್ನ! ಕತ್ತಲಿಂದೆನ್ನ ನೊಯ್ ಬೆಳಕಿನತ್ತ॥ ಸಾವಿಂದ (ಹೇದೇವ) ಅಮರತೆಯ ತೀರಕ್ಕೆ! ನೀನೆನ್ನನೊಯ್ಯು (ಕಾಪಾಡು ದೊರೆಯೆ)!" ಅದರ ಜೊತೆಗೆ ಒಂದು ಹಿಂದುಸ್ತಾನಿಯ ಗೀತವನ್ನೂ ಕ್ರೈಸ್ತರ "ಅದ್ಭುತ ಶಿಲುಬೆಯ ಕಂಡೊಡನೇ" ಎಂಬ ಹಾಡನ್ನೂ ಆಶ್ರಮದ ಹುಡುಗಿಯರು ಹಾಡಿ ರಾಮಧ್ಯಾನವನ್ನಾರಂಭಿಸಿದರು. ಮೌಲಾನಾ ಸಾಹೇಬರು ಹಣ್ಣಿನ ರಸ ತುಂಬಿದ ಗಾಜಿನ ಲೋಟವನ್ನು ಗಾಂಧಿಯವರಿಗಿತ್ತರು. ಆಗ ಅಲ್ಲಿ ಹಾಜರಿದ್ದ ಎಲ್ಲರಿಗೂ ಹಣ್ಣುಗಳನ್ನು ಹಂಚಿದ ನಂತರ ಮತ್ತು ಅವುಗಳನ್ನು ಅವರು ತಿಂದ ಬಳಿಕ ಗಾಂಧಿಯವರು ತಮ್ಮ ಉಪವಾಸವನ್ನು ಮುಗಿತಾಯಗೊಳಿಸಿದರು.

ಹೊಸದಿಲ್ಲಿ, ೧೮—೧—೪೮ —ಪ್ಯಾರೇಲಾಲ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

(೯ ನೆಯ ಪುಟದಿಂದ)

ನೋಡಿಕೊಳ್ಳಬೇಕು. ಇದು ಸಾರ್ವಜನಿಕರ ಕರ್ತವ್ಯವಲ್ಲ. ಅಜಮೀರದಿಂದ ಮರಳಿಬಂದ ರಾಜಕುಮಾರಿ ಅಮೃತಕೌರರು ಅಲ್ಲಿಯ ಹರಿಜನರ ದುರವಸ್ಥೆಯನ್ನು ಹೇಳಿದರು. ದಿಲ್ಲಿಯಲ್ಲಿಯೂ ಅವರಿಗೆ ದುರವಸ್ಥೆಯಿದ್ದರೂ ಅಜಮೀರದಲ್ಲಿ ಹೆಚ್ಚಿದೆ. ಇದನ್ನು ಕೂಡಲೇ ನಿವಾರಿಸಬೇಕು. ಕಾಶ್ಮೀರದ ಮೀರಪುರದಿಂದ ದಾಳಿಗಾರರು ಅನೇಕ ಸ್ತ್ರೀಪುರುಷರನ್ನು ಅಪಹರಿಸಿದ್ದು ತರುಣಿಯರು ಹೆಚ್ಚಾಗಿದ್ದು ಅವರನ್ನು ಪಾಕಿಸ್ತಾನಕ್ಕೆ ಕಳಿಸಲಾಗಿದೆಯೆಂದು ತಿಳಿದಿದೆ. ಪಾಕಿಸ್ತಾನ ಸರಕಾರವು ಈ ತಪ್ಪನ್ನು ಸರಿಪಡಿಸಬೇಕು. ನಿಜಸಂಗತಿಯನ್ನು ತಿಳಿಸಬೇಕು. ಒಕ್ಕೂಟ ಸರಕಾರವು ತನ್ನ ಕೈಯಿಂದಾಗುವ ಎಲ್ಲ ಪರಿಹಾರಗಳನ್ನೂ ಕೊಡುತ್ತದೆ. ಇಸ್ಲಾಂ ಧರ್ಮವು ಇಂಥ ಕಾರ್ಯ ಮಾಡಲು ಹೇಳುವದಿಲ್ಲ. ಸರಕಾರದ ಕಾರ್ಯವೇ ಕುಂಠಿತವಾದಂತೆ ತೋರುತ್ತಿದೆ. ಮಾನವತೆಯ ಆದೇಶವನ್ನು ಪಾಲಿಸುತ್ತಿಲ್ಲ.

ಬಿರ್ಲಾ ಭವನ ಹೊಸದಿಲ್ಲಿ ತಾ. ೨೮

ಗಾಂಧೀಜಿಯವರು ಈ ದಿನ ಸಾಯಂಕಾಲ ಪ್ರಾರ್ಥನೋತ್ತರ ಭಾಷಣ ಮಾಡುತ್ತ ಹೀಗೆ ಹೇಳಿದರು. ಭಾವಲಪುರದ ಕೆಲ ಸ್ನೇಹಿತರು ನನ್ನನ್ನು ಕಾಣಲು ಅವಕಾಶ ದೊರೆಯಲಿಲ್ಲೆಂದು ತಿಳಿಸಿದ್ದಾರೆ. ಅವರು ದುಃಖಿತರೆಂಬುದು ನನಗೆ ಗೊತ್ತಿದೆ. ನನ್ನನ್ನು ಕಾಣುವದರಿಂದ ಅವರಿಗೆ ಆನಂದವಾಗುತ್ತಿದ್ದರೆ ಅವಕಾಶವೊದಗಿಸಲು ಪ್ರಯತ್ನಿಸುತ್ತೇನೆ. ಸಾಧ್ಯವಿದ್ದದನ್ನೆಲ್ಲ ಮಾಡಲಾಗುವದೆಂಬ ಆಶ್ವಾಸನವನ್ನು ಅವರಿಗೆ ಕೊಡುತ್ತೇನೆ. ಡಾ. ಸುಶೀಲಾ ನಯ್ಯರ ಮತ್ತು ಲೇಲಿಶ್ರಾಸರು ಭಾವಲಪುರ ಮುಟ್ಟಿದ ಬಗ್ಗೆ ನವಾಬರಿಂದ ತಂತಿ ಬಂದಿದ್ದು, ಅವರು ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿರುವರು. ದೇವರ ದಯೆಯಿಂದ ಮೂರೂ ಧರ್ಮಗಳಲ್ಲಿ ಶಾಂತಿ ನೆಲೆದೋರಿದ್ದು ಎಲ್ಲೆಡೆಯ ಪರಿಸ್ಥಿತಿಯನ್ನು ಸುಧಾರಿಸಬಲ್ಲುದು.

ದ. ಆಫ್ರಿಕೆಯಲ್ಲಿ ಹಿಂದೀಯರು ಪುನಃ ಆಂದೋಲನ ಹೂಡಿದ್ದಾರೆ. ಅನೇಕ ಪ್ರಾಂತಗಳಲ್ಲಿ ಅವರಿಗೆ ಪ್ರವೇಶ ನಿರ್ಬಂಧವಿದೆ. ಹಿಂದೀ ಸ್ತ್ರೀ-ಪುರುಷರು ತಮ್ಮ ಗೌರವ ಕಾಯ್ದುಕೊಳ್ಳಲು ಸತ್ಯಾಗ್ರಹಿಗಳಾಗಿ ಹೋರಾಡುತ್ತಿರುವರು. ನ್ಯಾಯವಾದ ಮಾರ್ಗದಿಂದ ಹೋರಾಡಿದರೆ ಯಶ ದೊರಕುವದು ಖಂಡಿತ. ಸರಕಾರವು ಸಹನೆಯನ್ನು ತೋರಿ ಯಾರನ್ನೂ ಬಂಧಿಸಿಲ್ಲ. ಸತ್ಯಾಗ್ರಹಕ್ಕೆ ಕಳೆ ಬಂದಾಗ ಬಂಧಿಸಬಹುದು. ಶಾಂತವಾಗಿ ಆಂದೋಲನ ಸಾಗಿದಾಗ ಅದನ್ನು ದಬ್ಬಾಳಿಕೆಯಿಂದ ಮುರಿಬಡಿಯಲು ಬಾರದು. ಬಿಳಿಯರು ಹಿಂದೀಯರೊಂದಿಗೆ ಸಂಭಾಷಿಸುವದು ಅವಮಾನವೆಂದೇಕೆ ಬಗೆಯಬೇಕು? ಅಧಿಕಾರಿಗಳು ಸತ್ಯಾಗ್ರಹಿ ಮುಖಂಡರನ್ನು ಕಂಡು ಅವರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಬೇಕು. ಇಂದು ಹಿಂದುಸ್ತಾನ ಪಾಕಿಸ್ತಾನಗಳು ಬ್ರಿಟಿಶ ಕಾಮನವೆಲ್ಥ ರಾಷ್ಟ್ರಗಳಾಗಿವೆ. ಆದಾಗ್ಯೂ ಹಿಂದೀಯರನ್ನು ಅವಮಾನಿಸಿದರೆ ಅವರು ತಪ್ಪು ದಾರಿ ಹಿಡಿದಿರುವರೆಂದು ಹೇಳಲು ಹಿಂಜರಿಯಲಾರೆ. ಕಾಮನ್‌ವೆಲ್ಥದ ಎರಡು ಸಮಾಹಕು ರಾಷ್ಟ್ರಗಳಲ್ಲಿ ಕಲಹ ಉಚಿತವಲ್ಲ.

ನನ್ನ ಉಪವಾಸದ ಪರಿಣಾಮವು ಮೈಸೂರಿನ ಮೇಲಾಗಿಲ್ಲವೆಂದು ಮುಸ್ಲಿಮರ ತಂತಿ ಬಂದಿದೆ. ಆದರೆ ಇಂದು ಅಲ್ಲಿಯ ಗೃಹಮಂತ್ರಿಗಳ ತಂತಿ ಬಂದಿದ್ದು ಅದು ತಪ್ಪು ತಿಳುವಳಿಕೆಯೆಂದು ಹೇಳಲಾಗಿದೆ. ಉಪವಾಸವು ತೀವ್ರ ಪರಿಣಾಮವಾಗಿದ್ದು ಪರಿಸ್ಥಿತಿ ಸುಧಾರಿಸಲು ಸಹಾಯವಾಗಿದೆ. ಬೆಂಗಳೂರ ನಗರದ ಕೆಲ ವಸತಿಗಳಲ್ಲಿ ಗಲಭೆಯಾಗಿದ್ದು ಪೋಲೀಸರ ಉಗ್ರೋಪಾಯಗಳಿಲ್ಲದೇ ಪರಿಸ್ಥಿತಿಯು ಸುಧಾರಿಸಿದ್ದು ಸಂಸ್ಥಾನವೆಲ್ಲ ಜಾತೀಯತೆಯಿಂದ ಮುಕ್ತವಿದೆಯೆಂದೂ ಹೇಳಲಾಗಿದೆ ನಾನು ನನ್ನ ಮುಸ್ಲಿಂ ಮಿತ್ರರಿಗೆ ಅತಿಶಯೋಕ್ತಿ ತಡೆಯಲು ಬಿನ್ನವಿಸುತ್ತೇನೆ. ಉಭಯತರ ಶಾಂತತೆಗೆ ಇದು ಅವಶ್ಯವೆಂದು ನನ್ನ ಅನುಭವದಿಂದ ಹೇಳುತ್ತೇನೆ.

ನನಗೆ ಹಣ ಕಳಿಸುವವರಿಗೆ ಒಂದು ಸಲಹೆ ಕೊಡುತ್ತೇನೆ. ನನ್ನ ಮಿತ್ರನೊಬ್ಬನು ೧೬೦೦ ರೂ. ಗಳನ್ನು ಸಾದಾ ಕವ್ಹರಿನಲ್ಲಿ ಕಳಿಸಿದ್ದಾನೆ. ಇದು ಅಂಚೆ ಖಾತೆಯ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿದರೂ ಉಚಿತವಲ್ಲ. ಎಲ್ಲ ಖಾತೆಯವರು ಜನತೆಯೊಂದಿಗೆ ಸೌಹಾರ್ದ ಭಾವನೆಯಿಂದ ವರ್ತಿಸಲಿ. ಆದರಂತೆ ದಾತೃಗಳು ಎಚ್ಚರಿಕೆ ವಹಿಸಿ ಮನಿಆರ್ಡರಿನಿಂದಾಗಲಿ, ಇನಶುರನ್ಸ ಕವ್ಹರಿನಿಂದಾಗಲಿ ಕಳಿಸಿ ದೇಣಿಗೆಯಲ್ಲಿ ಅದರ ವೆಚ್ಚವನ್ನು ಮುರಿದುಕೊಳ್ಳಬಹುದು.

ಅಪಾಯ ಸೂಚಿಗಳು

(೭ನೇ ಪುಟದಿಂದ)

"ಹೇಸಿಗೆ ಹೊಪಾದರೇನು
ನನಗೆ ಸಾಕು ಕಂಬನಿ;
ಸೂಸಿಯುಂಬಿಸದ ಘನ
ವಿಚಾರ ಹೊಳೆಸಬಲ್ಲುದು,"

ಇದು ಜೀವನದ ಬುಗ್ಗೆಯಲ್ಲಿಯ ಅನುಭವ ಸಾರವನ್ನ ತುಂಬಹೀರಿದ ಕವಿಯ ಇಂಗಿತಜ್ಞತೆಯನ್ನು ತೋರಿಸುತ್ತದೆ. ಪ್ರಪಂಚದ ಅನುಭವದಲ್ಲಿ ಶಿಕ್ಷಣ ಹೊಂದಿದ ಎಷ್ಟೋ ಜನರು ಇಂಥ ಸೂಕ್ಷ್ಮ ಬುದ್ಧಿಯುಳ್ಳವರಿರುತ್ತಾರೆ.

ಜ್ಞಾನವು ಜೀವನದಿಂದ ಬಂದುದು, ಆದರೂ ನೇರವಾಗಿ ಜೀವನವನ್ನು ಕಾಣುವುದರಿಂದ ಜ್ಞಾನ ಉಂಟಾಗದೆನ್ನುತ್ತದೆ. ಕದಿರೊಂದು ಘನಪದಾರ್ಥ. ಅದರಲ್ಲಿ ಘನಪದಾರ್ಥಗಳ ಜ್ಯಾಮಿತಿಯಿದೆ. ಅವುಗಳ ಭಾವಿಕ ಮತ್ತು ರಾಸಾಯನಿಕ ಗುಣಗಳಿವೆ ಎಂದರೆ ಅದು ಯಾರ ಉಸಿರನ್ನಾದರೂ ಏಕೆ ನಿಲ್ಲಿಸಿಬಿಡಬೇಕು? ಅದು ತಿರುಗುತ್ತದೆ. ಅದು ಚಲನ ಸೂತ್ರಗಳಿಗೆ ವಿಧೇಯವಾಗಿರುತ್ತದೆಂದರೆ ಅದರಿಂದೇಕೆ ಹೃತ್ಕಂಪ ಉಂಟಾಗಬೇಕು? ಅದು ಉಪಖಂಡವೆನಿಸಿದ ಭಾರತದ ಕೋಟ್ಯವಧಿ ಜನರ ಸುಮಾರು ಅದಾಯವನ್ನು ತಿನ್ನುವ ಬಟ್ಟೆಯನ್ನು ಉತ್ಪಾದಿಸುವ ಒಂದು ಸಾಧನ. ಈ ಸರಳ ಸಾಧನದ ಸಂಬಂಧದಿಂದ ಕೆಲಸಕ್ಕೆ ಬರುವವನಾವನಿಗಾದರೂ .ಅರ್ಥಶಾಸ್ತ್ರದ ಪವಿತ್ರರಾಜ್ಯದಲ್ಲಿ ಪ್ರವೇಶವುಂಟಾಗದಿರದು, ಎಂಬುದು ಸ್ವಾಭಾವಿಕ.

ಮೂಲ ಶಿಕ್ಷಣದ ಅತಿ ಸ್ಪಷ್ಟ ಸಂಗತಿಗಳ ಬಗ್ಗೆ ಸುದ್ದಿಗಾರನ ಈ ಘೋರವಾದ ಪ್ರತಿಕ್ರಿಯೆಯನ್ನು ಪ್ರಯೋಗ ನೇತೃಗಳು ಒಂದು ಅಪಾಯ ಸೂಚಿಯೆಂದೇ ತಿಳಿಯಬೇಕು. ದೇಶಕ್ಕೆ ಅತ್ಯಾದಾರ ವರವಿತ್ತ ನಯೀತಾಲೀಮಿನ ಬಗ್ಗೆ ಅದು ಪರ್ವತೋಪಮವಾದ ಅಜ್ಞಾನವಿರುವದನ್ನು ತೋರಿಸುತ್ತದೆ. ನನ್ನ ಪ್ರಬಂಧದಲ್ಲಿ ಸೂಚಿಸಲಾದ ರೀತಿಯಲ್ಲಿ ಸಲಹೆಗಳನ್ನೊಳಗೊಂಡ ಪುಸ್ತಕಗಳನ್ನು ಸಂಪೂರ್ಣವಾಗಿ ಬರೆಯಬೇಕು. ದೇಶವನ್ನು ನವೋದ್ಧಾರನೆ ಮುಂದೊಯ್ಯಬೇಕಾದರೆ ವಿಷಯ ವಿವರಣಗಳನ್ನು ಮೂಢನಿಗೂ ತಿಳಿವಷ್ಟು ಸ್ಪಷ್ಟವಾಗಿ ಮಾಡಬೇಕು.

ಹೊಸದಿಲ್ಲಿ, ೯—೧—೪೮

— ದೇವ ಪ್ರಕಾಶ ನಯ್ಯರ

ಹೊರನಾಡ ಕನ್ನಡಿಗರ ಸಮ್ಮೇಲನ

(೬ ನೆಯ ಪುಟದಿಂದ)

೧೯೪೮ ನೇ ವರ್ಷದ ಕಾರ್ಯಕಾರೀ ಮಂಡಲದ ಆಯ್ಕೆ ನಡೆದು ಶ್ರೀ ರಂಗರಾವ ದಿವಾಕರರು ಅಧ್ಯಕ್ಷರಾಗಿ ಮತ್ತು ನ್ಯಾಯಮೂರ್ತಿ ಜಾಗೀರದಾರರು ಸಭಾಪತಿಗಳಾಗಿ ನಿಯೋಜಿತರಾದರು. ಅಲ್ಲದೆ ಕೋಶಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯಕಾರೀ ಮಂಡಳದ ಸದಸ್ಯರು ಮೊದಲಾದವರ ಆಯ್ಕೆಯಾಗಿ ವಿವಿಧ ವಿನೋದಾವಳಿ ಆಭಾರ ಮನ್ನಣೆಗಳೊಂದಿಗೆ ಅಧಿವೇಶನವು ಒಳ್ಳೇ ಯಶಸ್ವಿಯಾಗಿ ಮುಕ್ತಾಯವಾಯಿತು.

ಶ್ರೀ ರಂಗರಾವ ದಿವಾಕರರು ತಮ್ಮ ಭಾಷಣದಲ್ಲಿ ಹೊರನಾಡ ಕನ್ನಡಿಗರ ಈ ಸಮ್ಮೇಲನದ ಹುಟ್ಟು ೧೯೪೨ ರಲ್ಲಿ ಪುಣೆಯ ಒಂದು ಸ್ನೇಹ ಸಮ್ಮೇಲನದಲ್ಲಾಗಿ ನಂತರ ೧೯೪೫ ರಲ್ಲಿ ಮುಂಬಯಿಯಲ್ಲಿ ಇದಕ್ಕೆ ಒಂದು ಮೂರ್ತ ಸ್ವರೂಪ ಬಂದು ಅದೇ ಕಾಶಿಯಲ್ಲಿ ತ್ರಿತೀಯ ಹೊರನಾಡ ಕನ್ನಡಿಗರ ಸಮ್ಮೇಲನವಾಗಿ ಪರಿಣಮಿಸಿದ ಮಾತನ್ನು ಎತ್ತಿ ತೋರಿಸಿದ್ದಾರೆ. ಮದ್ರಾಸ, ಮುಂಬಯಿ, ಪುಣೆಗಳಲ್ಲದೆ ಹಿಂದುಸ್ತಾನದ ಎಲ್ಲ ದೊಡ್ಡ ಪಟ್ಟಣಗಳಲ್ಲಿಯೂ ಕನ್ನಡಿಗರು ನೆಲಸಿದ್ದಾರೆ. ಅವರ ಸಂಖ್ಯೆ ದಿನದಿನಕ್ಕೆ ಈ ಪಟ್ಟಣಗಳಲ್ಲಿ ಹೆಚ್ಚುತ್ತಿದ್ದು ಅವರ ಸಂಘಟನೆಯು ಅವಶ್ಯವೆಂದೂ ದೊಡ್ಡ ನಗರಗಳಲ್ಲಿದ್ದ ಕನ್ನಡಿಗರ ಹೊಣೆಯು ನಾಡಿನ ಏಳಿಗೆಯ ವಿಷಯದಲ್ಲಿ ಹೆಚ್ಚಾಗಿದೆಯೆಂದೂ ಹೇಳಿದ್ದಾರೆ. ಕನ್ನಡಿಗರ ಇಂದಿನ ಪಾಡನ್ನು ಬಣ್ಣಿಸಿ ಏಕೀಕರಣದ ಅವಶ್ಯಕತೆಯನ್ನು ವಿವರಿಸಿದ್ದಾರೆ.

ಹಿಂದೀ ಸೈನ್ಯದಲ್ಲಿ ಘನತೆಗೇರಿದ ಶ್ರೀ ಕರಿಯಪ್ಪನವರು ತಾವು ಕರ್ನಾಟಕದವರೆನ್ನದೆ ಕೊಡಗಿನವರು ಎಂದು ಹೇಳಿದರೆ ಅದರಂತೆ ರಾಜ್ಯಾಂಗ ಘಟನಾತಜ್ಞರಾದ ಶ್ರೀ ಬೆನಗಲ್ಲ ನರಸಿಂಗರಾಯರು ತಾವು ಕರ್ನಾಟಕದವರಲ್ಲ ದಕ್ಷಿಣ ಕನ್ನಡದವರು ಎಂದರೆ ಕನ್ನಡಿಗರಿಗೆ ಎಂತಹ ಪೆಟ್ಟು ಎಂದು ಕೇಳಿ ರಾಜಕೀಯ ಏಕೀಕರಣವು ಭಾವನೆಯ ಏಕೀಕರಣವನ್ನು ತಂದು ಕೊಡುವದೆಂದು ಬಿಂಬಿಸಿದ್ದಾರೆ.

ಹೊರನಾಡಿಗೆ ಕನ್ನಡಿಗರು ಬೇರೆ ಬೇರೆ ಕಾರಣಕ್ಕಾಗಿ ಹೋಗಿ ನೆಲಸಿದ್ದರೂ ಬೇರೆ ಬೇರೆ ಅವಧಿಯವರೆಗೆ ಅವರು ಹೊರನಾಡಿನಲ್ಲಿ ಇರಬೇಕಾಗಿದ್ದರೂ ಕರ್ನಾಟಕದೊಡನೆ ಅವರೆಲ್ಲ ಒಂದಿಲ್ಲೊಂದು ವಿಧವಾದ ಸಂಬಂಧವನ್ನು ಇಟ್ಟುಕೊಂಡು ಒಂದೊಂದು ಬಗೆಯ ಸೇವೆ ಸಲ್ಲಿಸುವದು ಅಗತ್ಯವೆಂಬುದನ್ನು ವಿವರಿಸಿ ಹೇಳಿದ್ದಾರೆ.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೨೯

ಎಣ್ಣೆ ಕಾಳುಗಳು

ಶೇಂಗಾ ಹೊಸದು	೧೬೧—೦—೦
ಅಗಸೆ	೨೮—೪—೦
ಅಗಸಿ ಎಣ್ಣೆ	೧೮—೬—೦

ಬಂಗಾರ

ತಯಾರಿ	೧೦೫—೮—೦
ಸಾವರಿನ	೬೮—೮—೦

ಬೆಳ್ಳಿ

ತಯಾರಿ	೧೬೫—೧೨—೦
ವಾಯಿದೆ	೧೬೦—೩—೦
[illegible]	೨೧೬೨—೫—೦
ಡೇಂಬರ	೧೬೧—೨—೦

ಅರಳೆ

ಜನೆವರಿ	—
ಮಾರ್ಚ	೫೧೭—೮—೦
ಮೇ	೫೨೪—೪—೦
ಜುಲೈ	೫೪೪—೦—೦
ಸಪ್ಟಂಬರ	೫೪೯—೦—೦
ಹೆಚ್ಚು	— ೫೨೫—೦—೦
ಕಡಿಮೆ	೫೧೭—೮—೦

ಮುಂಬಯಿ ಸ್ಟಾಕ್ ಪೇಟೆ ಮುಚ್ಚಿದೆ.

ಕೊಲ್ಲಾಪುರ

೨೦—೧—೧೯೪೮ ನೇ ದಿನ ಕೊಲ್ಲಾಪುರ ಪೇಟೆಗೆ ೧೪೩೪೮ ಪೆಂಟಿ ಬೆಲ್ಲ ಬಂದು ೨೨೬೪೫ ಪೆಂಟಿ ಮಾರಾಟವಾದವು. ಬೆಲ್ಲದ ಧಾರಣೆ ೧೮ ರಿಂದ ೫೧—೭೦ ವರೆಗಿದ್ದಿತು. ಅಂದು ೬೦೮ ಚೀಲ ಶೇಂಗಾ ಬಂದಿದ್ದು ೬೦೮ ಚೀಲ ಮಾರಾಟವಾದವು. ಶೇಂಗಾದ ಧಾರಣೆ ರೂಪಾಯಿಗೆ ೨—೬—೯ ಯಿಂದ ೨—೭—೦ ಶೇರು ಇದ್ದಿತು ಎಂದು ಮಾರ್ಕೆಟ ಕಮೀಟಿಯವರು ತಿಳಿಸುತ್ತಾರೆ.

ಸಾಂಗಲಿ ಪೇಟೆ

ತಾ. ೨೯

ಅರಿಷಣ ಹೇರಿಗೆ	೧೨೫-೧೩೮
ಹೊಸ ಮೆಣಸಿನಕಾಯಿ	೧೦೦-೧೩೫
ಬೆಲ್ಲ ಹೇರಿಗೆ	೩೫--೫೨
ಶೇಂಗಾ ಖಂಡಿ	೧೨೫--೧೨೭

ಶಿವಮೊಗ್ಗೆ

ತಾ. ೨೯

ಶಿವಮೊಗ್ಗೆ ಅಡಿಕೆಪೇಟೆಯ ಧಾರಣೆ ಮಣ ೧ಕ್ಕೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ಕ್ಕೆ	೪೨-೪೬
,, ,, ೨	೩೫-೪೦
,, ,, ೩	೨೭-೩೫
ರಾಜಾಅಲವು	೨೨-೨೪
ಶೋರಸಾಲು	೪೦-೪೨
ಬೆಟ್ಟ ವಂತಿ	೧೮—೨೦
ಬೆಟ್ಟ	೧೫-೧೮

ನಿರ್ಯಾತ ಸೌಕರ್ಯವಿದೆ. ಬೆಲೆ ಇಳಿಮುಖವಾಗಿದೆ.

ಶ್ರೀ. ಬಿಧನಚಂದ್ರರಾಯ

ಪಶ್ಚಿಮ ಬಂಗಾಲದಲ್ಲಿ ಹೊಸ ಮಂತ್ರಿ ಮಂಡಲ [illegible] ಇವರೇ ಈಗ ಅಲ್ಲಿ ಮುಖ್ಯ ಪ್ರಧಾನರಾಗಿದ್ದಾರೆ.

ಟೆಕ್ಸ್‌ಟಾಯಿಲ್ಸ

ಅಹಮದಾಬಾದ ಅಡ್ವಾನ್ಸ	೫೩೭-೦-೦
ಮುಂಬಯಿ ಡಾಯಿಂಗ	೧೨೭೬-೪-೦
ಸೆಂಟ್ರಲ ಇಂಡಿಯಾ	೩೪೮—೦—೦
ಸೆ. ಚುರಿ	೫೦೦—೦—೦
ಕುಲಾಬಾ ಲ್ಯಾಂಡ	೩೨೦-೦-೦
ಗೋಕಾಕ	೩೫೩—೦—೦
ಇಂಡಿಯನ್ ಬ್ಲೀಚಿಂಗ	೧೫೮-೦-೦
ಕೋಹಿನೂರು	೬೨೩-೦-೦
ಫೀನಿಕ್ಸ	೪೩೦—೦—೦
ಸೊಲಾಪುರ	೬೨೮೫-೦-೦
ಸಿಂಪ್ಲೆಕ್ಸ	೨೩೧—೦—೦
ಸ್ವದೇಶಿ	೬೬೨-೦-೦
ವಿಷ್ಣು	೬೧೩—೫—೦
ಟಾಟಾ ಪವರ	೧೫೦೫—೦—೦
ಟಾಟಾ ಹೈಡ್ರೋ	೧೫೨—೦—೦
ಟಾಟಾ ಸ್ಟೀಲ ಡೆಫರ್ಡ	೧೫೬೫-೦-೦
ಟಾಟಾ ಸ್ಟೀಲ ಆರ್ಡಿನರಿ	೩೭೨-೦-೦
ಪ್ರಿಮಿಯರ ಕನ್‌ಸ್ಟ್ರಕ್ಶನ	೨೨೬—೦—೦
ಇಂಡಿಯನ ಆಯರ್ನ	೩೫—೦—೦
ಬರ್ಮಾ ಕಾರ್ಪೋರೇಶನ	೩-೧೦-೦
ಇಂಡಿಯನ್ ಕಾಪರ	೩-೧೦-೦

ಸಿಮೆಂಟ

ಅಸೋಸಿಯೇಟೆಡ ಸಿಮೆಂಟ್ಸ	೧೭೭-೮-೦

ಇನ್ಶುರನ್ಸ

ನ್ಯೂ ಇಂಡಿಯಾ ಇನ್‌ಶುರನ್ಸ	೩೯-೦-೦

ಪ್ರಿಫರನ್ಸ

ಟಾಟಾ ಸ್ಟೀಲ ೧ ನೇ ಪ್ರಿಫರನ್ಸ	೨೦೦-೦-೦
,, ೨ ನೇ ,,	೧೫೧-೧೨-೦

ಬ್ಯಾಂಕುಗಳು

ಸೆಂಟ್ರಲ	೯೦—೦—೦
ಇಂಪಿರಿಯಲ (ಅಂಶತಃ)	೫೨೦—೦—೦
ಇಂಪೀರಿಯಲ (ಪೂರ್ಣ)	೨೦೫೫-೦-೦
ಇಂಡಿಯಾ	೨೪೫—೦—೦
ರಿಜರ್ವ	೧೨೩—೮—೦

ಇಂಗ್ಲಂಡಿನ ಹೌಸ್ ಆಫ್ ಕಾಮನ್ಸ್‌ನ [illegible] ಇವರು ನವೆಂಬರ್ ೩೦ನೆ ಹೆಸ್ಸು [illegible] ವಿಭಾಗದ [illegible] ಸದಸ್ಯರು.

ಅಂತರ್ರಾಷ್ಟ್ರೀಯ

ಯುರೋಪಿನಲ್ಲಿ ಪಡುವಣ ಒಕ್ಕೂಟ

ಬ್ರಿಟಿಶ ಪಾರ್ಲಮೆಂಟಿನಲ್ಲಿ ಪರರಾಷ್ಟ್ರ ಮಂತ್ರಿಯಾದ ಅರ್ನೆಸ್ಟ್ ಬೆವಿನ್ನರು ಮೊನ್ನೆ ಭಾರಿ ಭಾಷಣವೊಂದನ್ನು ಮಾಡಿದರು. ಇದರಲ್ಲಿ ಅವರು ರಶಿಯವನ್ನು ಹೊರಗಿಟ್ಟು "ಪಡುವಣ ಒಕ್ಕೂಟ"ವೊಂದನ್ನು ಸ್ಥಾಪಿಸುವ ಮಾತನ್ನು ಪ್ರಸ್ತಾಪಿಸಿದರು. ಇದು ಈ ಹಿಂದೆ ಲಂಡನ್ನಿನಲ್ಲಿ ನಡೆದ ಚತುರ್ರಾಷ್ಟ್ರ ಮಂತ್ರಿ ಸಮ್ಮೇಳನದ ಅಯಶಸ್ವಿ ಮುಕ್ತಾಯದ ಫಲವೆಂದು ತರ್ಕಿಸಲಾಗುತ್ತಿದೆ.

ಬ್ರಿಟಿಶ ಪ್ರಕಾರವಾಗಿ ಮೇಲಿನದಕ್ಕೆ ಹೊಂದಿಕೊಂಡ ಅವರ ಪರರಾಷ್ಟ್ರ ಧೋರಣದ ಮಾರ್ಗ ಹೀಗಿದೆ:

೧) ಪಡುವಣ ಯುರೋಪ್ಯ ರಾಜ್ಯಗಳ ಮತ್ತು ಅವುಗಳ ಅಧೀನರಾಜ್ಯಗಳದೊಂದು ಒಕ್ಕೂಟ ಸ್ಥಾಪಿಸುವುದು.

೨) ಅಮೇರಿಕ, ಫ್ರಾನ್ಸ್ ಮತ್ತು ಇಂಗ್ಲೆಂಡುಗಳ ಆಳಿಕೆಗೆ ಒಳಪಟ್ಟ ಪಶ್ಚಿಮಾರ್ಧ ಜರ್ಮನಿಯ ಪ್ರದೇಶಗಳನ್ನು ಒಂದುಗೂಡಿಸಿ ಅದರ ರಾಜ್ಯಘಟನೆಯನ್ನು ಪುನರ್ವ್ಯವಸ್ಥೆಗೊಳಿಸುವುದು ಮತ್ತು ರೂರ್ ಪ್ರದೇಶವನ್ನು ಅಂತರಾಷ್ಟ್ರೀಯ ನಿಯಂತ್ರಣದೊಳಗಿಡುವುದು.

೩) ಮಧ್ಯ ಪ್ರಾಚ್ಯಕ್ಕೆ ಸುರಕ್ಷಿತತೆಯನ್ನು ಸಾಧಿಸಲು ಅರಬರೊಡನೆ ಕೆಲವು ಒಪ್ಪಂದಗಳನ್ನು ಮಾಡಿಕೊಳ್ಳುವುದು.

೪) ಪರಸ್ಪರ ಆರ್ಥಿಕ ಸಹಾಯ ಮತ್ತು ಸ್ನೇಹಕಾರದ ದೃಷ್ಟಿಯಿಂದ ಮಾರ್ಶಲ್ ಯೋಜನೆಗೊಪ್ಪಿದ ಯುರೋಪ್ಯ ರಾಷ್ಟ್ರಗಳೊಡನೆ ಸಹಕಾರದಿಂದ ವರ್ತಿಸುವುದು.

ಬೆವಿನ್ನರು ಬ್ರಿಟನ್ನಿನ ಸಹಕಾರದಿಂದ ಯುರೋಪ್ಯರಾಷ್ಟ್ರಗಳ ಏಳಿಗೆಯನ್ನು ಸಾಧಿಸುವ ಉದ್ದೇಶ ಇಟ್ಟುಕೊಂಡಿದ್ದಲ್ಲದೆ ಈ ಮೂಲಕ ರಶಿಯದ ವಿರುದ್ಧ ಚಟುವಟಿಕೆ ಪ್ರಾರಂಭಿಸಿಲ್ಲವೆಂದು ಹೇಳಲಾಗುತ್ತದೆ.

ಈ ವಿಷಯವನ್ನೆತ್ತಿ ಮಾಸ್ಕೋದ 'ಪ್ರವ್ದ' ಪತ್ರಿಕೆಯು—ಇದೊಂದು ಏಶಿಯ ಮತ್ತು ಆಫ್ರಿಕಗಳಲ್ಲಿಯ ಅಧೀನ ರಾಷ್ಟ್ರಗಳ ರಕ್ತ ಹೀರುವ ಉಪಾಯ—ಎಂದು ಟೀಕಿಸಿದೆ.

ಅರಬ-ಯಹೂದಿ ಘರ್ಷಣ

ಜಾಫಾ ಜೆರೂಸಲೇಮು ರಸ್ತೆಯಲ್ಲಿ ಯಹೂದಿಗಳ ಹಗನಾ ರಕ್ಷಕ ದಲದೊಡನೆ ಅಬ್ದುಲ್ ಕಾದರ್ ಹುಸೇನಿ ಎಂಬ ಅನುಭವಿಕನಾದ ಅರಬ ಕಾಳಗವೀರ ಮುಖಂಡನು ಕಳೆದ ತಾ. ೨೩ ರಲ್ಲಿ ತನ್ನ ಬಲದಿಂದ ಹೊಯ್ದಾಡಿದನೆಂದು ಸುದ್ದಿ ಬಂದಿದೆ. ಈ ಘರ್ಷಣದಲ್ಲಿ ೫ ಯಹೂದಿಗಳನ್ನು ತಮ್ಮಲ್ಲಿಯ ನಾಲ್ಕು ಜನ ಗಾಯಗೊಂಡುದರ ಮತ್ತು ಇಬ್ಬರು ಸತ್ತುದರ ಬದಲಾಗಿ ಸಂಹರಿಸಲಾಯಿತೆಂದು ಅರಬರ ಹೇಳಿಕೆ. ತಮ್ಮಲ್ಲಿ ಐವರನ್ನು ಅರಬರು ಕೊಂದರೆಂದೂ ಅವರ ಸುಮಾರು ೧೦ ಜನ ಅರಬರನ್ನು ತಾವು ಕೊಂದೆವೆಂದೂ ಯಹೂದಿಗಳ ಸಾರಿಕೆ.

ಟೆಲಅವೀವಿನ ಆಗ್ನೇಯದಲ್ಲಿ ಯಹೂದಿಗಳ ಹಗನ್ನ "ಸಮೂಯಾ ಯುದ್ಧ ದಲ'ದವರು ಹಿಡೋಯುಸ್ಕಿನಲ್ಲಿದ್ದ ಒಂದು ಉಂಡಾಡಿ ಅರಬ ಶಿಬಿರದ ಮೇಲೆ ದಾಳಿ ಮಾಡಿದುದಾಗಿ ಯಹೂದಿಗಳ ಹೇಳಿಕೆಯಿದೆ. ಇತ್ತೀಚೆಗೆ ಹತ್ತಿರದಲ್ಲೇ ೧೧ ಯಹೂದಿಗಳನ್ನು ಕೊಂದುದರ ಮುಯ್ಯು ತೀರಿಸಿಕೊಳ್ಳುವುದಕ್ಕಾಗಿ ಈ ದಾಳಿಯನ್ನು ಮಾಡಲಾಯಿತೆಂದೂ ಇದರಲ್ಲಿ ಮನೆಗಳನ್ನು ಸುಟ್ಟು ಅನೇಕರನ್ನು ಗಾಯಗೊಳಿಸಲಾಯಿತೆಂದೂ ಟೆಲಅವೀವಿನ ಸುದ್ದಿಯಿದೆ.

ಅರಬರು ಅಮೇರಿಕದಿಂದ ಆಯುಧ ಸಾಮಗ್ರಿಗಳನ್ನು ಯದ್ವಾತದ್ವಾ ಬೆಲೆಗೆ ಕೊಳ್ಳುತ್ತಿದ್ದಾರೆ. ಜೆರೂಸಲೇಮಿನೊಳಗಡೆ ಇರುವ ೧೫೦೦ ಯಹೂದಿಗಳನ್ನು ಸುಮಾರು ೩೦ ಸಾವಿರ ಅರಬರು ಮುತ್ತಿರುವುದಾಗಿ ತಿಳಿಯುತ್ತದೆ. ಸದ್ಯ ಬ್ರಿಟಿಶ ಶಸ್ತ್ರ ಲಾರಿಗಳು ಒಳಗಿನವರಿಗೆ ಆಹಾರ ಸಾಮಗ್ರಿಗಳನ್ನು ಒಯ್ದು ಕೊಡುತ್ತಿವೆ.

ಆಗಲೇ ಘರ್ಷಣಗಳು ಹೆಚ್ಚಾಗಿ ಊರಿನಲ್ಲಿ ಆಹಾರಾದಿಗಳ ಅಭಾವ, ಗಲಿಬಿಲಿ ಇತ್ಯಾದಿಗಳುಂಟಾಗಿ ಜನಜೀವನ ಅಸಾಧ್ಯವಾಗುತ್ತ ಹೋಗಿದೆ. ಮುಂದೆ ಪರಿಸ್ಥಿತಿ ಮತ್ತೂ ಕೆಡಬಹುದು.

ಫ್ರೆಂಚ ಹಿಂದೀಯರ ವಿಮೋಚನೆ

ಫ್ರೆಂಚ ಹಿಂದೀಯರ ದಾಸ್ಯ ವಿಮೋಚನೆಗಾಗಿ ನೆರವೀಯಲು ಮದ್ರಾಸಿನಲ್ಲಿ ೧೫ ಜನರದೊಂದು ಸಮಿತಿ ಸ್ಥಾಪಿತವಾಯಿತು. ಪಾಂಡಿಚೇರಿ, ಕಾರೈಕಲ್ ಮತ್ತು ಫ್ರೆಂಚ್ ವಸಾಹತುಗಳಲ್ಲಿ ಇಂದು ನಡೆಯುತ್ತಿರುವ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ಕೊಡಲು, ಸಹಾಯ ಸಹಕಾರಗಳನ್ನು ನೀಡಲು ತಮಿಳುನಾಡಿನ ಉತ್ಸಾಹಿಗಳು ಮುಂದಾದುದೇ ಮೇಲಿನ ಸಮಿತಿಯ ಸ್ಥಾಪನೆಗೆ ಕಾರಣವಾಯಿತು.

ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಸದಸ್ಯರಾದ ಶ್ರೀ. ಎಸ್. ಬಿ. ಆದಿತ್ಯನ್ನರು ಮೇಲಿನ ಸಮಿತಿಯ ಅಧ್ಯಕ್ಷರು. ಅವರಿಗೆ ಒಬ್ಬ ಉಪಾಧ್ಯಕ್ಷನ ಮತ್ತು ಕಾರ್ಯದರ್ಶಿಯ ನೆರವನ್ನು ಕೊಡಲಾಗಿದೆ.

ಮೇಲಿನ ಸಮಿತಿಯ ಸ್ಥಾಪನೆಗೆ ತಮಿಳುನಾಡಿನ ಪ್ರಾಂತಿಕ ಕಾಂಗ್ರೆಸ್ ಕೆಲಸಗಾರರ ಸಂಘವೇ ಪ್ರೋತ್ಸಾಹಿಸಿತ್ತು. ಭಾರತ ಸರಕಾರ ಮತ್ತು ಫ್ರೆಂಚ ಸರಕಾರಗಳ ನಡುವೆ ಈಗ ನಡೆಯುತ್ತಿರುವ ಮಾತುಕತೆಗಳ ಪರಿಣಾಮವಾಗಿ ಫ್ರೆಂಚರು ತಮ್ಮ ಹಿಂದೀ ವಸಾಹತುಗಳಿಂದ ಶಾಂತ ರೀತಿಯಿಂದ ತೆರಳುವರೆಂಬ ಆಶಯದ ಗೊತ್ತುವಳಿಯನ್ನು ಸಮಿತಿ ಪಾಸ್ ಮಾಡಿದೆ. ಮಾತುಕತೆ ಒಂದುವೇಳೆ ಮುರಿದರೆ ಭಾರತದಲ್ಲಿ ಲೀನಹೊಂದುವ ಫ್ರೆಂಚ ಹಿಂದೀಯರ ಇಚ್ಛೆಯನ್ನು ಕೈಗೂಡಿಸಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಸಮಿತಿಗೆ ಅಧಿಕಾರ ಕೊಡಲಾಯಿತು.

ಫ್ರೆಂಚರು ಮತ್ತು ಪೋರ್ಚುಗೀಜರು ಸಣ್ಣ ಸಣ್ಣ ತುಣುಕುಗಳನ್ನು ಹಿಂದುಸ್ತಾನದಲ್ಲಿ ಹಿಡಿದುಕೊಂಡಿರುವುದಕ್ಕೆ ಈಗ ಅರ್ಥವಿಲ್ಲ. ಮೊದಲೆಂದರೆ ಇಡಿ ಹಿಂದುಸ್ತಾನ ಪರಕೀಯ ಆಳಿಕೆಯಲ್ಲಿತ್ತು. ಸ್ವರಾಜ್ಯ ಸ್ಥಾಪನೆಯಾದ ಇಂದು ಬೇರೆ ಬೇರೆ ವಿದೇಶಿಯರ ಆಳಿಕೆಯಲ್ಲಿರುವ ಹಿಂದೀಯರು ಮುಖ್ಯ ಪ್ರವಾಹವೆನಿಸಿದ ಹಿಂದೀ ಬಹುಸಂಖ್ಯಾಕರೊಡನೆ ಬೆರೆಯಲು ಆಶಿಸುವುದು ಅಸ್ವಾಭಾವಿಕವಲ್ಲ. ಅವರಿಗೆ ಪ್ರಯತ್ನದಲ್ಲಿ ಯಶಸ್ಸು ಸಿಗುವುದು ದುರ್ಲಭವೆನಿಸಲಾರದೆಂಬುದೂ ಸ್ಪಷ್ಟವಿದೆ.

ಇಂಡೋನೇಶಿಯ ಮಂತ್ರಿಮಂಡಲದ ರಾಜೀನಾಮೆ

ಡಾ. ಶರೀಫುದ್ದೀನರ ನೇತೃತ್ವದಲ್ಲಿದ್ದ ಇಂಡೋನೇಶಿಯದ ಪ್ರಜಾರಾಜ್ಯದ ಮಂತ್ರಿಮಂಡಲವು ರಾಜೀನಾಮೆಯನ್ನೊಪ್ಪಿಸಿದೆಯೆಂದು ಅಧ್ಯಕ್ಷರಾದ ಡಾ. ಸೋಯೆಕರ್ನೋರವರು ಆಕಾಶವಾಣಿಯಲ್ಲಿ ಹೇಳಿದರೆಂದು ತಿಳಿಯುತ್ತದೆ.

ಡಚ್ ಸುದ್ದಿ ಸಂಸ್ಥೆಯ ವರದಿಯಂತೆ ಹಿಂದಿನ ಪರರಾಷ್ಟ್ರ ಮಂತ್ರಿಯಾದ ಡಾ. ಹಟ್ಟಾರವರನ್ನು ಹೊಸ ಮಂತ್ರಿಮಂಡಲವನ್ನು ರಚಿಸಲು ಆಹ್ವಾನಿಸಲಾಗಿದೆಯೆಂದು ಗೊತ್ತಾಗುತ್ತದೆ.

ಕಳೆದ ತಾ ೨೩ರ ರಾತ್ರಿ ಶರೀಫುದ್ದೀನರ ಮಂತ್ರಿಮಂಡಲ ರಾಜೀನಾಮೆ ಕೊಡಲು ಅದೇ ಒಂದು ವಾರದ ಹಿಂದೆ ಪ್ರಜಾರಾಜ್ಯವು ಡಚ್ಚರೊಡನೆ ಒಪ್ಪಂದಕ್ಕೆ ಸಹಿಮಾಡಿದ್ದೇ ಕಾರಣವೆಂದು ಹೇಳಲಾಗುತ್ತದೆ. ಆ ಒಪ್ಪಂದದ ಪ್ರಕಾರ ಸಂಯುಕ್ತರಾಷ್ಟ್ರ ಸಂಘದ ಭದ್ರತಾ ಮಂಡಲದ ಸತ್ಕಾರ್ಯ ಸಮಿತಿಯು ಹೇಳಿದ ೬ ರಾಜಕೀಯ ತತ್ವಗಳ ಪಾಲನೆ ಅಡಕವಾಗಿದೆ. ಅವುಗಳ ಆಧಾರದ ಮೇಲೆಯೇ ಈಗ ಪ್ರಜಾರಾಜ್ಯವು ಡಚ್ಚರೊಡನಿರುವ ತಮ್ಮ ಕಲಹವನ್ನು ಇತ್ಯರ್ಥಪಡಿಸಿಕೊಳ್ಳಬೇಕಾಗಿದೆ. ಪ್ರಜಾರಾಜ್ಯಕ್ಕೆ ಸಂ. ರಾ. ಸಂಘದ ಸಹಾಯವು ಸಕಾಲದಲ್ಲಿ ಪರಿಣಾಮಕಾರಿಯಾಗಿ ಬರದಿದ್ದುದರಿಂದ 'ಅನ್ಯಥಾ ಶರಣಂ ನಾಸ್ತಿ'ಯೆಂದು ಡಚ್ಚರೊಡನೆ ಸಭ್ಯದ ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿ ಬಂದಿತೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಇದಕ್ಕೆ ಸಂ. ರಾ. ಸಂಘ ಡಚ್ಚರನ್ನು 'ಹೇ ಅನುಜ್ಞಾಘಡಿ' ಎಂಬ ಭಾವದಿಂದ ನಡೆಸಿಕೊಂಡದ್ದೇ ಕಾರಣ.

ಮಲಯಕ್ಕೆ ಹೋದ ಹಿಂದೀ ಸ್ನೇಹಮಂಡಲವು ೩ ವಾರಗಳಲ್ಲಿ ಅಲ್ಲಿಯ ಕೇಂದ್ರ ನಗರಗಳಿಗೆಲ್ಲ ಭೆಟ್ಟಿ ಕೊಟ್ಟಿತು. ಅಲ್ಲದೆ ಅಲ್ಲಿಯ ಹಿಂದೀ ಚೀನೀ ಮಲಯನ್ನರ ಅನೇಕ ಸಾಂಸ್ಕೃತಿಕ ಸಂಸ್ಥೆಗಳನ್ನೂ ಮಂಡಲ ಸಂದರ್ಶಿಸಿತು.

ಫ್ರಾಂಕಿನ ದರದಲ್ಲಿ ಇಳಿತಾಯ

ಫ್ರೆಂಚ ಸರಕಾರವು ತನ್ನ ನಾಣ್ಯವಾದ ಫ್ರಾಂಕಿನ ದರವನ್ನು ಇಳಿಸಿ ಈಗ ಒಂದು ಡಾಲರಿಗೆ ೨೧೪.೩೯ ಫ್ರಾಂಕುಗಳೆಂದೂ ಒಂದು ಪೌಂಡಿಗೆ ೮೬೪ ಫ್ರಾಂಕುಗಳೆಂದೂ ನೂರಕ್ಕೆ ೪೦ ರಷ್ಟು ಇಳಿತ ವಿನಿಯಮದ ದರವನ್ನು ಹೊಸದಾಗಿ ನಿರ್ಧರಿಸಿದೆ. ಇದಲ್ಲದೆ ಇನ್ನು ಕೆಲವೇದಿನಗಳಲ್ಲಿ ಬಂಗಾರ ಮತ್ತು ಕೆಲವು ದೇಶಗಳ ನಾಣ್ಯಗಳನ್ನು ಪೇಟೆಯಲ್ಲಿ ಕೊಳ್ಳುವ ಮತ್ತು ಮಾರುವ ವ್ಯವಸ್ಥೆಯಾಗುವುದೆಂದು ತಿಳಿಯುತ್ತದೆ. ಈಗ ಅಮೇರಿಕದ ಡಾಲರ ಮತ್ತು ಪೋರ್ಚುಗಲ್ಲಿನ ಎಸ್ಕ್ಯುಡೋ ನಾಣ್ಯಗಳ ವ್ಯಾಪಾರಕ್ಕೆ ಮಾತ್ರ ಆಸ್ಪದ ಕೊಡಲಾಗಿದೆ.

ಇಷ್ಟರವರೆಗೆ ಫ್ರಾಂಕಿನ ದರ ಅತಿಯಾಗಿತ್ತೆಂದೂ ಈಗಿನದು ಸರಿಯಾಗಿದೆಯೆಂದೂ ತಜ್ಞರ ಅಭಿಪ್ರಾಯ. ಇದರಿಂದ ಫ್ರಾನ್ಸಿಗೆ ಲಾಭ; ಮತ್ತು ಇತರ - ದೇಶಗಳಿಗೆ ನಷ್ಟಸಂಭವಿಸುವಂತಾಗಿದೆ. ಅದರಿಂದಲೆ ಅಮೇರಿಕ ಇದಕ್ಕೆ ಸಮ್ಮತಿಸಿದರೂ ಬ್ರಿಟನ್ನು ಕೆಲ ವಿಷಯಗಳಲ್ಲಿ ಸಮ್ಮತಿಸಲು ತಯಾರಿಲ್ಲವೆಂದು ಸುದ್ದಿಯಿದೆ. ಈ ಬದಲಾವಣೆಯ ಮುಖ್ಯೋದ್ದೇಶವೆಂದರೆ ಫ್ರಾನ್ಸಿನಲ್ಲಿ ಈಗ ಅತಿಯಾಗಿರುವ ಪದಾರ್ಥಗಳ ಬೆಲೆಯನ್ನು ಇಳಿಸುವುದು. ಇದರಿಂದ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಕೆಲಮಟ್ಟಿಗೆ ಧಾರಣೆ ಏರುವಂತಾಯಿತು.

ಫ್ರಾನ್ಸಿನ ನಿರ್ಯಾತ ವ್ಯಾಪಾರ ಮತ್ತು ವಿನಿಮಯ ಸ್ಥಾಯಿತ್ವಗಳು ಮೇಲಿನ ಮೂಲ್ಯಾವತರಣದಿಂದ ಸಾಧಿಸಲ್ಪಟ್ಟವು. ಅಂತರಾಷ್ಟ್ರೀಯ ಧನನಿಧಿಯವರೂ ಬ್ರಿಟನ್ನೂ ಈ ಬದಲಾವಣೆಗೆ ಒಪ್ಪಿದರೂ ಬ್ರಿಟನ್ನೀಗ ಸ್ವಚ್ಛಂದ ಪೇಟೆಯನ್ನು ಡಾಲರ್ ಮತ್ತು ಇತರ ಕೆಲವು ಚಿನ್ನದ ನಾಣ್ಯಗಳಿಗೆ ತೆರೆದುಕೊಟ್ಟುದು ತಪ್ಪೆನ್ನುತ್ತದೆ.

ವಿದೇಶಕ್ಕೆ ಸರಕುಗಳನ್ನು ಫ್ರಾನ್ಸಿನಿಂದ ನಿರ್ಯಾತಮಾಡುವವರು ತಮ್ಮ ಸರಕಿನ ಬೆಲೆಯ ರೂಪದಲ್ಲಿ ಬರುವ ವಿದೇಶಿ ನಾಣ್ಯದಲ್ಲಿ ಅರ್ಧವನ್ನು ಸರಕಾರಕ್ಕೆ ನಿರ್ದಿಷ್ಟಬೆಲೆಗೆ ಒಪ್ಪಿಸಿ ಉಳಿದ ಅರ್ಧವನ್ನು ಪೇಟೆಯಲ್ಲಿ ತಮಗೆ ಸರಿಕಂಡಬೆಲೆಗೆ ಮಾರಬಹುದು. ಇದರಿಂದ ಸರಕಾರಕ್ಕೆ ಖರ್ಚಿಗೆ ಡಾಲರ್ ದೊರೆಯುವಂತಾಗುತ್ತದೆ.

ನಾಳಿನಿಂದ ಎಲ್ಲ ವಿದೇಶ ನಾಣ್ಯಗಳ ಬೆಲೆಗಳೂ ಫ್ರಾಂಕಿನೊಡನೆ ಈಗಿದ್ದ ಬೆಲೆಯಲ್ಲಿ ನೂರಕ್ಕೆ ೪೦ ರಷ್ಟು ಹೆಚ್ಚುವುವೆಂದು ತಿಳಿದುಬಂದಿದೆ.

ತುಣುಕು ಸುದ್ದಿಗಳು

ಹಿಂದೀ—ಆಸ್ಟ್ರೇಲಿಯ ೪ ನೆಯ ನಿರ್ಣಾಯಕ ಕ್ರಿಕೆಟ್ ಪಂದ್ಯದಲ್ಲಿ ಕಳೆದ ೨೭ ರಲ್ಲಿ ಹಿಂದೀಯರು ತಮ್ಮ ೧ನೆಯ ಇನ್ನಿಂಗ್ಸಿನಲ್ಲಿ ಒಟ್ಟು ೩೮೧ ಓಟಗಳನ್ನು ತೆಗೆದು ಎಲ್ಲರೂ ಔಟಾದರು. ಕೂಡಲೆ ೨ ನೆಯ ಇನ್ನಿಂಗ್ಸನ್ನು ಪ್ರಾರಂಭಿಸಿ ಒಂದು ಓಟವನ್ನು ಕೂಡ ಸಂಪಾದಿಸದೆ ಅಮರನಾಥ ಮತ್ತು ಮಂಕಡ ಇಬ್ಬರನ್ನೂ ಕಳೆದುಕೊಂಡರು. ಆಟ ಮುಗಿಯುವಷ್ಟರಲ್ಲಿ ಹಜಾರೆಯವರು ಇನ್ನೊಂದು ಶತಕವನ್ನು ಸಾಧಿಸಿದ್ದರಿಂದಲೇ ೬ ಹುದ್ದರಿಗಳು ಔಟಾದಾಗ ೧೮೮ ಓಟಗಳನ್ನು ಸಂಪಾದಿಸುವಂತಾಯಿತು.

\+ \+ \+ \+

ಚೀನೀ ಕಮ್ಯೂನಿಸ್ಟ್ ಸೈನಿಕರು ಪಶ್ಚಿಮ ಮಂಚೂರಿಯದಲ್ಲಿಯ ರೇಲ್ವೆ ಕೇಂದ್ರವಾದ ಸಿನ ಟಿಟೆನ್ ನಗರವನ್ನು ವಶಪಡಿಸಿಕೊಂಡಿರುವರೆಂದು ಸರಕಾರೀ ವರದಿಯಿಂದ ಗೊತ್ತಾಗುತ್ತದೆ. ಈ ನಗರವು ಮುಕಡೆನ್ನಿನ ಮಹಾದ್ವಾರವೆಂದು ಗಣಿಸಲಾಗಿದೆ.

\+ \+ \+ \+

ಲಂಡನ್ನಿನ ಪಾಕಿಸ್ತಾನ ಕಚೇರಿಯ ಸಾರ್ವಜನಿಕ ಸಂಬಂಧ ಅಧಿಕಾರಿಯಾದ ಸೈಯದುಲ್ಲಾರವರು ರಾಜೀನಾಮೆ ಕೊಟ್ಟಿದ್ದಾರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ. ಪಾಕಿಸ್ತಾನ ಸರಕಾರವು ಮಿಸ್ ಅಫಜಲ್ ಎಂಬವಳನ್ನು ಹೆಚ್ಚು ಸಂಬಳದ ಮೇಲೆ ಜೊತೆ ಅಧಿಕಾರಿಯನ್ನಾಗಿ ಕಳುಹಿದುದೇ ರಾಜೀನಾಮೆಗೆ ಕಾರಣವಾಗಿರುವುದು.

\+ \+ \+ \+

ಫ್ರೆಂಚ್ ಹಿಂದುಸ್ತಾನದ ಪ್ರಜೆಗಳು ಕಳೆದ ೨೬ ರಲ್ಲಿ ಪಾಂಡಿಚೆರಿಯಲ್ಲಿ ಸಭೆ ಸೇರಿ ಫ್ರೆಂಚ್ ಹಿಂದುಸ್ತಾನವನ್ನು ಹಿಂದೀ ಒಕ್ಕೂಟದಲ್ಲಿ ಲೀನಗೊಳಿಸಲು ನಿರ್ಧರಿಸಿ ಹಿಂದೀ ಧುರೀಣರು ಮತ್ತು ಒಕ್ಕೂಟ ಸರಕಾರಗಳ ಕಡೆಗೆ ಈ ಬಗ್ಗೆ ಶಿಷ್ಟಮಂಡಲವನ್ನೊಯ್ಯಲು ಗೊತ್ತುಮಾಡಿದರು.

\+ \+ \+ \+

ಒಂದು ವಿಮಾನವುರುಳಿ ಬಿದ್ದು ಪ್ಯಾರಿಸ್ಸಿನ ಹತ್ತಿರದ ಪ್ರದೇಶದಲ್ಲಿ ೧೬ ಜನರು ಸತ್ತರೆಂದು ವರದಿಯಿದೆ.

ಜೀವನ ಮತ್ತು ವಿಜ್ಞಾನ

ಕಾರ್ಬಾಲಿಕ್ ಆಮ್ಲ
PHENOL

ಲೇ—ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ
ಎಂ. ಎಸ್. ಸಿ. ಅವರಂಗಾಬಾದ ( )

ಯಾವುದಾದರೊಂದು ಸಂಯುಕ್ತದಲ್ಲಿ ಕ್ರಿಮಿಕೀಟಕಗಳ ಬೆಳವಣಿಗೆಯನ್ನು ನಿಲ್ಲಿಸತಕ್ಕ ಅಥವಾ ಸಂಪೂರ್ಣವಾಗಿ ನಾಶ ಮಾಡತಕ್ಕ ಶಕ್ತಿ ಇದ್ದರೆ ಅದಕ್ಕೆ "ಪೂತಿನಾಶಕ" (Antiseptic) ವೆಂದು ಹೆಸರು. ಈ ತರದ ಶಕ್ತಿ ಕಾರ್ಬಾಲಿಕ್ ಆಮ್ಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿವೆ.

ಫಿನೋಲ್ ಅಥವಾ ಕಾರ್ಬಾಲಿಕ್ ಆಮ್ಲದಲ್ಲಿ ಕ್ರಿಮಿಕೀಟಕಗಳನ್ನು ನಾಶಮಾಡತಕ್ಕ ಶಕ್ತಿ ಇದೆ ಎಂಬುದನ್ನು ಎಲ್ಲಕ್ಕೂ ಮೊದಲು ಗ್ಲ್ಯಾಸ್ಗೋದ ಶಸ್ತ್ರವೈದ್ಯನಾದ ಲಿಸ್ಟರ್ (Lister) ಎಂಬಾತನು ೧೮೬೭ರಲ್ಲಿ ಕಂಡುಹಿಡಿದನು. ಆ ಕಾಲದಲ್ಲಿ ಅನೇಕ ರೋಗಿಗಳು, ರಕ್ತದಲ್ಲಿ ವಿಷದ ಪ್ರಮಾಣ ಹೆಚ್ಚಾಗಿ ಮರಣಕ್ಕೆ ತುತ್ತಾಗುತ್ತಿದ್ದರು. ಎಂದಿನಿಂದ ಈತನು ಗಾಯ ಮತ್ತು ಶಸ್ತ್ರೋಪಚಾರದ ಉಪಕರಣಗಳಲ್ಲಿದ್ದ ಕ್ರಿಮಿಕೀಟಕಗಳನ್ನು ನಾಶಮಾಡುವದಕ್ಕೆ 'ಕಾರ್ಬಾಲಿಕ್ ಆಮ್ಲ'ವನ್ನು ಉಪಯೋಗಿಸುವದಕ್ಕೆ ಪ್ರಾರಂಭಿಸಿದನೋ ಅಂದಿನಿಂದ ಇಂತಹ ರೋಗಿಗಳು ಸಾಯುವುದು ಕಡಿಮೆ ಆಯಿತು.

ಕಾರ್ಬಾಲಿಕ್ ಆಮ್ಲವು ಮನುಷ್ಯರ ಹಾಗೂ ಎತ್ತುಗಳ ಮೂತ್ರದಲ್ಲಿ ಕಡಿಮೆಯ ಪ್ರಮಾಣದಲ್ಲಿರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಕೋಲ ಟಾರ (Coal Tar)ದ ಮಧ್ಯಸಂಧಾನದಿಂದ ತಯಾರಾಗುವ 'ಮಧ್ಯದ ಎಣ್ಣೆ'(Middle oil)ಯಿಂದ ತಯಾರಿಸುತ್ತಾರೆ. 'ಮಧ್ಯದ ಎಣ್ಣೆ'ಯಲ್ಲಿ ಫಿನೋಲದ ಜೊತೆಗೆ 'ನೆಫ್ತಲೀನ್' (Naphthalene) ಇರುತ್ತದೆ. ಎಣ್ಣೆಯನ್ನು ತಣ್ಣಗೆ ಮಾಡುವದರಿಂದ 'ನೆಫ್ತಲೀನ್'ದ ಸ್ಫಟಿಕಗಳು ಬೇರೆಯಾಗಿ ಬಿಡುತ್ತವೆ. ನಂತರ ಉಳಿದ ಎಣ್ಣೆಯಲ್ಲಿ ಬಿಸಿಯಾದ 'ಸೋಡಿಯಂ ಹಾಯ್‌ಡ್ರಾಕ್ಸಾಯಿಡ್' (Sodium Hydroxide) ಕೂಡಿಸಿ, ಕರಗದ ವಸ್ತುಗಳನ್ನು ಬೇರೆಮಾಡಿ, ಗಂಧಕಾಮ್ಲದ ಸಂಗಡ ಬೆರೆಯುವಂತೆ ಮಾಡಿದರೆ ಅಶುದ್ಧ ಫಿನೋಲ್ ತಯಾರಾಗುವದು. ಇದನ್ನು ಸೀಸಿನಿಂದ ಕೊಳೆದು ಭಟ್ಟಿ ಇಳಿಸುವದರಿಂದ ಶುದ್ಧ ಕಾರ್ಬಾಲಿಕ್ ಆಮ್ಲವು ತಯಾರಾಗುತ್ತದೆ.

ಕಾರ್ಬಾಲಿಕ್ ಆಮ್ಲವು ವಿಶೇಷವಾಗಿ 'ಪೂತಿನಾಶಕ'ದಂತೆಯೂ ಕಾರ್ಬಾಲಿಕ್ ಸಾಬೂನು, ಬಣ್ಣಗಳು, ಪಿಕ್ರಿಕ್ ಆಮ್ಲ (Picric Acid) ಸೆಲಿಸಿಲಿಕ್ ಆಮ್ಲ (Salicylic Acid) ಎಸ್ಪಿರಿನ್ (Aspirin) ಮತ್ತು ಬೇಕಲಾಯಿಟ್ ಸಾಮಾನುಗಳ (Bakelite materials)ನ್ನು ತಯಾರಿಸುವುದರಲ್ಲಿಯೂ ಉಪಯೋಗವಾಗುತ್ತದೆ.

ಪ್ರೊ. ಯುಜಿನ್ ವರ್ಗ ಮತ್ತು ಇತರ ೨೦ ಅರ್ಥಶಾಸ್ತ್ರಜ್ಞರನ್ನು ಕಮ್ಯೂನಿಸ್ಟ್ ಧೋರಣದ ವಿರುದ್ಧ ಹೋದರೆಂಬ ಅಪವಾದನೆಯ ಮೇರೆಗೆ ಸೋವಿಯೆಟ್ ಸರಕಾರವು ಕೆಲಸದಿಂದ ತೆಗೆದು ಹಾಕಿತೆಂದು ನ್ಯೂಯಾರ್ಕ್ ಟೈಮ್ಸ್ ಬರೆಯುತ್ತದೆ.

ಕರ್ನಾಟಕ

ಧಾರವಾಡ

ಡಾ. ಯೋಧ, ಡಾ. ಲಾ. ಗು. ವೈದ್ಯ, ಗಣೆ ಶಾಸ್ತ್ರಿ, ವೈದ್ಯ, ಗೋಡಬೋಲೆ ಹಕೀಮ ಅಬದುಲ ಲತೀಫ ಹಾಗೂ ವೈದ್ಯ ಗ್ರಾಮೋಪಾಧ್ಯೆ, ಮುಂತಾದ ಯೋಧ ಸಮಿತಿಯ ಸಭಾಸದರು ತಮ್ಮ ಮುಕ್ಕಾಮಿನಲ್ಲಿ ತಾ. ೨೫—೧—೪೮ ರವಿವಾರ ಸಾಯಂಕಾಲ ೬ ಘಂಟೆಗೆ ಆಯುರ್ವೇದ ರಸಶಾಲಾ ಹುಬ್ಬಳ್ಳಿ ಶಾಖೆಗೆ ಭೆಟ್ಟಿಕೊಟ್ಟು ಕೆಲವು ಔಷಧಿ ಕಲ್ಪಗಳನ್ನು ನೋಡಿ ಸಮಾಧಾನ ವ್ಯಕ್ತಪಡಿಸಿದರು.

ಗದಗ ತಾಲೂಕ ಹೊಲದೊಡೆಯರ ಕಾರ್ಯಕಾರೀ ಮಂಡಳದ ಸಭೆಯು ೨೨ನೇ ತಾ. ಗೆ ಸರದಾರ ಬಾಳಾಸಾಹೇಬರ ಮನೆಯಲ್ಲಿ ಕೂಡಿತ್ತು. ರೈತರು ಹೊಲದೊಡೆಯರಿಗೆ ಧಾನ್ಯ ಕೊಡದೆ ಅದರ ಬೆಲೆಯನ್ನೇ ಕೊಡಬೇಕೆಂದು ಮುಂಬಯಿ ಸರಕಾರವು ಹೊರಡಿಸಿರುವ ಆಜ್ಞೆಯನ್ನು ಈ ಸಭೆ ನಿಷೇಧಿಸಿತು. ಇದರ ಪ್ರತಿಯೊಂದನ್ನು ಸರಕಾರಕ್ಕೆ ಕಳಿಸಲಾಯಿತು.

ಧಾರವಾಡ ಜಿಲ್ಹಾ ಹಾಗು ನೆರೆಯ ಜಿಲ್ಹೆಗಳಲ್ಲಿ ಕೆಲವು ಕಡೆಗೆ ಕಾಲರಾ ಸುರುವಾಗಿದ್ದರಿಂದ ಹಾಗು ಆ ಸ್ಥಳಗಳ ಜನರು ಹೊಸರಿತ್ತಿ ಜಾತ್ರೆಗೆ ಬರುವವರಿಂದ ಕಾಲರಾ ಹಬ್ಬುವ ಭೀತಿ ಇರುವದರಿಂದ ಹೊಸರಿತ್ತಿ ಜಾತ್ರೆಯ ೬ ತಿಂಗಳ ಹಿಂದೆ ಕಾಲರಾ ಇನಾಕ್ಲೇಶನ್ ಮಾಡಿಸಿಕೊಂಡ ಪುರಾವೆ ಹಾಜರ ಮಾಡಿದ ಹೊರತು ಜಾತ್ರೆಯಲ್ಲಿ ಕಾಲಿಡಕೊಡದ್ದಲ್ಲವೆಂದು ಜಿಲ್ಹಾ ಮ್ಯಾಜಿಸ್ಟ್ರೇಟರು ಪ್ರಸಿದ್ಧಿಸಿದ್ದಾರೆ.

ಗದಗಿನ ಸುಪ್ರಸಿದ್ಧ ಡಾಕ್ಟರರಾದ ಕಾಲ್ಲೋಳಿ ಅವರ ಮಕ್ಕಳಾದ ಶ್ರೀ ಶಿವರಾಜ ಎಂ. ಎಸ್. ಸಿ. (ಒಕ್ಕಲತನ) ಅವರು ಹಾರ್ಟಿಕಲ್ಚರದ ಹೆಚ್ಚಿನ ಅಭ್ಯಾಸಕ್ಕಾಗಿ ಸರಕಾರದ ಶಿಷ್ಯವೇತನ ಪಡೆದು ತಾ ೨೬ ಕ್ಕೆ ಅಮೇರಿಕೆಗೆ ಪ್ರಯಾಣ ಬೆಳಸಿದರು. ಯೋಗವ್ಯಾಯಮಶಾಲೆ ಮೊದಲಾದ ಸಂಸ್ಥೆಗಳು ಅವರಿಗೆ ನಿರೋಪಕೊಟ್ಟವು.

ಕೆ. ಈ. ಬೋರ್ಡಿನ ಮಾಳಮರಡಿ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನವು ತಾ ೨೪ ಮತ್ತು ೨೫ ಕ್ಕೆ ನಡೆಯಿತು. ತರುಣ ಸಾಹಿತಿಗಳಾದ ಹಿರೇಮಲ್ಲೂರ ಈಶ್ವರನ್ ಎಂ. ಎ. ಪ್ರಾಧ್ಯಾಪಕ ಜ. ಗ. ವಾಣಿಜ್ಯ ಮಹಾವಿದ್ಯಾಲಯ ಹುಬ್ಬಳ್ಳಿ ಇವರು ಅಧ್ಯಕ್ಷರಾಗಿದ್ದರು ಪಂದ್ಯಾಟಗಳು, ವಿದ್ಯಾರ್ಥಿಗಳ ಸಾಹಿತ್ಯ ಗೋಷ್ಠಿ, ವಿವಿಧ ವಿನೋದಾವಳಿ, ವಿಚಾರ ಸಂಕಿರಣ ಮೊದಲಾದ ಚಟುವಟಿಕೆಗಳು ನಡೆದವು.

ನೇತಾಜಿ ಸುಭಾಷರ ಜಯಂತಿಯ ನಿಮಿತ್ತ ರಲರ್ಷಪುರದಲ್ಲಿ ತಾ. ೨೩ರ ಮುಂಜಾನೆ ಪ್ರಭಾತಫೇರಿ ಮೆರವಣಿಗೆ ಸಂಜೆ ೭ ಕ್ಕೆ ಶ್ರೀ ವಾರ್ನ್. ಕೆ. ಕೆಂದೂರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸುಭಾಷರ ಗುಣಗಾನ ನಡೆಯಿತು. ಊರಲ್ಲಿಯ ಬಡವರಿಗಾಗಿ ಸ್ವಲ್ಪ ಜೋಳವನ್ನು ಸಂಗ್ರಹಿಸಲಾಯಿತು.

ಹಾನಗಲ್ಲ ತಾಲೂಕ ಬಮ್ಮನಹಳ್ಳಿ ಗಂಡುಹುಡುಗರ ಶಾಲೆಯು ಕಳೆದ ೮...೧೦ ವರ್ಷಗಳಿಂದ ಯೋಗ್ಯ ರೀತಿಯಿಂದ ಶಿಕ್ಷಣ ಕೊಟ್ಟಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಎಷ್ಟೋ ಸಲ ಮುಖತಃ ಹೇಳಿದರೂ ಲೇಖಿಯಿಂದ ತಿಳಿಸಿದರೂ ಪ್ರಯೋಜನವಾಗಿಲ್ಲವೆಂದು ಬಮ್ಮನ ಹಳ್ಳಿಯ ಓರ್ವ ನಾಗರಿಕರು ತಿಳಿಸುತ್ತಾರೆ.

ಕೆ. ಈ. ಬೋರ್ಡ್ಸ ಆರ್ಟ್ಸ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ ೨೩ ಕ್ಕೆ ಜರಗಿತು. ಪ್ರೊ. ರಂ. ಶ್ರೀ ಮುಗಳಿಯವರು ಕನ್ನಡ ಸಂಸ್ಕೃತಿ ಎಂಬ ವಿಷಯದ ಬಗ್ಗೆ ಮಾತನಾಡಿದರು. ಶ್ರೀಕಂಠಯ್ಯನವರ ಸ್ಮಾರಕ್ಕಾಗಿ ಏರ್ಪಟ್ಟ ಲೇಖನ ಸ್ಪರ್ಧೆಯಲ್ಲಿ ಮೊದಲನೆಯ ಮತ್ತು ಎರಡನೆಯ ಬಹುಮಾನಗಳನ್ನು ಅನುಕ್ರಮವಾಗಿ ಶ್ರೀ ಕುರ್ತಕೋಟಿ ಮತ್ತು ಶ್ರೀ. ಪಾಟೀಲ ಕುಲಕರ್ಣಿ ಅವರಿಗೆ ಹಂಚಲಾಯಿತು.

ಶಿವಮೊಗ್ಗೆ ಜಿಲ್ಹೆಗೊಂದು ಒಕ್ಕಲತನ ಕಾಲೇಜ ಬೇಕು ಎಂದು ಶ್ರೀ ಕೆ. ಮಂಜಪ್ಪ ಎಂ ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಒಂದು ಗೊತ್ತುವಳಿಯು ಅಂಗೀಕೃತವಾಯಿತು.

ಬೆಳಗಾವಿ

ಚಿಕ್ಕೋಡಿ ತಾಲೂಕಿನ ಕನ್ನೂರಲ್ಲಿ ಪ್ರತಿವರ್ಷದಂತೆ ಶ್ರೀ ಸಂಗಮೇಶ್ವರನ ಜಾತ್ರೆಯು ಫೆಬ್ರುವರಿ ತಿಂಗಳಲ್ಲಿ ಕೂಡುವದಿತ್ತು. ಆದರೆ ಆ ಭಾಗದಲ್ಲಿ ಪ್ಲೇಗು ಮೊದಲಾದ ಬೇನೆಗಳಿರುವದರಿಂದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಜಾತ್ರೆಗೆ ಪ್ರತಿಬಂಧ ಹಾಕಿದ್ದಾರೆ.

ಬೆಳಗಾವ ಜಿಲ್ಹಾ ಕುರುಬರ ಸಂಘದ ಪರವಾಗಿ ಹುಕ್ಕೇರಿ ತಾಲೂಕ ಕುರುಬರ ಮೊದಲನೇ ಪರಿಷತ್ತು ಹುಕ್ಕೇರಿಯಲ್ಲಿ ತಾ. ೨—೨—೧೯೪೮ ಕ್ಕೆ ಜರುಗುವದು. ಹುಕ್ಕೇರಿಯ ಬಾಬು ಸಾಹೇಬ ಸತ್ಯಪ್ಪ ನಾಯ್ಕ ಇವರು ಹಿರಿತನ ವಹಿಸುವರು ಎಂದು ಮುಂತಾಗಿ ಪರಿಷತ್ತಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮುಂಬಯಿ ಸರಕಾರದ ಕಂದಾಯ ಶಾಖೆಯ ಉಪ ಮಂತ್ರಿಗಳಾದ ಶ್ರೀ ಕೆ. ಎಫ್. ಪಾಟೀಲರು ಬೆಳಗಾವಿಯ ಕೆ. ಎಲ್. ಇ. ಸೊಸಾಯಿಟಿಯ ಕನ್ನಡ ಟ್ರೇನಿಂಗ ಕಾಲೇಜಿನ ಸ್ನೇಹ ಸಮ್ಮೇಲನದ ಮುಖ್ಯ ಅತಿಥಿಗಳಾಗಿ ತಾ. ೨೫ಕ್ಕೆ ಆಗಮಿಸಿದ್ದರು. ಅಂದೇ ಸಾಯಂಕಾಲ ಭಾಷಣದ ಕಾಲಕ್ಕೆ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾದ ಶ್ರೀ ಕೇಶವರಾವ ಜೇಧೆಯವರು ಬೆಳಗಾಂವಿ ಕಾರವಾರಗಳ ಬಗ್ಗೆ ತೋರಿದ ಅನುಚಿತ ಧೋರಣವನ್ನು ಶ್ರೀ ಪಾಟೀಲರು ಖಂಡಿಸಿ ಜೇಧೆಯವರಂತಹ ಹೊಣೆಗಾರರು ಹೀಗೆ ದುಡುಕಿ ಮಾತನಾಡಬಾರದೆಂದು ಹೇಳಿದರು.

ಜನೆವರಿ ೨೬ ನೆಯ ತಾರೀಖಿಗೆ ಹುತಾತ್ಮರ ಪುಣ್ಯಸ್ಮರಣಕ್ಕಾಗಿ ಬೆಳಗಾವಿಯಲ್ಲಿ ಗಾಂಧಿ ಚೌಕಿನಲ್ಲಿ ಸಭೆ ಸೇರಿತ್ತು. ಸೌ. ಪದ್ಮಾವತಿದೇವಿ ಅಂಗಡಿ ಹಾಗೂ ಉಪಮಂತ್ರಿ ಕನಲ್ಲನಗೌಡ ಮೊದಲಾದವರು ಸಮಯೋಚಿತ ಭಾಷಣ ಮಾಡಿದರು.

ಬೆಳಗಾವಿಯಲ್ಲಿ ಪಂ. ಜವಾಹರಲಾಲ ನೆಹರು ಅವರ ಹೆಸರಿನಿಂದ ಬಡವರಿಗಾಗಿ ಒಂದು ಧರ್ಮಾರ್ಥ ಆಸ್ಪತ್ರೆಯನ್ನು ತೆರೆವ ಪ್ರಯತ್ನ ನಡೆದದೆ. ಬೆಳಗಾವಿಯ ಸುಪ್ರಸಿದ್ಧ ಸಮಾಜ ಸೇವಕರು ಮತ್ತು ನಿವೃತ್ತ ಡೆಪ್ಯುಟಿ ಕಲೆಕ್ಟರರಾದ ಶ್ರೀ ಪಿ. ಎಸ್. ಮುಂಡಕೂರರು ಈ ಬಗ್ಗೆ ತುಂಬ ಪರಿಶ್ರಮ ವಹಿಸುತ್ತಿದ್ದಾರೆ. ಇವರು ಮುಂಬಯಿಗೆ ಹೋಗಿ ಸಿವ್ಹಿಲ್ ಸರ್ಜನ್ ಜನರಲ್ ರೊಡನೆ ಮತ್ತು ಆರೋಗ್ಯ ಮಂತ್ರಿಗಳೊಡನೆ ವಿಚಾರ ವಿನಿಮಯ ಮಾಡಿ ಬಂದಿದ್ದಾರೆ.

ಬೆಂಗಳೂರು—ಮೈಸೂರು

ಮೈಸೂರು ನಗರ ಸಭೆಯ ವಿಶೇಷ ಸಭೆಯಲ್ಲಿ ತಾ ೨೬ ಕ್ಕೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅವಿರೋಧವಾಗಿ ಮೈಸೂರು ನಗರಸಭೆಯ ಮೊದಲನೆಯ ಸರಕಾರೇತರ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕಳೆದ ೧೭ ವರ್ಷ ಈ ಹಕ್ಕಿನ ಬಗ್ಗೆ ಪ್ರಯತ್ನ ನಡೆದಿತ್ತು.

ಯುವಜನರು ಸಾಹಿತ್ಯಕ್ಕೆ ಕೈಹಾಕುವದಕ್ಕಿಂತ ಸಮಾಜ ಸೇವೆಗೆ ನೆರವಾದರೆ ಪರಮ ಕಲ್ಯಾಣವಾಗುವದೆಂಬ ವಿಷಯದ ಬಗ್ಗೆ ತಾ ೨೩ ಕ್ಕೆ ಶಿವಮೊಗ್ಗೆಯ ಕರ್ನಾಟಕ ಸಂಘದ ಭವನದಲ್ಲಿ ಚರ್ಚೆ ನಡೆದು ಮತಗಣನೆಯಲ್ಲಿ ವಿಷಯವು ಅಂಗೀಕೃತವಾಯಿತು. ಶ್ರೀ ಪರಮೇಶ್ವರ ಭಟ್ಟರು ವಿಷಯವನ್ನು ಮಂಡಿಸಿದರು ಹಾಗೂ ಶ್ರೀ ಎಸ್. ವಿಷ್ಣು ಭಟ್ಟರು ಅದನ್ನು ವಿರೋಧಿಸಿ ಮಾತನಾಡಿದರು.

ನಾಡಿನ ಶಾಂತಿ ರಕ್ಷಣೆಗೂ ಸಮಾಜ ಸೇವೆಗೂ ದೇಶವ್ಯಾಪ್ತಂತ ಕಾಂಗ್ರೆಸ ಸೇವಾದಳಗಳು ಅವಶ್ಯವಾಗಿವೆಯೆಂದೂ ಫೆಬ್ರುವರಿ ೧೨ ನೆಯ ತಾರೀಖಿನಿಂದ ಬೆಂಗಳೂರು ಜಿಲ್ಹೆಯ ಕಾನ್ ಕಾನ್ ಹಳ್ಳಿಯ ಶ್ರೀ ದಯಾನಂದ ವಿದ್ಯಾರ್ಥಿನಿಲಯದಲ್ಲಿ ಸೇವಾದಲ ಶಿಕ್ಷಣ ಕೇಂದ್ರವನ್ನು ತೆರೆಯಲಾಗುವದೆಂದೂ ಶಿಕ್ಷಣ ಹೊಂದುವವರು ಫೆಬ್ರುವರಿ ೨ ನೆಯ ತಾ. ನೊಳಗಾಗಿ ಪ್ರವೇಶಧನವೆಂದು ೩೦ ರೂಪಾಯಿಗಳನ್ನು ಕಾಂಗ್ರೆಸ ಕೇಂದ್ರ ಕಚೇರಿ ಅರಳೇಪೇಟೆ ಬೆಂಗಳೂರು ಈ ವಿಳಾಸಕ್ಕೆ ಕಳಿಸಬೇಕೆಂದೂ ಮೈಸೂರ ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಪ್ರಕಟನೆ ಹೊರಡಿಸಿದ್ದಾರೆ.

ಕರ್ನಾಟಕ ಏಕೀಕರಣ ತತ್‌ಕ್ಷಣ ಆಗಬೇಕು

ಅಮೇರಿಕೆಯಲ್ಲಿಯ ಕನ್ನಡಿಗರಿಂದ ಡಾ. ಪ್ರಸಾದರಿಗೆ ತಂತಿ

ಅಮೇರಿಕೆಯಲ್ಲಿರುವ ಕನ್ನಡಿಗರ ಪರವಾಗಿ ಘಟನಾ ಸಮಿತಿಯ ಅಧ್ಯಕ್ಷರಾದ ರಾಜೇಂದ್ರ ಪ್ರಸಾದರಿಗೆ ಈ ರೀತಿಯ ಕೇಬಲ್ ಕಳುಹಿಸಲಾಗಿದೆ.

"ಕರ್ನಾಟಕ ಏಕೀಕರಣ ತತ್ಕ್ಷಣ ಆಗಬೇಕು. ಆ ಬಗ್ಗೆ ಮುಂದೂಡುವ ಯಾವ ಕಾರ್ಯವನ್ನೂ ಕರ್ನಾಟಕ ಸಹಿಸುವದಿಲ್ಲ. ಕರ್ನಾಟಕವು ಈಗ ಎಚ್ಚತ್ತ ವಿಷಯ ನಿಮಗೆ ಗೊತ್ತಿರಬೇಕು. ಅಮೇರಿಕದಲ್ಲಿರುವ ಕನ್ನಡಿಗರೆಲ್ಲರೂ ಕನ್ನಡ ಪ್ರಾಂತ ರಚನೆಯ ಬಗ್ಗೆ ಏಮ್ಮತದಿಂದ ಒತ್ತಾಯಪಡಿಸುತ್ತಾರೆ ಈ ಮಾತಿನ ಅಲಕ್ಷ್ಯವಾಗದಿರಲಿ."

೧೯೪೭ ಡಿಸೆಂಬರ ೨೫ ಕ್ಕೆ ಕನ್ನಡಿಗರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಮೇರಿಕೆಯ ಅಧ್ಯಕ್ಷರಾದ ಟ್ರುಮನ್ನರನ್ನು ಭೆಟ್ಟಿಯಾದರು

ವಿಜಾಪುರ

ಕಲೋಪಾಸಕ ಮಂಡಲಿಯವರು ಭಾಗ್ಯಶ್ರೀ ಮತ್ತು ಪರಿವರ್ತನ ಎಂಬ ನಾಟಕಗಳನ್ನು ಬಾಗಲಕೋಟೆಯ ಶಿವಾನಂದ ಥೇಟರಿನಲ್ಲಿ ಅಭಿನಯಿಸಿ ಜನರ ಮೆಚ್ಚಿಗೆಗೆ ಪಾತ್ರರಾದರು. ಕವಿವರ್ಯ ಬೇಂದ್ರೆ ಹಾಗೂ ನಾಟಕಕಾರರಾದ ಶ್ರೀ ಲಕ್ಷ್ಮಣರಾವ ಬೇಂದ್ರೆ, ಮೆಳ್ಳೆಗಟ್ಟಿ ದಂಪತಿಗಳು, ಶ್ರೀ ತೊರಗಲ್ಲರು ನಾಟಕಗಳಲ್ಲಿ ಪಾತ್ರ ವಹಿಸಿದ್ದರು. ಕಲೋಪಾಸಕ ಮಂಡಳದ ಯೋಜಕರಾದ ಶ್ರೀ ಜಿ ಬಿ. ಜೋಶಿಯವರನ್ನು ವಾಸುದೇವ ವಿನೋದಿನಿ ನಾಟ್ಯ ಸಂಘದ ಶ್ರೀ ಜೋರಾಪೂರರು ತುಂಬ ಹೊಗಳಿದರು.

ಕರ್ನಾಟಕ ಕಾಂಗ್ರೆಸ ಪ್ರಾಂತಾಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಬದಾಮಿ ತಾಲೂಕಿನ ಸಂಚಾರಕ್ಕೆ ಬಂದಾಗ ಅವರಿಗೆ ಬದಾಮಿಯಿಂದ ೫೦೧ ರೂ. ಚೊಳಚಗುಡ್ಡದಿಂದ ೧೧೧ ರೂ. ಗುಳೇದಗುಡ್ಡದಿಂದ ೨೫೧ ರೂ. ಕಟಗೇರಿಯಿಂದ ೧೦೧ ರೂ. ಹೀಗೆ ೯೬೪ ರೂ. ಗಳನ್ನು ಕಾಂಗ್ರೆಸ ನಿಧಿಯೆಂದು ಅರ್ಪಿಸಲಾಯಿತು.

ವಿಜಾಪುರ ಜಿಲ್ಹೆಯ ಡಿ. ಎಸ್. ಪಿ. ಯವರು ಹೋರಟಿಗೆಗೆ ಬಂದು ಇಲ್ಲಿಯ ಗೃಹ ರಕ್ಷಕ ದಲದ ಕವಾಯತನ್ನು ನೋಡಿ ಸಮಾಧಾನ ವ್ಯಕ್ತಪಡಿಸಿ ಗೃಹ ರಕ್ಷಕ ದಲದ ಕರ್ತವ್ಯದ ಬಗ್ಗೆ ಮಾತನಾಡಿದರು.

ಪುಸ್ತಕ ವಿಮರ್ಶೆ

(೪ ನೆಯ ಪುಟದಿಂದ)

ಪುರಾಣಗೀತವೆನಿಸಿದ ಕಾವ್ಯಕ ಗೀತದಲ್ಲಿ ಕವಿಯ ಪಾಂಡಿತ್ಯ, ಗಂಭೀರ ಪದಬಂಧ, ಸರಳವಾದ ಪಂಚಬಾಣದ ಶೈಲಿ ಇವನ್ನು ಕಾಣಬಹುದು. 'ಕಾವ್ಯ' ಶಬ್ದವೆಂಬುದು ಧ್ವನಿಯ 'ಕವಿತೆಯ' ... ಅದನ್ನು ನೆನಪಿಗೆ ತಂದುಕೊಡುವಂತಿದೆ. ಅದರ ತತ್ವಪ್ರಬೋಧ ಹಾಗಿದೆ. ಈ ಕವಿಯು ... ಗಿಂತ ಪ್ರೀತಿ ಕಟ್ಟಿಂಬ ತತ್ವದ ಉಪಾಸಕರೆಂಬುದನ್ನು ಅವನ ಆತ್ಮಾರ್ಥಿಸಿಕವೂ ಅತಿಶ್ರೇಷ್ಠ ನಾಗರಿಕವೂ ಎನಿಸಿದ ತತ್ವಗಳ ಪ್ರತಿಪಾದನ ಮಂಡನದಲ್ಲಿ ಕಾಣಬಹುದು. ಕವಿತಾ ಶೈಲಿಯಲ್ಲಿ ಒಂದು ವಿಧದ ಪ್ರಸಾದ, ಮಾಧುರ್ಯ, ನಾದಲೀಲೆಗಳಿರುವುದರಿಂದ ಈತನ ಕೃತಿಗಳು ಬಹುಬೇಗ ಅಪಾಲವೃದ್ಧರನ್ನು ತಣಿಸಬಲ್ಲವು ಇಂತಹ ಸುಕವಿಗಳಿಗೆ ಸ್ವಾಗತವೀಯದ ರಸಿಕ ಮಂದಿಯುಂಟೇ?

ಹುತಾತ್ಮರು

ಬರೆದವರು :— ಶ್ರೀ ಕುಲಕರ್ಣಿ ಬಿಂದುಮಾಧವ, ಪ್ರಕಾಶಕರು— ಶ್ರೀ ಎಸ್. ಬಿ. ಪಾವಟೆ, ಡಂಗರಿಪ ಬೈಲು ಹುಬ್ಬಳ್ಳಿ, ಪುಟ ೪೪, ಬೆಲೆ ೦—೮—೦

ಇದು ಒಂದು ಏಕಾಂಕ ನಾಟಕ, ದೇಶಭಕ್ತಿ ಪ್ರದರ್ಶನವಿದೆ. ಶ್ರೀ ಕುಲಕರ್ಣಿ ಬಿಂದುಮಾಧವರ ಇತರ ಲೇಖನಗಳನ್ನೋದಿದವರಿಗೆ ಇದು ಅಷ್ಟೇನೂ ನಿರಾಶೆಯನ್ನುಂಟುಮಾಡಲಾರದು. ಪುಸ್ತಕವನ್ನು ಆದರದಿಂದ ಸ್ವಾಗತಿಸುತ್ತೇವೆ.

ದಕ್ಷಿಣ ಕನ್ನಡ

ಮಾವಿನ ಗುಂಡಿಯಲ್ಲಿ ಕಟ್ಟಿಸಬೇಕೆಂದಿದ್ದ ಧ್ವಜಸ್ತಂಭ, ನೀರಿನ ಹಾಗೂ ಜಲವಿದ್ಯುತ್ ಶಕ್ತಿಯ ಪೂರೈಕೆಯ ಯೋಜನೆಗಳ ತೀವ್ರಸಿದ್ಧಿಗಾಗಿ ಇಲ್ಲಿಯ ಸ್ವಾತಂತ್ರ್ಯ ಚೌಕಿನಲ್ಲಿ ಇದೇ ೨೦ ನೇ ತಾ. ನ ಸಾರ್ವಜನಿಕ ಸಭೆಯಲ್ಲಿ ಶ್ರೀ. ರಾಜಪುರೋಹಿತರು ಮಾತಾಡುತ್ತ ಈ ಎಲ್ಲ ಯೋಜನೆಗಳಿಗೆ ಸರಕಾರವು ಸಹಾಯ ನೀಡಬೇಕೆಂದು ಹೇಳಿದರು.

ಬಳ್ಳಾರಿ

ಹೊಸಪೇಟೆಯಲ್ಲಿ ಸುಭಾಷ ಜಯಂತಿಯ ನಿಮಿತ್ತ ಮುನಸಿಪಾಲಟಿ ವಾಚನಾಲಯದ ಬಯಲಲ್ಲಿ ತಾ ೨೩ ರ ಸಂಜೆ ೭ ಗಂಟೆಗೆ ಸಾರ್ವಜನಿಕ ಸಭೆ ಸೇರಿತ್ತು. ಶ್ರೀಗಳಾದ ಕಟ್ಟಿ ಕೃಷ್ಣರಾಯರು, ಎಂ. ತಿರುಮಲಾಚಾರ್ಯರು, ಎಸ್. ಗೋವಿಂದಾಚಾರ್ಯರು ಮೊದಲಾದವರು ಸುಭಾಷಚಂದ್ರರ ಗುಣಗಾನಮಾಡಿದರು.

ಹಿಂದುಸ್ಥಾನ

ಮುಂಬಯಿ

ತಾ. ೨೪ ಕ್ಕೆ ನೇತಾಜಿ ದಿನವನ್ನು ಆಚರಿಸಿ ಅರಳಿ ಬಜಾರದ ವ್ಯಾಪಾರವನ್ನು ಬಂದಿಡಬೇಕೆಂದು ಒತ್ತಾಯಪಡಿಸುವದಕ್ಕೆ ಕೆಲವರು ಬಂದರು. ಕೊನೆಗೆ ಮಧ್ಯಾಹ್ನ ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನ್ ಕಟ್ಟಡದ ಮೇಲೆ ಕಲ್ಲು ಮತ್ತು ತೆಂಗಿನ ಕಾಯಿಗಳನ್ನು ತೂರಲಾಯಿತು. ಕೆಲವರು ಟೆಲಿಫೋನ ತಂತಿಗಳನ್ನು ಕತ್ತರಿಸಿದರು. ಪೋಲೀಸ ಪಡೆ ಬಂದು ವ್ಯವಸ್ಥೆ ಕಾಯ್ದಿತು. ಮತ್ತೆ ವ್ಯಾಪಾರ ಪ್ರಾರಂಭವಾಯಿತು. ಕಲ್ಲಿನ ತೂರಾಟದಿಂದ ಕಿಡಕಿಗಳು ಒಡೆದವು ಹಾಗೂ ಕೆಲವರಿಗೆ ಸಣ್ಣಪುಟ್ಟ ಗಾಯಗಳಾದವು.

ತಾ. ೨೪ ಕ್ಕೆ ಮುಂಬಯಿಯ ಸಿದ್ಧಾರ್ಥ ಕಾಲೇಜಿನ ಕರ್ನಾಟಕ ಸಂಘದ ಪರವಾಗಿ ಕರ್ನಾಟಕದ ಕವಿವರ್ಯ ಶ್ರೀ ದ. ರಾ. ಬೇಂದ್ರೆಯವರು «[illegible]» ಎಂಬ ಬಗ್ಗೆ ಮಾತನಾಡಿದರು. ಶ್ರೀ ಎಸ್. ಕೆ. ಕುಲಕರ್ಣಿಯವರು ಅಧ್ಯಕ್ಷರಾಗಿದ್ದರು.

ತಾ. ೨೪ ರಂದು ಓರ್ವ ಬ್ರಿಟಿಶ ಸೈನ್ಯಾಧಿಕಾರಿ ಮತ್ತು ಮೂವರು ಸಾವುಕಾರರನ್ನು ಅಕ್ಕಿ ಸೆರೆ ಮುಂತಾದ ೧ ಲಕ್ಷ ೫೦ ಸಾವಿರ ರೂಪಾಯಿ ಬೆಲೆ ಬಾಳುವ ಸೈನ್ಯ ಖಾತೆಯ ಸಾಮಗ್ರಿಗಳನ್ನು ಕಳ್ಳ ಪೇಟೆಗೆ ಸಾಗಿಸಿದ ಆರೋಪದ ಮೇರೆಗೆ ಬಂಧಿಸಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರೆದುರು ನಿಲ್ಲಿಸಲಾಯಿತು. ಇವನ್ನು ಗೊತ್ತು ಹಚ್ಚಿದವರು ಲಂಚ ನಿರ್ಮೂಲನ ಖಾತೆಯ ಸಿ. ಐ. ಡಿ. ಗಳು.

ಬ್ರಿಟಿಶ ಈಗ ಹೊಸ ಮಾದರಿಯ ಯುದ್ಧ ಹಡಗಗಳನ್ನು ಕಟ್ಟಿಕೊಂಡಿರುವದರಿಂದ ಹಳೆಯ ಮಾದರಿಯ 'ನೆಲ್ಸನ್' ಎಂಬ ಹಡಗವನ್ನು ನಿರುಪಯೋಗಿ ಕಬ್ಬಿಣದ ಬೆಲೆಗೆ ಮಾರಬೇಕೆಂದು ನಿರ್ಧರಿಸಿದೆ. ಹಿಂದುಸ್ಥಾನವು ಈ ಹಡಗವನ್ನು ಕೊಂಡುಕೊಂಡರೆ ಅದರ ರಚನೆ, ವ್ಯವಸ್ಥೆ ಮುಂತಾದವುಗಳನ್ನು ಅರಿತುಕೊಳ್ಳಲು ಅನುಕೂಲವಾಗುವದೆಂದು ಶ್ರೀ ಕೆ. ಬಿ. ವೈದ್ಯರು ಪಂ. ಜವಾಹರಲಾಲರಿಗೂ ಸರದಾರ ಬಲದೇವಸಿಂಗರಿಗೂ ಹಿಂದೀ ಸೈನ್ಯ ಖಾತೆಯ ಮುಖ್ಯಸ್ಥರಿಗೂ ಪತ್ರ ಬರೆದಿದ್ದಾರೆ.

ವಿಲ್ಸನ್ ಕಾಲೇಜಿನ ಶ್ರೀ ಮಾರ್ಟಿನ್ ಎಂ. ಕೋನೇರಿಯವರು, ಮುಂಬಯಿಯ ಇಸ್ಮಾಯಿಲ ಯುಸೂಫ ಕಾಲೇಜಿನಲ್ಲಿ ಅರ್ಥಸಚಿವರಾದ ಮಾನ್ಯ ಮೇಥಾರವರ ಅಧ್ಯಕ್ಷತೆಯಲ್ಲಿ ನಡೆದ ಅಂತರ್ ಕಾಲೇಜ ವಕ್ತೃತ್ವ ಸ್ಪರ್ಧೆಯಲ್ಲಿ ಮೊದಲನೆಯ ನಂಬರ ಬಂದು ಬ್ರಾಜೋರ್ನ ಟ್ರಾಫಿ ಸಂಪಾದಿಸಿದ್ದಲ್ಲದೆ ಮುಂಬಯಿ ಪ್ರೌಢ ಶಿಕ್ಷಣ ಸಮಿತಿಯವರು ಏರ್ಪಡಿಸಿದ ಚರ್ಚಾ ಸ್ಪರ್ಧೆಯಲ್ಲಿಯೂ ಪ್ರಥಮ ಸ್ಥಾನ ಪಡೆದರು. ಶ್ರೀ ಕೋನೇರಿಯವರು ಗದಗಿನವರು.

೧೯೪೬ ನೇ ಇಸ್ವಿಯಲ್ಲಿ ಗ್ರಾಮ ಸುಧಾರಣೆ ಕಾರ್ಯವನ್ನು ಉತ್ತಮ ರೀತಿಯಿಂದ ಸಾಗಿಸಿಕೊಂಡು ಹೋದುದಕ್ಕಾಗಿ ಮುಂಬಯಿ ಸರಕಾರದವರು ಕರ್ನಾಟಕದ ಹಳ್ಳಿಗಳಾದ ಕರಂಬಾಳ, ಸೂಳಿಭಾವಿ, ಕೊಣ್ಣೂರ, ಬೆಳಂಬಾರಗಳಿಗೂ ರತ್ನಾಗಿರಿ ಜಿಲ್ಲೆಯ ಘರುಸೆ ಎಂಬ ಹಳ್ಳಿಗೂ ಪ್ರತಿಯೊಂದಕ್ಕೆ ೧೦೦ ರೂ. ಇನಾಮು ಕೊಟ್ಟಿದ್ದಾರೆ.

ಸಂಯುಕ್ತಪ್ರಾಂತ

ಸಂಯುಕ್ತ ಪ್ರಾಂತದ ಮುಖ್ಯ ಪ್ರಧಾನರಾದ ಶ್ರೀ ಗೋವಿಂದ ವಲ್ಲಭಪಂತರು ಪ್ರಾಂತೀಯ ರಕ್ಷಕ ದಳದ ೮೦೦ ಜನರನ್ನುದ್ದೇಶಿಸಿ ಲಖನೌದಲ್ಲಿ ಭಾಷಣ ಮಾಡುತ್ತ ಜನರಲ್ಲಿ ಆತ್ಮವಿಶ್ವಾಸ ಹಾಗು ಶಿಸ್ತು ಹುಟ್ಟಿಸುವದು ನಿಮ್ಮನ್ನು ಕೂಡಿದೆ. ಹಿಂದುಸ್ಥಾನದ ಮೇಲಿನ ಆಕ್ರಮಣವನ್ನು ಸಂಯುಕ್ತಪ್ರಾಂತ ಒಂದೇ ಎದುರಿಸಬಲ್ಲದೆಂಬ ಭರವಸೆಯಿದೆ ಎಂದು ಮೊದಲಾಗಿ ನುಡಿದರು.

ಮುಸ್ಲಿಂ ಲೀಗಿನ ಮಹಮ್ಮದ ಇಸ್ಮಾಯಿಲರ ರಾಜೀನಾಮೆಯಿಂದ ತೆರವಾದ ಯುಕ್ತಪ್ರಾಂತ ಶಾಸನಸಭೆಗೆ ಬಸ್ತಿ ಮುಸ್ಲಿಂ ಮತದಾರ ಸಂಘದಿಂದ ಕಾಂಗ್ರೆಸಿನ ಅಬ್ದುಲ್ ಹಕೀಮರು ಅವಿರೋಧವಾಗಿ ಆರಿಸಿ ಬಂದರು.

ಕಾಶಿ ಜಂಗಮವಾಡಿ ಮಠದ ಶ್ರೀ ವಿಶ್ವಾರಾಧ್ಯ ಜ್ಞಾನಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳು ತಾ. ೨೫ ಸಂಜೆ ೬—೧೨ ಕ್ಕೆ ಶಿವೈಕ್ಯರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಲಖನೌ ನಗರ ಸಭೆಯವರು ತಾ. ೨೪ ರಂದು ಲಖನೌ ನಗರ ಸಭೆಯ ಸೀಮೆಯಲ್ಲಿ ಗೋಹತ್ಯ ನಡೆಯಕೂಡದೆಂಬ ಗೊತ್ತುವಳಿ ಸ್ವೀಕರಿಸಿತು. ಆ ಪ್ರಕಾರ ಎಲ್ಲ ಗೋಮಾಂಸ ಮಾರುವ ಅಂಗಡಿಗಳ ಲಾಯಸೆನ್ಸ ರದ್ದುಗೊಳಿಸಬೇಕೆಂದೂ ವಧಾಲಯದಲ್ಲಿ ಗೋಹತ್ಯೆಯನ್ನು ಕೂಡಲೆ

ಮದ್ರಾಸ

ಮದ್ರಾಸದಲ್ಲಿ ತಾ. ೨೮ ಕ್ಕೆ ಕೂಡಿದ ಮದ್ರಾಸ ಪ್ರಾಂತದ ರಾಷ್ಟ್ರೀಯ ಕ್ರಿಶ್ಚಿಯನ್ ಪರಿಷತ್ತಿನ ಮೊದಲನೇ ಅಧಿವೇಶನದಲ್ಲಿ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ ಘಟನಾ ಸಮಿತಿ ಮತ್ತು ಮದ್ರಾಸದ ಮೇಲ್ಮನೆಯ ಸಭಾಸದರಾದ ಶ್ರೀ ಆರ್. ಜಿ. ಎಲ್. ಪಿರೋಜಿ ವಿಕ್ಟೋರಿಯಾ ಅವರು, ಸುತ್ತಲಿನ ಜನರ ಸೌಹಾರ್ದ ಸಂಪಾದಿಸುವಲ್ಲಿಯೇ ಹಿಂದಿ ಕ್ರಿಶ್ಚಿಯನರ ಸುರಕ್ಷಿತತೆ ಇರುವದೆಂದೂ ದೇಶಕ್ಕೆ ಸಹಾಯಕವಾಗುವ ರೀತಿಯಲ್ಲಿ ತಾವು ಧೋರಣ ಸರಿಪಡಿಸಿಕೊಳ್ಳ ತಕ್ಕದ್ದೆಂದೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಹಿಂದಿ ಕ್ರಿಶ್ಚಿಯನ್ನರ ಪಾತ್ರ ಮಹತ್ವದ್ದಿದೆಯೆಂದೂ ನುಡಿದರು.

ಮದ್ರಾಸದಲ್ಲಿ ತಮಿಳನಾಡ ಪ್ರಾಂತಿಕ ಕಾಂಗ್ರೆಸ ಕಾರ್ಯಕರ್ತರ ಸಂಘದ ಪರವಾಗಿ ಕರೆದ ಸಭೆಯಲ್ಲಿ ೧೫ ಜನರ ಫ್ರೆಂಚ ಹಿಂದುಸ್ಥಾನ ವಿಮೋಚನಾ ಸಹಾಯ ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯವರು ಪಾಂಡಿಚೇರಿ, ಕಾರಿಕಲ್, ಚಂದ್ರನಗರ ಮೊದಲಾದ ಫ್ರೆಂಚ ಪ್ರದೇಶಗಳ ಪ್ರಜೆಗಳ ಸ್ವಾತಂತ್ರ್ಯದ ಹೋರಾಟಕ್ಕೆ ನೆರವಾಗುವರು.

ಹೈದರಾಬಾದ

ಬೀಬೀನಗರ ಮುಂತಾದಲ್ಲಿ ನಡೆದ ಅತ್ಯಾಚಾರಗಳಿಂದಾಗಿ ಜನತೆಯು ಪಡುತ್ತಿರುವ ಕಷ್ಟಗಳನ್ನು ನಿಜಾಮರ ಗಮನಕ್ಕೆ ತಂದು ಆ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಹೈದರಾಬಾದ ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ರಮಾನಂದ ತೀರ್ಥರು ನಿಜಾಮರಿಗೆ ಒಂದು ಪತ್ರ ಬರೆದಿದ್ದು ಅದರಲ್ಲಿ ಬೇಗ ಹೊಣೆಗಾರ ಸರಕಾರ ಸ್ಥಾಪಿತವಾಗಬೇಕೆಂದೂ ಪ್ರಜಾಪ್ರಭುತ್ವ ಭಾರತಕ್ಕೊಪ್ಪುವ ರೀತಿಯಲ್ಲಿ ನಿಜಾಮರು ನಡೆದುಕೊಳ್ಳಬೇಕೆಂದೂ ಉಲ್ಲೇಖಿಸಲಾಗಿದೆ.

ಸ್ವಾಮಿ ರಮಾನಂದತೀರ್ಥರು ತಾ ೨೬ ಬೈಗ ಸಂಸ್ಥಾನ ಪೋಲೀಸರಿಂದ ಬಂಧಿತರಾದರು. ಅವರು ಅಂದು ಸಂಜೆಗೆ ಸರಕಾರಿ ನಿರ್ಬಂಧ ಮುರಿದು ಸಾರ್ವಜನಿಕ ಭಾಷಣಮಾಡಿ ಸಂಸ್ಥಾನ ಕಾಂಗ್ರೆಸಿನ ಭಾವೀಕಾರ್ಯಕ್ರಮ ಘೋಷಿಸತಕ್ಕವರಿದ್ದರು.

ಸಂಸ್ಥಾನ ಕಾಂಗ್ರೆಸ ಧುರೀಣರಾದ ಶ್ರೀ ಕಾಶಿನಾಥರಾವ ವೈದ್ಯರು ತಾ ೨೬ ರ ಸಂಜೆಗೆ ಸಾರ್ವಜನಿಕ ಭಾಷಣಮಾಡಲು ಮುಂದೆಬಂದದ್ದರಿಂದ ಪೋಲೀಸರು ಅವರನ್ನು ಬಂಧಿಸಿದರು.

ಮಿಲಿಟರಿ ಜನರು ಲೆವಿ ಕಾಳನ್ನು ಒತ್ತಾಯದಿಂದ ವಸೂಲಮಾಡುತ್ತಿದ್ದಾಗ ಗುಲಬುರ್ಗಾ ಜಿಲ್ಹೆಯ ಶಹಾಪುರ ತಾಲೂಕಿನ ಡೋರನ ಹಳ್ಳಿಯಲ್ಲಿ ಜನರಿಗೂ ಪೋಲೀಸರಿಗೂ ತಿಕ್ಕಾಟನಡೆದು ಚಿಕ್ಕಮಕ್ಕಳನ್ನೊಡಗೊಂಡು ೫೦ ಜನಗಳ ಕೊಲೆಯಾಗಿರುವದು. ಇದೇ ಸಮಯ ಸಾಧಿಸಿ ಅಂಜುಮಾನ ಮುಸಲ್ಮಾನರು ಸುತ್ತಲಿನ ಹಳ್ಳಿಗಳನ್ನು ಲೂಟಿ ಮಾಡಿರುವರು. ಸ್ತ್ರೀಯರ ಮಾನಭಂಗ ಅತ್ಯಾಚಾರ ಮೊದಲಾದವು ಅಬಾಧಿತವಾಗಿ ನಡೆದಿದ್ದು ಲೂಟಿಕೊಳ್ಳಿ ಮೊದಲಾದವಕ್ಕೆ ಮಿತಿಯಿಲ್ಲ. ಜನರು ಊರುಬಿಡುತ್ತಿರುವರು ಎಂದು ಮೊದಲಾಗಿ ಡೋರನಹಳ್ಳಿಯ ರೈತರು ತಿಳಿಸುತ್ತಾರೆ.

ನಿಲ್ಲಿಸಬೇಕೆಂದೂ ನಗರದ ಆರೋಗ್ಯಾಧಿಕಾರಿಗೆ ಆಜ್ಞೆ ಮಾಡಲಾಗಿದೆ.

ಕಾನಪೂರದ ಕೂಲಿಕಾರರಲ್ಲಿ ಅಶಾಂತಿ ಇದ್ದ ಮೂಲಕ ಸುಭಾಸ ಜನ್ಮ ದಿನದ ಮೆರವಣಿಗೆಗೆ ಪ್ರತಿಬಂಧಕಾಜ್ಞೆ ಇತ್ತು. ಇದನ್ನು ಕೆಲವು ಕಮ್ಯುನಿಸ್ಟರು ಮುರಿದು ಮೆರವಣಿಗೆ ತೆಗೆದು ಪೋಲೀಸರ ಮೇಲೆ ಇಟ್ಟಿಂಗಿ ತೂರಿದರು. ಪೋಲೀಸರು ೪—೫ ಕಡೆ ಲಾಠಿ ಪ್ರಹಾರವನ್ನೂ ಗೋಳೀಬಾರನ್ನೂ ಮಾಡಬೇಕಾಯಿತು. ೧೪ ಜನರು ಗಾಯಗೊಂಡಿರುವರಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರು ಪ್ರಕಟಿಸಿದ್ದಾರೆ. ಈ ಬಗ್ಗೆ ೧೪೬ ಜನರನ್ನು ಬಂಧಿಸಲಾಗಿದೆ.

ಹೊಸದಿಲ್ಲಿ

ಕರ್ನಾಟಕ ಕಾಂಗ್ರೆಸ ಧುರೀಣರು, ಎಂ. ಎಲ್. ಎ. ಹಾಗು ಎಂ. ಎಲ್. ಸಿ. ಗಳನ್ನೊಳಗೊಂಡ ಶಿಷ್ಟಮಂಡಳವು ತಾ. ೨೮ಕ್ಕೆ ಸಂಜೆ ಬಿರ್ಲಾ ಭವನದಲ್ಲಿ ಮಹಾತ್ಮಾ ಗಾಂಧಿಯವರನ್ನು ಕಂಡು ಸ್ವತಂತ್ರ ಕರ್ನಾಟಕ ಪ್ರಾಂತ ರಚನೆಯು ಕೂಡಲೇ ಆಗಬೇಕೆಂಬ ಬಗ್ಗೆ ಮಾತುಕತೆ ನಡೆಸಿದರು.

ಕಾಂಗ್ರೆಸ ಕಾರ್ಯಸಮಿತಿಯವರು ತಮ್ಮ ಸಭೆಯಲ್ಲಿ ಒಂದು ಗೊತ್ತುವಳಿ ಮಾಡಿ, ಸಂಪು ಕೆಲಸ ನಿಲ್ಲಿಸುವಿಕೆ, ಮತ್ತು ಕೂಲಿಕಾರರಿಗೆ ಕಾರಖಾನೆಯಲ್ಲಿ ಪ್ರವೇಶ ಕೊಡದಿರುವದು ಮೊದಲಾದವುಗಳಿಂದ ರಾಷ್ಟ್ರಕ್ಕೆ ತೀವ್ರ ತರದ ಆಘಾತವಾಗುವದೆಂದೂ ಆರ್ಥಿಕ ಪುನರ್ನಿರ್ಮಾಣ ಮತ್ತು ಸ್ವಾವಲಂಬನ ಯೋಜನೆಗಳಿಗೆ ಇವುಗಳಿಂದ ಗಂಡಾಂತರ ಒದಗುವದೆಂದೂ ಸಾರಿದ್ದಾರೆ.

ಮಹಾತ್ಮಾ ಗಾಂಧಿಯವರು ತಾ. ೨೫ ರ ಪ್ರಾರ್ಥನೋತ್ತರ ಭಾಷಣ ಮಾಡುತ್ತ, ಭಾಷಾನ್ವಯ ಪ್ರಾಂತೀಕರಣವನ್ನು ಕಾಂಗ್ರೆಸ್ಸು ಎಂದೋ ಒಪ್ಪಿದೆ. ಪರಸ್ಪರ ಒಪ್ಪಿಗೆಯಿಂದ ಗಡಿ ನಿರ್ಣಯ ಮಾಡಿಕೊಂಡು ಕೇಂದ್ರದಿಂದ ಅಪ್ಪಣೆ ಪಡೆಯಬೇಕೆಂದೂ ಸೀಮಾ ಸಮಿತಿಯಂತಹ ಮೂರನೇ ಪಕ್ಷಕ್ಕೆ ಮೊರೆ ಹೋಗಕೂಡದೆಂದೂ ಹೇಳಿದರು.

ಮಹಾತ್ಮಾ ಗಾಂಧಿಯವರು ತಾ. ೨೫ರ ತಮ್ಮ ಭಾಷಣದಲ್ಲಿ, ತಮಗೆ ಪಾಕಿಸ್ತಾನಕ್ಕೆ ಹೋಗುವ ಮನಸ್ಸಿದ್ದರೂ ಅದು ಕಾಯದೆ ದೃಷ್ಟಿಯಿಂದ ಪರಕೀಯ ರಾಷ್ಟ್ರವಾದ ಮೂಲಕ ಆ ಸರಕಾರದ ಸಲಹೆ ಮತ್ತು ಅನುಮತಿ ಇಲ್ಲದೆ ಹೋಗುವದು ಯೋಗ್ಯವಲ್ಲವೆಂದು ತಾವು ನಿರ್ಧರಿಸಿರುವರೆಂದೂ ದಿಲ್ಲಿಯಲ್ಲಿ ಶಾಂತಿಭಂಗವಾಗದೆಂದು ನಾಗರಿಕರು ಆಶ್ವಾಸನ ಕೊಟ್ಟರೆ ತಾವು ವರ್ಧಾಕ್ಕೆ ಹೋಗುವದಾಗಿಯೂ ಹೇಳಿದರು.

ತಾ. ೨೪ರ ಪ್ರಾರ್ಥನೋತ್ತರ ಭಾಷಣದಲ್ಲಿ ಮಹಾತ್ಮರು ಮೈಸೂರಿಂದ ತಮಗೆ ಬಂದ ಒಂದು ತಂತಿಯನ್ನು ಉಲ್ಲೇಖಿಸಿ ಹೀಗೆ ಹೇಳಿದರು:— ಮೈಸೂರಲ್ಲಿ ಜಾತಿಯ ಗಲಭೆ ಎದ್ದಿದೆ. ನನ್ನ ಉಪವಾಸದ ಪರಿಣಾಮವು ಮೈಸೂರ ಮೇಲೆ ಆಗಿಲ್ಲ. ವಸ್ತುಸ್ಥಿತಿಯನ್ನು ಇದ್ದಕ್ಕಿದ್ದಂತೆ ಮೈಸೂರು ಸರಕಾರವು ಪ್ರಕಟಿಸಬೇಕೆಂದು ನನ್ನ ಸಲಹೆಯಿದೆ.

ಬಾಬು ಸುಭಾಸಚಂದ್ರ ಬೋಸರ ೫೨ನೇ ಜನ್ಮೋತ್ಸವ ನಿಮಿತ್ತ ದಿಲ್ಲಿಯಲ್ಲಿ ಸೇರಿದ್ದ ಸಭೆಯಲ್ಲಿ ಪಂ. ಜವಾಹರಲಾಲರು, ಬೋಸರ ಶಕ್ತಿಯನ್ನೂ, ತ್ಯಾಗವನ್ನೂ, ಸಾಹಸವನ್ನೂ, ತುಂಬ ಹೊಗಳಿದರು. ಆ ಮೇಲೆ ನಿರಾಶ್ರಿತರ ಸಮಸ್ಯೆ ಪ್ರಸ್ತಾಪಿಸಿ ಇವರ ಪುನರ್ನಿವೇಶನಕ್ಕೆ ದಿನಾಲು ೧೦ ಲಕ್ಷ ರೂಪಾಯಿ ವೆಚ್ಚ ಮಾಡಲಾಗುತ್ತಿದೆಯೆಂದು ಹೇಳಿದರಲ್ಲದೆ ೪೦ ಲಕ್ಷ ನಿರಾಶ್ರಿತರು ತಮ್ಮ ಬಂಧುಬಳಗ ಆಸ್ತಿಯಿಂದ ವಂಚಿತರಾಗಿ ಪಾಕಿಸ್ತಾನದಿಂದ ಇಲ್ಲಿಗೆ ಬಂದಿರುವರೆಂದು ಅರುಹಿದರು. ಇವರ ಯೋಗಕ್ಷೇಮದ ಹೊಣೆಯನ್ನು ಸರಕಾರ ವಹಿಸಿದೆ.

ಲಾರ್ಡ ಮೌಂಟಬ್ಯಾಟನ್ನರು ಇದೇ ಜೂನ ೩ನೇ ವಾರದಲ್ಲಿ ಹಿಂದುಸ್ಥಾನದ ಗವ್ಹರ್ನರ ಜನರಲ್ ಪದವನ್ನು ಬಿಟ್ಟುಕೊಡುವರೆಂದು ಸರಕಾರೀ ಭವನದಿಂದ ಅಧಿಕೃತವಾಗಿ ತಿಳಿಯುತ್ತದೆ. ಅವರನ್ನು ಜೂನ ನಂತರ ಇಟ್ಟುಕೊಳ್ಳುವ ಅಥವಾ ಅದಕ್ಕೆ ಮೊದಲು ಇಂಗ್ಲಂಡಕ್ಕೆ ತಿರುಗಿ ಕರೆಸಿಕೊಳ್ಳುವ ಪರಿಸ್ಥಿತಿ ಉಂಟಾಗಲಿಕ್ಕಿಲ್ಲವೆಂದು ನಂಬಲಾಗಿದೆ.

ಕಾಂಗ್ರೆಸ ಕಾರ್ಯಸಮಿತಿಯು ತಾ. ೨೮ಕ್ಕೆ ದಿಲ್ಲಿಯಲ್ಲಿ ಸೇರಿತ್ತು. ಮಹಾತ್ಮರೂ ಸಭೆಗೆ ಬಂದಿದ್ದರು. ಈ ಸಭೆಯಲ್ಲಿ ನಿರಾಶ್ರಿತರ ಪುನರ್ನಿವೇಶನದ ಬಗ್ಗೆ ಚರ್ಚೆಯಾಯಿತೆಂದು ತಿಳಿಯುತ್ತದೆ. ಹೊಸದಿಲ್ಲಿಯಲ್ಲಿ ಸ್ಥಳ ದೊರೆತುದಾದರೆ ಎ. ಆಯ್. ಸಿ. ಸಿ. ಕಚೇರಿಯನ್ನು ಅಲಹಾಬಾದದಿಂದ ಹೊಸದಿಲ್ಲಿಗೆ ಸ್ಥಳಾಂತರಿಸಬಹುದಾಗಿ ಡಾ. ರಾಜೇಂದ್ರ ಪ್ರಸಾದರು ಹೇಳಿದರು.

ಸರಕಾರದ ಅಂಚೆಯ ಖಾತೆಯಿಂದ ಒಂದು ಪ್ರಕಟನೆ ಹೊರಬಿದ್ದು ತಂತಿಯನ್ನು ಮುಟ್ಟಿಸಲು ತೀರ ತಡವಾದರೆ ಅಂಚೆ ಅಧಿಕಾರಿಗಳಿಂದ ತಪ್ಪು ಶಬ್ದ ಕಳಿಸಲ್ಪಟ್ಟಿದ್ದರೆ ಎಕ್ಸಪ್ರೆಸ್ ತಂತಿಗಳು ತಡವಾಗಿ ತಲ್ಪಿದರೆ ಇವೇ ಮೊದಲಾದ ಸಂದರ್ಭಗಳಲ್ಲಿ ತಂತಿಗೆ ತಗಲಿದ ಮೂಲ್ಯವನ್ನು ಮರಳಿ ಕೊಡಲಾಗುವದೆಂದು ಹೇಳಲಾಗಿದೆ.

ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲರು ತಾತ್ಪೂರ್ತಿಕ ಪರಿಹಾರ ಕಾರ್ಯಕ್ಕಾಗಿ ನಿಧಿ ಕೂಡಿಸುವ ಬಗ್ಗೆ ಪ್ರಕಟನೆ ಹೊರಡಿಸಿದ್ದಾರೆ. ಈ ನಿಧಿಗೆ ಮುಖ್ಯ ಮಂತ್ರಿಗಳ ಕೇಂದ್ರ ಪರಿಹಾರ ನಿಧಿ ಎಂದು ಹೆಸರಿಟ್ಟಿದ್ದು ಈ ನಿಧಿಯಿಂದ [illegible]ಸ್ತಾನದಿಂದ ಬಂದ ನಿರಾಶ್ರಿತರಿಗೆ ಪರಿಹಾರ ಕೊಡಲಾಗುವದು.

ಪಂಡಿತ ಜವಾಹರಲಾಲರು ಒಂದು ಪ್ರಕಟನೆ ಹೊರಡಿಸಿ ಕಾಶ್ಮೀರ ಯುದ್ಧಗಳ ಸಂಬಂಧದಲ್ಲಿ ತಾಳ್ಮೆ ವಹಿಸಬೇಕೆಂದು ಪತ್ರಿಕೆಗಳಿಗೆ ಬಿನ್ನವಿಸಿದ್ದಾರೆ. ಪರಿಸ್ಥಿತಿಯು ವಿಕೋಪಕ್ಕೆ ಹೋಗದಂತೆ ನೋಡಿಕೊಳ್ಳಲು ಭದ್ರತಾ ಮಂಡಳವು ಕೇಳಿದುದೇ ಇದಕ್ಕೆ ಕಾರಣವಾಗಿದೆ.

ಬಿಹಾರ

ಅಪಹೃತ ಸ್ತ್ರೀಯರನ್ನು ಪುನಃ ಸಮಾಜದಲ್ಲಿ ತೆಗೆದುಕೊಂಡು ಅವರನ್ನು ಗೌರವಯುಕ್ತವಾಗಿ ನಡೆಸಿಕೊಳ್ಳಬೇಕೆಂದು ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರು ಮೊದಲಾದವರು ವಿನಂತಿ ಮಾಡಿಕೊಂಡ ಪ್ರಕಾರ ಬಿಹಾರ ಶರೀಫದ ೧೨ಜನ ಅವಿವಾಹಿತ ತರುಣರು ಅವರನ್ನು ಮದುವೆ ಮಾಡಿಕೊಳ್ಳಲು ಮುಂದೆ ಬಂದಿದ್ದಾರೆ.

ಹಿಂದೀ ಸಂಸ್ಥಾನ

ಇಂದವರ ಸಂಸ್ಥಾನದಲ್ಲಿ ಸಂಪೂರ್ಣ ಹೊಣೆಗಾರ ಸರಕಾರವನ್ನು ಸ್ಥಾಪಿಸುವ ಬಗ್ಗೆ ಪ್ರಜಾಪರಿಷತ್ತಿನ ಮುಖಂಡರೊಡನೆ ಹೋಳಕರಮಹಾರಾಜರು ಮಾತುಕತೆ ನಡೆಸಿರುವದಾಗಿ ತಿಳಿಯುತ್ತದೆ.

ಕಾಠೇವಾಡದಲ್ಲಿ ಸಲಾಮೀ ಮತ್ತು ಬಿನ್ನಸಲಾಮೀ ಸಂಸ್ಥಾನಗಳ ನರೇಂದ್ರರು ಇಂದು ಸೌರಾಷ್ಟ್ರಪ್ರಾಂತ ರಚನೆಯ ಬಗ್ಗೆ ತಮ್ಮ ಸಂಸ್ಥಾನಗಳ ಒಕ್ಕೂಟ ರಚಿಸುವ ಸೇರ್ಪಡೆ ಪತ್ರಕ್ಕೆ ಅಂಕಿತ ಹಾಕಿದರು.

ಬಡೋದಾ ಸರಕಾರ ಹಾಗೂ ಪ್ರಜಾ ಮಂಡಳದವರಲ್ಲಿ ಮೂಲಭೂತ ವಿಷಯಗಳ ಬಗ್ಗೆ ಒಡಂಬಡಿಕೆ ಉಂಟಾಗಿರುವದೆಂದು ತಿಳಿಯಬರುತ್ತದೆ. ಪ್ರಜಾಮಂಡಳದ ಮುಂಖಂಡರಾದ ದರ್ಬಾರ ಗೋಪಾಲದಾಸರು ಮಹಾರಾಜರನ್ನು ಕಂಡು ಬಿಚ್ಚುಮನದಿಂದ ತಾ ೨೪ ಕ್ಕೆ ಚರ್ಚೆ ಮಾಡಿದರು. ದಿವಾಣರಾದ ಶ್ರೀ ಸುಧಾಳಕರರೊಡನೆಯೂ ಮಾತುಕತೆ ನಡೆದವು. ಸದ್ಯದ ಧಾರಾ ಸಭೆಯೇ ಘಟನೆ ಸಿದ್ಧ ಪಡಿಸುವ ಕಾರ್ಯ ಕೈಕೊಳ್ಳುವದೆಂದು ತಿಳಿದು ಬರುತ್ತದೆ.

ಬಾರಕಂಠಾ ಏಜನ್ಸಿಯ ಅಧಿಕಾರದಲ್ಲಿದ್ದ ವಾಸನಾ ಎಂಬ ಸಣ್ಣ ಸಂಸ್ಥಾನದ ಠಾಕೋರ ಸಾಹೇಬರು ದರಬಾರ ಗೋಪಾಲದಾಸರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ತಾವು ತಮ್ಮ ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸುವದಾಗಿ ನಿರ್ಧರಿಸಿದ್ದೇವೆಂದು ಜಾಹೀರ ಮಾಡಿದರು.

ದುರ್ವರ್ತನೆಗಾಗಿ ಅನೇಕ ಪೋಲೀಸ ಅಧಿಕಾರಿಗಳನ್ನು ಹೈದರಾಬಾದ ಸರಕಾರವು ಅಧಿಕಾರದಿಂದ ಕಿತ್ತೊಗೆದದ್ದಲ್ಲದೆ ಅವರನ್ನು ಬಂಧಿಸಿದೆಯೆಂದು ತಿಳಿದು ಬರುತ್ತದೆ.

ಮಹಾತ್ಮಾ ಗಾಂಧಿಯವರ ವಿಶೇಷ ಪ್ರತಿನಿಧಿಗಳಾಗಿ ಡಾ. ಸುಶೀಲಾ ನಯ್ಯರರು ತಾ ೨೮ ಕ್ಕೆ ವಿಮಾನದಿಂದ ಲಾಹೋರಕ್ಕೆ ಹೋಗಿ ಪಾಕಿಸ್ತಾನದ ನಿರಾಶ್ರಿತರ ಮಂತ್ರಿಯಾದ ಗಝನಫರ ಅಲ್ಲಿಖಾನರೊಡನೆ ಮುಸಲ್ಮಾನೇತರರ ಗಾಳೀ ಸಮಸ್ಯೆಯನ್ನು ಕುರಿತು ಚರ್ಚಿಸಿದರೆಂದು ತಿಳಿಯುತ್ತದೆ.

ಚಿಕ್ಕ ಕತೆ

ಅನುವಾದಕರು
ಕೆ. ಕೃಷ್ಣ ಕುಮಾರ

ಕ್ಯಾಮಿಲಿ

★........ ಮೂಲ ಲೇಖಕರು : **Alfred De Musset** ....★

ಕೆವೆಲಿಯರ ಮತ್ತು ಅರ್ಸಿಸಳ ಲಗ್ನವಾಗಿ ಹಲವುದಿನಗಳಾದವು. ಅವರ ಮೊದಲಿನ ದಿನಗಳು ಒಳ್ಳೇ ಸುಖಮಯವಾಗಿದ್ದವು. ಸುಖವೇ ಬೀಡು ಬಿಟ್ಟಿದ್ದ ಅವರ ಮನೆಯಲ್ಲಿ ಒಂದು ಕನ್ಯಾರತ್ನವೂ ಜನಿಸಿತು. ಆ ಕೂಸಿನ ಸುಂದರ ಮುಖವು ಆ ದಂಪತಿಗಳ ಆನಂದವನ್ನು ಇಮ್ಮಡಿಯಾಗಿ ಹೆಚ್ಚಿಸಿತು. ಆದರೆ ಆ ಸುಖಮಯ ಸಂಸಾರದಲ್ಲಿ ತನ್ನ ಕೈವಾಡವಿಲ್ಲದುದನ್ನು ವಿಧಿಯು ಸಹಿಸಲಿಲ್ಲವೊ ಏನೋ! ಮುಂದೆ ತಮ್ಮ ಕರುಳು ಕೊರೆಯಬಹುದಾದ ಒಂದು ಸಂಗತಿಯನ್ನು ಆ ತಂದೆ ತಾಯಿಗಳು ಅರಿತುಕೊಂಡರು. ಅವರ ಪುಟ್ಟ ಕ್ಯಾಮಿಲಿಯು ಕಿವುಡಿಯಾಗಿದ್ದಳು. ಅದರಂತೆ ಅವಳು ಮೂಕಿಯೆಂಬುದೂ ತಿಳಿದು ಬಂದಿತು!

ಅವಳ ತಾಯಿಯು ತನ್ನ ಮಗುವಿನ ಕುಂದುಗಳನ್ನು ಹೋಗಲಾಡಿಸಬೇಕೆಂದು ವಿಚಾರಿಸಿದಳು; ಆದರೆ ಅದು ಸಾಧ್ಯವಿರಲಿಲ್ಲ. ಆದರೆ ಕೆಲವು ಕರುಣಾಳುಗಳೇನೋ ಈ ಅನ್ಯಾಯವನ್ನು ತಡೆಗಟ್ಟಲು ಪ್ರಯತ್ನಿಸುತ್ತಿದ್ದುದು ನಿಜ. ೧೬ನೆಯ ಶತಮಾನದ ಓರ್ವ ಸ್ಪೇನದ ಪಾದ್ರಿಯು ಶಬ್ದಗಳಿಲ್ಲದೆ ಮೂಕರಿಗೆ ಮಾತನಾಡಲು ಬರುವಂತೆ ಒಂದು ಯುಕ್ತಿಯನ್ನು ಕಂಡುಹಿಡಿದಿದ್ದ. ಆದರೆ ಅದು ಹೆಚ್ಚು ಬಳಕೆಯಲ್ಲಿರಲಿಲ್ಲ. ಕಿವುಡರು, ಮೂಕರು, ಸಮಾಜದಿಂದ ಬಹಿಷ್ಕರಿಸಲ್ಪಟ್ಟವರಂತೆ ನೋಡಲ್ಪಡುತ್ತಿದ್ದರು.

ಕ್ಯಾಮಿಲಿಯ ತಂದೆತಾಯಿಗಳ ಆನಂದದ ನಡುವೆ ಒಂದು ಕಗ್ಗತ್ತಲೆ ಕವಿದಿತು. ಒಮ್ಮೊಮ್ಮೊಮ್ಮೆ ಅವರೀರ್ವರೂ ಹೆಚ್ಚು ಮಾತನಾಡದಾದರು. ಯಾವದೋ ಒಂದು ತರದ ಕಲ್ಪನೆಯಿಂದ ಅವರು ಕೊರಗಹತ್ತಿದರು. ಅವರ ಆಗಿನ ಸ್ಥಿತಿ ಅವರ ಘಟಸ್ಫೋಟಕ್ಕಿಂತಲೂ ಹೆಚ್ಚು ಕಟುತರವಾಗಿದ್ದಿತು- ಅವರ ಮರಣಕ್ಕಿಂತಲೂ ಹೆಚ್ಚು ಕಷ್ಟತರದ್ದಾಗಿದ್ದಿತು. ಅರ್ಸಿಸಳು, ತನ್ನೊಳಗೊಂದು ತೋರ್ಪಡಿಸಲಾಗದ ಸಿಟ್ಟನ್ನಿಟ್ಟುಕೊಂಡಿದ್ದರೂ ತನ್ನ ಮಗುವನ್ನು ಪ್ರೀತಿಸುತ್ತಿದ್ದಳು. ಕೆವೆಲಿಯರನ ಹೃದಯವೂ ತನ್ನ ಮಗುವನ್ನು ಪ್ರೀತಿಸಬೇಕೆಂದು ಹಾತೊರೆಯುತ್ತಿದ್ದಿತು ಆದರೆ ಅವಳ ಆ "ಮೂಕತೆ"ಯು ಅವನಿಗೆ ಹಿಂಜರಿಯು ಹಚ್ಚುತ್ತಿದ್ದಿತು.

ತಾಯಿಯು ಸನ್ನೆಗಳಿಂದಲೇ ತನ್ನ ಮಗುವಿನೊಡನೆ ಮಾತಾಡುತ್ತಿದ್ದಳು. ಮಗಳ ಮಾತುಗಳನ್ನು ತಾಯಿಯೊಬ್ಬಳೇ ಅರಿಯಲು ಸಮರ್ಥಳಿದ್ದಳು. ಆ ಮನೆಯಲ್ಲಿ ಕ್ಯಾಮಿಲಿಗೆ ಎಲ್ಲರೂ ಪರಕೀಯರೇ. ಸ್ವತಃ ಅವಳ ತಂದೆಯೇ ಅವಳಿಗೆ ಪರಕೀಯನಾಗಿದ್ದನು. ಅರ್ಸಿಸಳ ತಾಯಿಯು ಓರ್ವ ಹಳೆಯಕಾಲದ ಮುದುಕಿ ಆಗಾಗ್ಗೆ ಆಕೆಯೂ ತನ್ನ ಮಗಳು ಮತ್ತು ಅಳಿಯರ ದುರ್ದೈವಕ್ಕಾಗಿ ಕಳವಳಪಡುವಳು. "ಈ ಹುಡುಗಿ ಹುಟ್ಟದಿದ್ದರೇ ಒಂದು ರೀತಿಯಿಂದ ಚನ್ನಾಗಿತ್ತು" ಎಂದು ಉಗ್ಗಾರ ತೆಗೆಯುವಳು.

ಕಕ್ಕ ಜರಾಡನಿಗೆ ಕ್ಯಾಮಿಲಿಯ "ಮೂಕತೆಯು" ಅಷ್ಟೊಂದು ದುರ್ದೈವದ ಸಂಗತಿಯಾಗಿ ಕಾಣಲಿಲ್ಲ" ನನಗೊಬ್ಬ ಮಾತಿನ ಮಲ್ಲಿಯಾದ ಹೆಂಡತಿಯಿದ್ದಳು. ಅವಳಗಿಂತ ಕೆಟ್ಟದು ಬೇರಾವದೂ ಇಲ್ಲವೆಂದೇ ನಾನು ಬಗೆದಿದ್ದೆ ಈ ಚಿಕ್ಕ ಹೆಣ್ಣುಮಗಳು ಕೆಟ್ಟದನ್ನು ಆಡಲಾರಳು ಕೇಳಲಾರಳು. ಈಕೆಯು ಎಂದಿಗೂ ಜಗಳವಾಡಲಾರಳು. ತನ್ನ ಪತಿಯು ಕಿವಿಮ್ರದಲ್ಲಿ ಎಚ್ಚರ ಹೊಂದಲಾರಳು. ಆದರೆ ಎಲ್ಲವನ್ನೂ ಚನ್ನಾಗಿ ನೋಡುವಳು. ಏಕೆಂದರೆ ಕಿವುಡರ ಕಣ್ಣು ಬಲು ತೀಕ್ಷ್ಣ. ಈಕೆಯು ಸುಂದರಳೂ ಜಾಣಳೂಆಗುವಳು ಅಲ್ಲದೆ ಗದ್ದಲಮಾಡುವದಿಲ್ಲ! ನಾನು ಮಾತ್ರ ತರುಣನಿದ್ದರೆ ಇಂಥವಳನ್ನು ಲಗ್ನವಾಗಲು ಹಿಂದುಮುಂದೆ ನೋಡುತ್ತಿರಲಿಲ್ಲ. ನಿಮಗೆ ಇವಳಿಂದ ಎಂದಿಗೆ ಬೇಸರ ಬರುವದೋ ಅಂದು ಇವಳು ನನ್ನ ಮಗಳಾಗುವಳು" ಎಂದು ಅವ ನುಡಿಯುತ್ತಿದ್ದ.

ಒಂದು ಕ್ಷಣದವರೆಗೆ ಆ ದುರ್ದೈವೀ ದಂಪತಿಗಳ ದುಃಖವನ್ನು ಜರಾಡನ ಮಾತುಗಳು ಮರೆಸುತ್ತಿದ್ದವು. ಆದರೆ ಆ ಕಾರ್ಮೋಡವು ಮತ್ತೆ ಬೇಗನೆ ಅವರನ್ನು ಮುಸುಕಿಬಿಡುತ್ತಿತ್ತು.

× × ×

ದಿನಗಳು ಉರುಳಿದವು. ಕ್ಯಾಮಿಲಿಯು ದೊಡ್ಡವಳಾದಳು. ಆದರೆ ದುರ್ದೈವದಿಂದ ಕ್ಯಾಮಿಲಿಯರನ ವಿಚಾರಗಳು ಮಾತ್ರ ಬದಲು ಆಗಿದ್ದಿಲ್ಲ. ಅರ್ಸಿಸಳು ಮಾತ್ರ ತನ್ನ ಮಗಳೆಡೆಗೆ ಯಾವಾಗಲೂ ಲಕ್ಷ್ಯಪೂರೈಸುತ್ತಿದ್ದಳು. ಅವಳ ಪ್ರತಿಯೊಂದು ಚಿಕ್ಕ ಪುಟ್ಟ ಕಾರ್ಯವನ್ನೂ ಪರೀಕ್ಷಿಸುವಳು. ಕ್ಷಣಕ್ಷಣಕ್ಕೂ ಜೀವನದಲ್ಲಿ ತನ್ನ ಮಗಳಿಗೆ ಅಭಿರುಚಿಯುಂಟಾದ್ದನ್ನು ಕಂಡು ಕೊಳ್ಳುವಳು.

ತನ್ನ ಗೆಳತಿಯರು ಶಿಕ್ಷಕಿಯಿಂದ ಪಾಠಗಳನ್ನು ಹೇಳಿಸಿಕೊಳ್ಳುವಾಗ ತನಗೂ ಅವರಿಗೂ ಇದ್ದ ಭೇದವನ್ನು ಕ್ಯಾಮಿಲಿಯು ಅರಿಯತೊಡಗಿದಳು.

ಒಂದು ದಿನ ಕ್ಯಾಮಿಲಿಗೆ ಏನೋ ಕುತೂಹಲವುಂಟಾಗಿರಬೇಕು ತನ್ನ ಗೆಳತಿಯರ ಪುಸ್ತಕಗಳನ್ನು ತಾನೂ ಓದಲು ಪ್ರಯತ್ನಿಸಿದಳು. ಆದರೆ ಶಿಕ್ಷಕಿಯ ಬಯ್ಗುಳು ಕ್ಯಾಮಿಲಿಯ ಕಣ್ಣುಗಳಲ್ಲಿ ನೀರುತರಿಸಿದವು.

ಕ್ಯಾಮಿಲಿಯ ಇನ್ನೊಂದು ಕಠಿಣ ಪ್ರಸಂಗವೆಂದರೆ ಪ್ರಾರ್ಥನೆ ಮಾಡುವದು. ಆಕೆಯು ತನ್ನ ಗೆಳತಿಯರೊಡನೆ ಎದೆಗೆ ಕೈಹಚ್ಚಿಕೊಂಡು ತಾನೂ ಕೂಡ್ರುತ್ತಿದ್ದಳು ಆದರೆ ಹಾಗೇಕೆ ಮಾಡಬೇಕೆಂಬುದನ್ನು ಅವಳು ಅರಿಯಳು. ಇದೆಲ್ಲ ಕೆವೆಲಿಯರನಲ್ಲಿ ತನ್ನ ಮಗಳ ಬಗ್ಗೆ ಒಂದು ತೆರನಾದ ಜುಗುಪ್ಸೆಯುಂಟಾಗುವಂತೆ ಮಾಡುತ್ತಿದ್ದಿತು. ಆದರೆ ಅರ್ಸಿಸಳಿಗೆ ಬಂದು ತರದ ಆನಂದವೇ ಉಂಟಾಗುತ್ತಿದ್ದಿತು.

ಕ್ಯಾಮಿಲಿಗೆ ವಯಸ್ಸಾಗುತ್ತ ಬಂದಂತೆ ಆದಾವ ಪ್ರೇರಣೆಯಿಂದಲೋ, ದೇವನಲ್ಲಿ ಭಕ್ತಿಯುಂಟಾಯಿತು. " ನಾನು ಚಿಕ್ಕವನಿದ್ದಾಗ ದೇವನನ್ನು ಕಾಣುತ್ತಿರಲಿಲ್ಲ. ಆಕಾಶವನ್ನು ನೋಡುತ್ತಿದ್ದೆ" ಎಂದು ಓರ್ವ ಕಿವುಡ ಜಾಣನು ನುಡಿದಿದ್ದಾನೆ. ಚರ್ಚಿನಲ್ಲಿಯ ಮೇಳಗಾನ, ಪಿಯಾನಿನ ಸ್ವರ, ಪಾದ್ರಿಯ ಉಪದೇಶ ಇವಾವವೂ ಕ್ಯಾಮಿಲಿಗೆ ಕೇಳಿಸವು; ಆದರೆ ದೇವನೆಡೆಗೆ ದೃಷ್ಟಿಹಚ್ಚಿದ ಬಳಿಕ ಇವು ಏತಕ್ಕೆ?

× × ×

ಕ್ಯಾಮಿಲಿಯು ಅತೀವ ಚಲುವೆ ಬಿಳಿದಾದ ಮೈಬಣ್ಣ. ಹಾರಾಡುವ ನೀಲ್ಗೂದಲುಗಳು ಅಂದವಾದ ನಡಿಗೆ. ಇವೆಲ್ಲವೂ ಅವಳಿಗೆ ಹೆಚ್ಚಿನ ಕಾಂತಿಯನ್ನು ತಂದುಕೊಟ್ಟದ್ದವು. ತನ್ನ ತಾಯಿಯ ಇಚ್ಛೆಯನ್ನು ಕೂಡಲೇ ತಿಳಿದುಕೊಳ್ಳುವಳು. ಮತ್ತು ಅವಳ ಆಜ್ಞೆಯನ್ನು ಪಾಲಿಸುವದಾದರೂ ಅಷ್ಟೇ ಬೇಗ. ಇಂಥ ದೈವಹೀನಳಿಗೆ ಇಷ್ಟು ಸೌಂದರ್ಯವಿದ್ದುದು ಕ್ಯಾವೇಲಿಯರನ ದುಃಖವನ್ನು ಹೆಚ್ಚಿಸುವದಕ್ಕೇ ಕಾರಣವಾಯಿತು. ಒಮ್ಮೊಮ್ಮೆ ವಾತ್ಸಲ್ಯದಿಂದ ತನ್ನ ಮಗಳನ್ನು ಅಪ್ಪಿಕೊಂಡು "ನಾನು ಇನ್ನೂ ಅಷ್ಟು ಕಠೋರನಾಗಿಲ್ಲ!" ಎಂದು ನುಡಿಯುವನು.

ತೋಟದ ಕೊನೆಯಲ್ಲಿ ತುಸು ಹಳುವು ಬೆಳೆದಂತಾಗಿದ್ದಿತು, ಆ ಹಳುವಿನಲ್ಲಿಯ ಕಾಲುದಾರಿಯಲ್ಲಿ ಸುಳಿದಾಡುವದೆಂದರೆ ಕ್ಯಾವೆಲಿಯರನಿಗೆ ಒಂದು ಆನಂದ. ಅಂದು ಕ್ಯಾವೆಲಿಯರನು ಆನಂದದಿಂದ ಸಿಳ್ಳುಹಾಕುತ್ತ ಆ ಕಾಲುದಾರಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಸುಳಿದಾಡುತ್ತಲಿದ್ದ ತನ್ನ ಪತಿಯು ಅಂದು ಉಲ್ಲಾಸದಿಂದಿರುವದನ್ನು ಕಿಟಕಿಯಿಂದಲೇ ನೋಡಿ ಅರ್ಸಿಸಳು ಅರಿತುಕೊಂಡಳು. ಅರ್ಸಿಸಳಿಗೆ ತನ್ನ ಮಗಳನ್ನು ದೊಡ್ಡ ಮನೆಯಲ್ಲಿ ನಡೆಯಲಿದ್ದ ನೃತ್ಯಕ್ಕೆ ಕರೆದೊಯ್ಯಬೇಕೆಂದು ಇಚ್ಛೆ. ತನ್ನ ಮಗಳ ಸೌಂದರ್ಯವನ್ನು ಜನ ಏನೆಂದು ಕರೆಯುವರು ಎಂಬುದನ್ನು ತಿಳಿಯಲು ಅವಳಿಗೆ ಆಸೆ.

ಕ್ಯಾವೆಲಿಯರನನ್ನು ಸಮೀಪಿಸಿದೊಡನೆಯೇ ಅವನು ತನ್ನ ಹೆಂಡತಿಯನ್ನು ಒಳ್ಳೆಯ ಆನಂದದಿಂದ ಬರಮಾಡಿಕೊಂಡನು. ಅಲ್ಲಿಯೇ ಇದ್ದ ಆಸನದಲ್ಲಿ ಕುಳಿತುಕೊಂಡು ಇಬ್ಬರೂ ಕೆಲಹೊತ್ತು ಆನಂದದಿಂದ ಮಾತನಾಡಿದರು. ಕಡೆಗೆ ಅರ್ಸಿಸಳು ತನ್ನ ಮಗಳನ್ನು ಕರೆದುಕೊಂಡು ಇಬ್ಬರೂ ಜತೆಯಾಗಿ ನೃತ್ಯಕ್ಕೆ ಹೋಗುವ ಪ್ರಸ್ತಾಪವನ್ನೆತ್ತಿದಳು. ಕ್ಯಾವೆಲಿಯರನ ಮನಸ್ಸು ಹೇಗೆ ಹೇಗೋ ಆಯಿತು. ಒಳ್ಳೆಯ ಅನಿವಾರ್ಯದ ಕೆಲಸಕ್ಕಾಗಿ ತಾನು ಆದಿನ ಹಾಲಂಡಕ್ಕೆ ಹೋಗಬೇಕಾಗಿದೆಯಾಗಿ ತಿಳಿಸಿಬಿಟ್ಟ. ಆದರೆ ಅವನ ನಿಜವಾದ ಇಚ್ಛೆಯನ್ನು ಅರ್ಸಿಸಳು ಸಹಜವಾಗಿಯೇ ಅರಿತುಕೊಂಡಳು. ಅವಳೇನೂ ಅವನಿಗೆ ಅಡ್ಡಿ ಮಾಡಲಿಲ್ಲ. ಆದರೆ ಅವಳ ಹೃದಯಕ್ಕೆ ವಜ್ರಾಘಾತವಾದಂತಾಯ್ತು. ಮತ್ತೆ ಹೇಗೋ ಇಬ್ಬರೂ ಕೂಡಿ ಮನೆಯನ್ನು ಸೇರಿದರು.

ಅರ್ಸಿಸಳು ಆ ಮಧ್ಯಾಹ್ನವನ್ನು ಪ್ರಾರ್ಥನೆಯಲ್ಲಿ ಶಾಂತರೀತಿಯಿಂದ ಕಳೆದಳು. ಸುಮಾರು ೮ ಗಂಟೆಗೆ ಅವಳು ಗಂಟೆಬಾರಿಸಿದಳು. ಗಾಡಿಯನ್ನು ಸಿದ್ಧಪಡಿಸಿದ್ದಲ್ಲದೇ ತಾನು ನೃತ್ಯಕ್ಕೆ ಹೋಗುವದಾಗಿಯೂ ಕ್ಯಾವೆಲಿಯರನೂ ಬರಬೇಕೆಂದು ಇಚ್ಛಿಸಿದ್ದಾಗಿಯೂ ಕ್ಯಾವೆಲಿಯರನಿಗೆ ಹೇಳಿ ಕಳುಹಿದಳು.

ಕಸೂತಿಯ ಕೆಲಸಮಾಡಿದ ಒಂದು ಬಿಳಿಯ ಕಿನಕಾಬಿನ ಫ್ರಾಕು, ಬಿಳಿಯ ರೇಶಿಮೆಯ ಪುಟ್ಟ ಬೂಟುಗಳು, ಅಮೇರಿಕೆಯ ರತ್ನದ ಸರ, ಮತ್ತು ಒಂದು ಜಾಂಬಳೀ ಬಣ್ಣದ ಹ್ಯಾಟು, ಇವೇ ಕ್ಯಾಮಿಲಿಯ ವೇಷ ಭೂಷಣಗಳು. ತನ್ನ ತಾಯಿಯುಅಂದು ತನ್ನನ್ನು ಅಲಂಕರಿಸಿದಳೆಂದು ಕ್ಯಾಮಿಲಿಯು ಆನಂದದಿಂದ ಕುಣಿದಳು. 'ನೀನು ಚಲುವೆ...' ಎಂದು ಅರ್ಸಿಸಳು ಮೆಲ್ಲನೆ ನುಡಿಯುತ್ತಿರುವಂತೆಯೇ ಕ್ಯಾವೆಲಿಯರನೂ ಬಂದ.

ಕ್ಯಾಮಿಲಿಯು ಜನರಲ್ಲಿ ಬಂದುದು ಇದೇ ಮೊದಲ ಸಲ. ಎಲ್ಲರೂ ಇವಳ ಸೌಂದರ್ಯವನ್ನು ನೋಡಿ ಬೆರಗಾಗಿಬಿಟ್ಟಿದ್ದರು. ಕ್ಯಾವೆಲಿಯರನೆದುರು ಅವನ ಗೆಳೆಯರು ಅವನ ಮಗಳ ಸೌಂದರ್ಯವನ್ನು ಬಣ್ಣಿಸಹತ್ತಿದಾಗ ಅದು ಅವನಿಗೆ ಅಸಹ್ಯವಾಯಿತು. ತನ್ನನ್ನು ಸಮಾಧಾನಗೊಳಿಸಲು ಅವರು ಹಾಗೆ ಮಾತನಾಡುತ್ತಿರಬಹುದೆಂದು ಬಗೆದ. ಆದರೂ ತನ್ನ ಮಗಳ ಸೌಂದರ್ಯದ ಬಗ್ಗೆ ಅವನು ಅಭಿಮಾನಪಡದೆ ಇರಲಿಲ್ಲ. ಕ್ಯಾಮಿಲಿಗೆ ಅಂದು ಅದೆಷ್ಟೋ ಜನ ನಮಸ್ಕರಿಸಿದರು. ಮೂಕ ಜೀವನವನ್ನು ಆಚ್ಛಾದಿಸಿದ್ದ ಆ ಸುಂದರ ಚಲುವು ಎಲ್ಲರಿಗೂ ಒಂದು ಬಗೆಯ ಆಶ್ಚರ್ಯವನ್ನುಂಟು ಮಾಡಿದ್ದಿತು.

ಅಷ್ಟರಲ್ಲಿಯೇ ನೃತ್ಯವು ಶುರುವಾಯಿತು. ಓರ್ವ ಯುವಕ ಕ್ಯಾಮಿಲಿಯನ್ನು ಕುಣಿಯಲು ಕರೆದ. ಪಾಪ! ತಲೆಯಲ್ಲಾಡಿಸಿದಳು. ಟೊಪ್ಪಿಗೆ ಕೆಳಕ್ಕೆ ಬಿದ್ದಿತು. ಮತ್ತೆ ಅರ್ಸಿಸಳು ಅದನ್ನು ಅವಳ ತಲೆಯ ಮೇಲೆ ಇರಿಸಿದಳು. ಆಕೆ ತನ್ನ ಗಂಡನಿಗಾಗಿ ನೋಡಿದಳು. ಅವನ ಸುಳಿವೇ ಇದ್ದಿಲ್ಲ! ಅವನು ಕಾಲು ನಡಿಗೆಯಿಂದಲೇ ಮನೆ ಸೇರಿದ್ದ. ತನ್ನ ಹೆಂಡತಿಗೆ ಹೇಳದೆಯೇ ಅವನು ಹಾಲಂಡಿಗೆ ಪ್ರಯಾಣ ಬೆಳೆಸಿದ್ದ.

× × ×

ತನ್ನ ಪತಿಯು ಹೋದುದನ್ನು ಕಂಡು ಅರ್ಸಿಸಳೂ ಮನೆಗೆ ನಡೆದಳು. ಗಾಡಿಯಲ್ಲಿ ಕ್ಯಾಮಿಲಿಯು ತಾಯಿಯ ತೊಡೆಯಮೇಲೆ ತಲೆಯನ್ನಿರಿಸಿ ನಿದ್ರಿಸುತ್ತಿದ್ದಳು. ಕ್ಯಾವೆಲಿಯರನು ತಮ್ಮಿಬ್ಬರನ್ನೂ ಬಿಟ್ಟು ಒಬ್ಬನೇ ಹೋದುದಕ್ಕೆ ಸಂತಾಪಪಟ್ಟಳು. ಅದೇ ಹೊಸದಾಗಿತಯಾರಿಸುತ್ತಿದ್ದ ಹಾದಿಯ ಮೇಲೆ ಗಾಡಿಯು ಧಡಕಿಸುತ್ತ ನಡೆದಂತೆ ಅರ್ಸಿಸಳು ಮತ್ತೆ ತನ್ನ ಮಗಳ ಬಗ್ಗೆ ವಿಚಾರವನ್ನು ಮಾಡತೊಡಗಿದಳು.

ಕ್ಯಾವೆಲಿಯರನ ಮನೆಯನ್ನು ಮುಟ್ಟಬೇಕಾದರೆ ನಡುವೆ ಒಂದು ಚಿಕ್ಕ ಹಳ್ಳವನ್ನು ದಾಟಬೇಕಾಗುತ್ತಿತ್ತು. ಒಂದು ತಿಂಗಳಿಂದ ಮಳೆಯು ಹೊಡೆಯುತ್ತಲೇ ಇದ್ದುದರಿಂದ ಹಳ್ಳವು ತುಂಬಿ ಹರಿಯುತ್ತಿದ್ದಿತು. ಅಂಬಿಗನುಗಾಡಿಯನ್ನು ದೋಣಿಯಲ್ಲಿ ಒಯ್ಯಲು ಸಮ್ಮತಿಸಲಿಲ್ಲ ಮನುಷ್ಯರನ್ನೂ ಕುದುರೆಯನ್ನೂ ಮಾತ್ರ ಆ ದಡಕ್ಕೆ ಒಯ್ಯುವದಾಗಿ ತಿಳಿಸಿದ. ಅರ್ಸಿಸಳಿಗೆ ಇದರಿಂದ ಪ್ರಯೋಜನವಾಗುತ್ತಿರಲಿಲ್ಲ, ಅವಳು ತನ್ನ ಗಂಡನನ್ನು ತೀವ್ರವಾಗಿಯೇ ಹೋಗಿ ಕೂಡಿಕೊಳ್ಳಬೇಕಾಗಿತ್ತು. ಆಕೆಯು ತನ್ನ ಗಾಡಿಯನ್ನು ಜುಲುಮೆಯಿಂದಲೇ ದೋಣಿಯಲ್ಲಿ ಹೊಡೆಯಿಸಿದಳು.

ಪ್ರವಾಹದ ಮಧ್ಯಕ್ಕೆ ಬರುವಷ್ಟರಲ್ಲಿ ಪ್ರವಾಹದ ಒತ್ತಡವು ಹೆಚ್ಚಾಯಿತು. ದೋಣಿ ತನ್ನ ಹಾದಿಯನ್ನು ಬಿಟ್ಟು ಪ್ರವಾಹದ ಜತೆಯಲ್ಲಿಯೇ ಹೊರಟಿತು. ತುಸು ದೂರದಲ್ಲಿಯೇ ಒಂದು ಕಂದಕ ವಿದ್ದುದರಿಂದ ಎಲ್ಲರೂ ಪ್ರಾಣಾರ್ಪಣ ಮಾಡುವ ಪ್ರಸಂಗ ಬಂದೊದಗಿತು. ದೋಣಿಯು ಮೂರು ನಾಲ್ಕು ಸಲ ಹೊಯ್ದಾಡಿತು. ಮರುಕ್ಷಣದಲ್ಲಿಯೇ ಅರ್ಸಿಸಳು ತನ್ನಮಗಳೊಡನೆ ನೀರಿನಲ್ಲಿ ಬಿದ್ದಳು.

"ಪೀಯರ ಜಾರ್ಜಿಯಟ್, ನನ್ನ ಮಗಳನ್ನು ಉಳಿಸಬಲ್ಲೆಯಾ?" ಎಂದು ಅರ್ಸಿಸಳು ದೋಣಿಯನ್ನು ಹಿಡಿದುಕೊಂಡಿರುವಂತೆಯೇ ನಾವಿಗನಿಗೆ ಗಾಬರಿಯಿಂದ ಕೇಳಿದಳು. ಆ ಧೀರ ಈಸುಗಾರನಿಗೆ ಇದರಿಂದ ಅವಮಾನವಾಯ್ತೋ ಏನೊ! "ಒಬ್ಬಳನ್ನೇ ಏಕೆ? ಇಬ್ಬರನ್ನೂ ರಕ್ಷಿಸಬಲ್ಲೆ" ಎಂದು ಹೆಮ್ಮೆಯಿಂದ ನುಡಿದ ಪೀಯರ್ ಜಾರ್ಜಿಯಟ್.

ಅರ್ಸಿಸಳು ಜಾರ್ಜಿಯಟ್‌ನ ಕುತ್ತಿಗೆಯನ್ನು ಹಿಡಿದುಕೊಂಡಳು. ಜಾರ್ಜಿಯಟ್‌ನು ಒಂದು ಕೈಯಲ್ಲಿ ಕ್ಯಾಮಿಲಿಯನ್ನು ಹಿಡಿದುಕೊಂಡು ಈಸತೊಡಗಿದ. ಆದರೆ ಆ ನಾವಿಕನು ತನ್ನ ನಿಜವಾದ ಕಾರ್ಯಪಟುತ್ವ ಶಕ್ತಿಯನ್ನು ಅರಿತಂತಿರಲಿಲ್ಲ. ಅವನು ಆ ಪ್ರವಾಹದೊಡನೆ ತನ್ನ ಎರಡು ಒಜ್ಜೆಗಳನ್ನು ಹೊತ್ತುಕೊಂಡು ಕೆಲಹೊತ್ತು ಹೋರಾಡುವಷ್ಟರಲ್ಲಿಯೇ ನೀರಿನಲ್ಲಿ ಅವಿತಿಟ್ಟ ಗಿಡದ ಟೊಂಗೆಯೊಂದು ಜಾರ್ಜಿಯಟ್‌ನ ಹಣೆಗೆ ಬಡಿಯಿತು. ರಕ್ತ ಸೋರತೊಡಗಿತು. ಅವನ ಕಣ್ಣಿಗೆ ಚಕ್ರ ಬಂದಿತು.

"ನೀನು ನನ್ನ ಮಗಳನ್ನೊಬ್ಬಳನ್ನಾದರೂ ಬದುಕಿಸಬಲ್ಲೆಯಾ?" ಎಂದು ಕಾತರ ಧ್ವನಿಯಲ್ಲಿ ಅರ್ಸಿಸಳು ಕೇಳಿದಳು. ನಾವಿಕ 'ಹೂ' ಗುಟ್ಟಿದ.

ಆ ತಾಯಿ ಅವನ ಕುತ್ತಿಗೆಯಿಂದ ಕೈಯನ್ನು ತಿಂತೆಗೆದುಕೊಂಡಳು. ಮೆಲ್ಲಮೆಲ್ಲನೆ ಅವಳ ಇಡೀ ದೇಹವು ಆ ಪ್ರವಾಹದಲ್ಲಿ ಕಾಣದಾಯ್ತು. ಕ್ಯಾಮಿಲಿ ಏನೋ ದಡ ಮುಟ್ಟಿದಳು.

× × ×

ಕ್ಯಾಮಿಲಿಗೆ ಅವಳ ಪ್ರೀತಿಯ ಕಕ್ಕನು ದೊರೆತ. ಕ್ಯಾಮಿಲಿಯು ಕೂದಲುಗಳನ್ನು ಹರಿದುಕೊಳ್ಳುತ್ತ ಗೋಡೆಗಳನ್ನು ಬಡಿಯುತ್ತ, ಒಂದು ಅರ್ಥ ಸ್ವರದಿಂದ ಕೂಗುತ್ತ ಹುಚ್ಚಿಯಂತೆ ಮಾಡತೊಡಗಿದಳು. ಪಾಪ ಮೂಕಪ್ರಾಣಿ! ಅವಳ ತನ್ನ ದುಃಖವನ್ನು ಹೇಗೆ ಹೇಳಬೇಕು!

ಒಂದು ವರ್ಷವು ಸಂದು ಹೋಯ್ತು. ಕ್ಯಾಮಿಲಿಯು ಕ್ರಮೇಣ ತನ್ನ ದುಃಖವನ್ನು ಮರೆಯತೊಡಗಿದಳು. ಕಕ್ಕ ಜರಾಡನು ಇಂದು ಅವಳನ್ನು ಓಪೇರಾಕ್ಕೆ ಕರೆದೊಯ್ಯಬೇಕೆಂದು ಮನಸ್ಸು ಮಾಡಿದ. ಹೊಸ ಅರಿವೆಗಳನ್ನು ಕೊಂಡುದಾಯ್ತು. ಆ ವೇಷದಲ್ಲಿ ಕ್ಯಾಮಿಲಿಯು ತನ್ನನ್ನು ಕನ್ನಡಿಯಲ್ಲಿ ನೋಡಿಕೊಂಡು, ತನ್ನ ರೂಪವನ್ನು ನೋಡಿ ತಾನೇ ಬೆರಗಾದಳು. ಒಂದು ಮುಗುಳುನಗೆಯನ್ನು ಬೀರಿದಳು.

× × ×

ತುಸು ಹೊತ್ತಿನಲ್ಲಿಯೇ ಅಲ್ಲಿಯ ಕಾರ್ಯಕ್ರಮಗಳು ಕ್ಯಾಮಿಲಿಗೆ ಬೇಸರವನ್ನುಂಟು ಮಾಡಿದವು. ಅಲ್ಲಿಯ ವಾದ್ಯಗಳು, ಪಾತ್ರಗಳು, ನೋಡಲು ನೆರೆದ ಜನರು ಇವೆಲ್ಲ "ನಾವು ಮಾತನಾಡಬಲ್ಲೆವು; ನೀನು ಮಾತನಾಡಲಾರಿ. ನಾವು ಕೇಳುವೆವು; ನೀನು ಕೇಳಲಾರಿ. ನಾವು ನಕ್ಕು ಕೆಲೆದು ಆನಂದಬಡುವೆವು. ಆದರೆ ನೀನು ನಗುವದನ್ನೂ, ಆನಂದ ಪಡುವದನ್ನೂ ನೋಡುವೆ ಮಾತ್ರ." ಎಂದು ಸಾರಿ ಸಾರಿ ಹೇಳುವಂತೆ ಅವಗಳಿಗೆ ಭಾಸವಾಯ್ತು.

ಅವಗಳಿಗೆ ಮತ್ತೆ ತನ್ನ ತಾಯಿ, ತನ್ನ ಮನೆ ಇವೆಲ್ಲವುಗಳ ನೆನಪಾಗತೊಡಗಿತು. ಅವಳ ಕಣ್ಣುಗಳಿಂದ ನೀರು ಹರಿಯತೊಡಗಿತು. ಕಕ್ಕ ಜರಾಡನು ಕಾರಣವನ್ನು ಕೇಳಲು ಮನೆಗೆ ಹೋಗೋಣ ಎಂದು ಸನ್ನೆ ಮಾಡಿ ಎದ್ದು 'ಬಾಕ್ಸ್'ನ ಬಾಗಿಲನ್ನು ತೆರೆದಳು.

ಇದೇ ಸಮಯಕ್ಕೆ ಒಂದುವಿಚಿತ್ರತೆಯು ಅವಳ ಮನ ಸೆಳೆಯಿತು. ಓರ್ವ ಶ್ರೀಮಂತ ತರುಣ ಒಂದು ಚಿಕ್ಕ ಪಾಟಿಯಲ್ಲಿ ಬಿಳಿಯ ಪೆನ್ಸಿಲಿನಿಂದ ಏನೇನೋ ಬರೆಯುತ್ತಿದ್ದ. ಬರೆದು ತನ್ನ ಹತ್ತರದಲ್ಲಿಯ ಓರ್ವ ಮುದಕನಿಗೆ ತೋರಿಸುತ್ತಿದ್ದ. ಅವನು ಇವನ ವಿಚಾರಗಳನ್ನು ತಟ್ಟನೇ ತಿಳಿದುಕೊಂಡು ಇದೇ ರೀತಿಯಾಗಿ ಉತ್ತರಕೊಡುತ್ತಿದ್ದ.

ಕ್ಯಾಮಿಲಿಯು ಇದನ್ನೆಲ್ಲ ಏಕಾಗ್ರಚಿತ್ತದಿಂದ ನೋಡಿದಳು. ತನ್ನ ಹೋಗುವ ವಿಚಾರವನು ಬಿಟ್ಟು ಮತ್ತೆ ತನ್ನ ಸ್ಥಳದಲ್ಲಿ ಬಂದು ಕುಳಿತುಕೊಂಡಳು. ಇದುವರೆಗೂ ಆ ತರುಣನು ತನ್ನ ತುಟಿಯನ್ನು ಮಿಸುಕಿರಲಿಲ್ಲ. ಅವನೂ ತನ್ನಂತೆಯೇ ಇರಬಹುದೇ? ಎಂದು ಕ್ಯಾಮಿಲಿಯು ಪ್ರಶ್ನೆ ಹಾಕಿಕೊಂಡಳು. ಅವನ ಶಬ್ದಗಳಿಲ್ಲದ ಮಾತನ್ನು ತಾನೂ ಕಲಿಯಬಹುದೇ ಎಂದು ವಿಚಾರಿಸಿದಳು. ನೆಟ್ಟ ನೋಟದಿಂದ ಅವನೆಡೆಗೆಯೇ ನೋಡತೊಡಗಿದಳು. ಅವನೂ ಇವಳೆಡೆಗೆ ನೋಡಿದ. ಅವರಿಬ್ಬರ ನೋಟ ಮೊದಲ ಬಾರಿ ಒಂದುಗೂಡಿದವು.

× × ×

ಕ್ಯಾಮಿಲಿಯು ಮನೆಗೆ ಬಂದಳು, ಅವಳ ತಲೆಯಲ್ಲಿ ಒಂದೇ ಒಂದು ವಿಚಾರ ಸುಳಿಯುತ್ತಲಿತು. ತನಗೆ ಬರೆಯುವ ಸಾಮಗ್ರಿಗಳು ಬೇಕಾಗಿವೆ ಎಂಬುದನ್ನು ತನ್ನ ಕಕ್ಕನಿಗೆ ತಿಳಿವಂತೆ ಮಾಡಿದಳು. ಅವಳ ಕಕ್ಕ ಊಟಿಕೆ ಸಿದ್ಧತೆ ನಡೆಸಿದ್ದರೂ, ಬೇಗ ಓಡಿ ಹೋಗಿ ಒಂದು ಚಿಕ್ಕ ಕರಿಹಲಗೆಯನ್ನೂ ಒಂದು ತುಂಡು ಖಡುವನ್ನೂ ತೆಗೆದುಕೊಂಡು ಬಂದ.

ಕ್ಯಾಮಿಲಿಯು ಆ ಹಲಗೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಅದರ ಮೇಲೆ ಏನಾದರೂ ಬರೆಯಬೇಕೆಂದು ಜರಾಡನಿಗೆ ಸನ್ನೆ ಮಾಡಿದಳು. ಜರಾಡನು ದೊಡ್ಡ ಅಕ್ಷರಗಳಿಂದ 'ಕ್ಯಾಮಿಲಿ' ಎಂದು ಅದರ ಮೇಲೆ ಬರೆದ.

ಕ್ಯಾಮಿಲಿಯು ಬೇಗನೆ ಊಟಮುಗಿಸಿಕೊಂಡು ತನ್ನ ಕೋಣೆಯಲ್ಲಿ ಹೋಗಿ ಕುಳಿತಳು. ದಕ್ಷತೆಯಿಂದ ಆ ಅಕ್ಷರಗಳನ್ನು ತೀಡ ಹೊಡಗಿದಳು. ಅವಳ ಜೀವನಕ್ಕೆ ಹೊಸ ಅರ್ಥ ಬಂದಿತು. ಅವಳ ಮುದುಕು ಮೊಗದಲ್ಲಿ ಒಂದು ಹೊಸ

—ಮುಂದಿನ ಪುಟಕ್ಕೆ

ಭವಿಷ್ಯ

ಜ್ಯೋತಿಷಿ— [illegible] ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಫೆಬ್ರುವರಿ ೨ ರಿಂದ ೮ರ ವರೆಗೆ

ಮೇಷ

ಪ್ರಕೃತಿಯಲ್ಲಿ ಕಾಯಿಲೆಗಿಂತ ಕೆಲವೊಂದು [illegible] ಕೆಲಸದ ಕಾಳಜಿಯಿಂದ ತ್ರಾಸ. ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳ ಮೇಲೆ ಮೇಲಿಂದ ಮೇಲೆ ಮತ್ತು ಏನೂ ಕಾರಣವಿಲ್ಲದೆ ಸಿಟ್ಟಿಗೇಳುತ್ತ ಹೋಗುವ ಸರತಿ. ಅವರಲ್ಲಿಯೇ [illegible] ಭವತಿ. ಮನೆಯಲ್ಲಿಯು [illegible] ಒಬ್ಬರಿಗೆ ಅಪಘಾತದ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಷ್ಟಕ್ಕಷ್ಟೇ. ಮಿತ್ರರಲ್ಲಿ ಉತ್ಕರ್ಷ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರವೇ ಅನುಕೂಲ. ಮತ್ತು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಒಡಂಬಡಿಕೆಯು ಸಂಭವ. ಅಶ್ವಿನಿಯು ೪ ನೆ ಮತ್ತು ಭರಣಿಯು ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨, ೬, ೭ ಅನುಕೂಲ.

ವೃಷಭ

ಪ್ರಕೃತಿ ಸ್ತ್ರೀ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಪ್ರಾರಂಭಿಸಿದ ಕೆಲಸದ ಪೂರ್ತತೆಯ ಬಗ್ಗೆ ಬಹಳ ಚಿಂತೆ ಪಡುವದು. ಉದ್ಯೋಗದಲ್ಲಿ ಬಹಳ ಪ್ರವಾಸದಿಂದ ಪ್ರಗತಿ ಪ್ರತಿಷ್ಠೆಯು ಹೆಚ್ಚಳ ಆದರೆ ಹಿತಶತ್ರುಗಳಿಂದ ಅದರಲ್ಲಿ ವಿಘ್ನ ತರುವ ಪ್ರಯತ್ನವು ಜೋರಿನಿಂದ ನಡೆಯುವದು. ದ್ರವ್ಯ ಲಾಭ ತುಂಬ ಅಪೇಕ್ಷಿತ ಕೆಲವು ಸ್ತ್ರೀಯರ ಮತ್ತು [illegible] ಕಲಾವಂತರ ಭೆಟ್ಟಿ ಸಹವಾಸ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮನಸ್ಸಿನಂತೆ ಚಟುವಟಿಕೆಗಳು ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯು ೪ನೆ ಮತ್ತು ರೋಹಿಣಿಯು ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ ೩-೪-೫-೮ ಅನುಕೂಲ

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖಕ್ಕಿಂತ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಅನುಕೂಲ. ಸ್ಥಾವರ ಮತ್ತು ಜಂಗಮ ಸಂಗ್ರಹದಲ್ಲಿ ಸಲ್ಪ ಹೆಚ್ಚಳ ಉದ್ಯೋಗದಲ್ಲಿ ಎಲ್ಲ ಬಗೆಯಿಂದ ಸುಸ್ಥಿತಿ ಆದರೆ ಆ ಬಗ್ಗೆ ಸ್ವತಃ ಆತ್ಮವಿಶ್ವಾಸ ಕಡಿಮೆ. ಮಕ್ಕಳಲ್ಲಿ ಒಬ್ಬರ ಅಭಿನವ ಉತ್ಕರ್ಷ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಒಳ್ಳೆ ಸುರಸು ಆದರೆ ಯಶಾಪಯಶಸ್ಸು ಅನಿಶ್ಚಿತ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಮೃಗಶಿರದ ೪ನೆ ಮತ್ತು ಆರಿದ್ರದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ ತಾ. ೨—೬—೭ ಅನುಕೂಲ.

ಕರ್ಕ

ಸ್ವತಃದ ಮತ್ತು ಹೆಂಡತಿಯ ಪ್ರಕೃತಿಯು ಮೇಲಿಂದ ಮೇಲೆ ಕೆಡುತ್ತ ಹೋಗುವದು. ಪರಸ್ತ್ರೀಯ ಧ್ಯಾಸ. ಪ್ರಾಪಂಚಿಕ ಸುಖ ತೀರ ಕಡಿಮೆ ಆದರೆ ಮಕ್ಕಳ ದೈವ ಪ್ರಗತಿಪಥದಲ್ಲಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಅನಪೇಕ್ಷಿತ ಲಾಭದ ಸಂಭವ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನತೆ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೩, ೪, ೫ ಅನುಕೂಲ.

ಸಿಂಹ

ಪ್ರಕೃತಿಯಲ್ಲಿ ಬಹಳ ಸುಧಾರಣೆ. ಹೆಂಡತಿಯದೂ ಅದೇ ತಕರಾರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ ಜೋರಿನದು ಪ್ರತಿಷ್ಠೆ ಉತ್ತಮ ಮತ್ತು ಲಾಭ ತುಂಬ ಆದರೆ ಬಗೆಬಗೆಯ ವೆಚ್ಚದಿಂದ ಹತ್ತಿಗೆ ಬರುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸ್ಥಿತಿ ಸಮಾನ ಪ್ರವಾಸಾದಿ ಕೆಲಸ ಬಹಳ ಹಿತದ್ದು ಮಘಾದ ೪ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ ತಾ. ೨-೬-೭ ಅನುಕೂಲ.

ಕನ್ಯಾ

ಪ್ರಕೃತಿ ಸಾಧಾರಣ ಕೆಟ್ಟಂತೆ ಎನಿಸುವದು. ಸ್ತ್ರೀ ಸುಖ ಅನುಕೂಲ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಸಾಮಾನ್ಯವಾಗಿ ಅನುಕೂಲ. ಆದರೆ ವೆಚ್ಚ ಬಹಳ ದೊಡ್ಡ ಪ್ರಮಾಣದಲ್ಲಿ ಆಗುವದರಿಂದ ಬಹಳ ಎಳೆದಾಟ. ಕ್ಷುಲ್ಲಕ ಮಾತಿಗಾಗಿ ಕೈಗೆ-ಕೈ ಹತ್ತುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಬಹಳ ತೊಂದರೆಯದು. ಉತ್ತರಾದ ೪ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨, ೩, ೪, ೫ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ಅನುಕೂಲ. ಪ್ರತಿಯೊಂದು ಮಾತಿನಲ್ಲಿ ಎಲ್ಲರ ಏಕಮತ. ಸ್ಥಾವರದಲ್ಲಿ ಹೆಚ್ಚಳ. ಆದರೆ ಬಂಧುವರ್ಗದವರಿಂದ ಕೆಲವೊಂದು ಅಡ್ಡಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭ ಕಡಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಪ್ರವಾಸಾದಿ ಕೆಲಸ ಬಹಳ ಹಿತದ್ದು. ಚಿತ್ರಾದ ೪ನೇ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨, ೩, ೪, ೫ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ಎಲ್ಲ ಬಗೆಯಿಂದ ಉತ್ಸಾಹ ವರ್ಧಕ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ. ಮತ್ತು ಲಾಭ ತುಂಬ. ಆಸ್ತಿಯಲ್ಲಿ ಹೆಚ್ಚಳ. ಪ್ರಿಯ ಆಪ್ತರ ಭೆಟ್ಟಿ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಕೆಲ ಮಂಗಲ ಇಲ್ಲವೆ ಧರ್ಮಕೃತ್ಯಗಳು ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ೪ನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೪, ೫, ೬, ೭ ಅನುಕೂಲ.

ಧನು

ಪ್ರಕೃತಿಗೆ ಅಲ್ಪಸ್ವಲ್ಪ ಕ್ಲೇಶ. ಸ್ತ್ರೀ ಸುಖಕ್ಕಿಂತ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತವೆ. ಕೈಕೆಳಗಿನ ಜನರಿಂದ ಕಟ್ಟಾ ವಿರುದ್ಧ ವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಸಾಮಾನ್ಯ. ಆದರೆ ಲಾಭ ಉತ್ತಮ. ಧಾರ್ಮಿಕ ಕೆಲಸದಲ್ಲಿ ಬಹಳ ವೆಚ್ಚ ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ವಿಜಯ. ಆದರೆ ಶತ್ರುಗಳ ಜೋರು ಹೆಚ್ಚೀ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಮೂಲಾದ ೪ನೇ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨, ೬, ೭ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಮಾನ್ಯ ಆದರೂ ಪ್ರಿಯಜನರ ಸಹವಾಸ ಸಿಕ್ಕುವದರಿಂದ ಮನಸ್ಸು ಆನಂದಮಯ. ಪ್ರೀತಿಯ ಕೆಲ ವಸ್ತುಗಳ ಲಾಭ ಉದ್ಯೋಗದಲ್ಲಿ ಪ್ರಗತಿ ಸಾಧಾರಣ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಕೆಲ ವಿಷಯಗಳಲ್ಲಿ ಯಾರಾರನ್ನೊ ಪ್ರತಿಷ್ಠೆಯಲ್ಲಿರಿಸ ಬೇಕಾದ ಪ್ರಸಂಗ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ಆದರೆ ಶತ್ರುಗಳು ಪ್ರತ್ಯಕ್ಷ ಪ್ರತಿಕಾರಮಾಡುವ ಪ್ರಯತ್ನ ಒಂದೇಸಮನೆ ನಡೆಯುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಷಾಢಾದ ೪ನೇ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೩, ೩, ೪, ೫ ಅನುಕೂಲ.

ಕುಂಭ

ನಿಮ್ಮ ಮತ್ತು ಹೆಂಡತಿಯ ಆರೋಗ್ಯದ ಬಗ್ಗೆ ಬಹಳ ತಕರಾರು. ಅಲ್ಲದೆ ಕ್ಷುಲ್ಲಕ ಮಾತಾಗಿಯೇ ನಿಮ್ಮ ನಿಮ್ಮಲ್ಲಿ ಮೇಲಿಂದ ಮೇಲೆ ತಿಕ್ಕಾಟದ ಪ್ರಸಂಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೂ ಅಷ್ಟೇ ಹಾನಿ ಪ್ರವಾಸಾದಿ ಕೆಲಸ ಸುಖಕರ. ಧನಿಷ್ಠಾದ ೪ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨, ೩, ೪, ೫ ಅನುಕೂಲ.

ಮೀನ

ಪ್ರಕೃತಿ ಉತ್ತಮ. ಹೆಂಡತಿಯಗೂಡ ಮೇಲಿಂದಮೇಲೆ ಮತಭೇದ ಮತ್ತು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಮೆಯೆ. ಅದ್ದರಿಂದ ಬಹಳ ದ್ವೇಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ತುಂಬ. ಆದರೆ ನಿಮ್ಮ ಹೆಸರಿನ ಇಲ್ಲವೆ ಮನೆತನದ ದೊಡ್ಡಸ್ತಾನ ಇಟ್ಟುಕೊಳ್ಳುವದಕ್ಕಾಗಿ ಕೆಲವೊಂದು ಲೌಕಿಕದ ಕೆಲಸದಲ್ಲಿ ಬಹಳ ವೆಚ್ಚ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವತಃ ನೀವು ಹಿಮ್ಮೆಡಬೇಕಾಗುವದು. ಆದರೆ ಶತ್ರುವಿಗೂ ಪರಭಾರೆ ಬಹಳ ಹಾನಿಯಾಗುವದು. ಮಿತ್ರತ್ವದಲ್ಲಿ ವಿರೋಧ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾಭಾದ್ರಪದದ ೪ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೩, ೪, ೫, ೮ ಅನುಕೂಲ.

ಈ ವಾರದ ಕತೆ

(೧೫ನೇಯ ಪುಟದಿಂದ)

ಬರೆಯಲು ಕಲಿಯಲಿಕ್ಕೆ ಬಹಳ ಹೊತ್ತು ಹಿಡಿಯಲಿಲ್ಲ. ಸಂಜೆಯೊಳಗಾಗಿ ಅತಿ ಸುಂದರವಾಗಿ ಆ ಅಕ್ಷರಗಳನ್ನು ಬರೆಯಲು ಕಲಿತಳು. ಆದರೆ ಅದರ ಅರ್ಥವನ್ನು ಅವಳಿಗಾರು ಹೇಳಬೇಕು?

ಜುಲೈ ತಿಂಗಳು ಅಮಾವಾಸ್ಯೆ ಕಳೆದು ನಾಲ್ಕಾರು ದಿನಗಳಾಗಿದ್ದವು. ಕ್ಯಾಮಿಲಿಯು ನಕ್ಷತ್ರಗಳಿಂದ ಹೆಣೆಯಲ್ಪಟ್ಟ ಆಕಾಶವನ್ನು ನೋಡುತ್ತ ನಿಂತಿದ್ದಳು. ಆದರೆ ಅಂಗಳದಲ್ಲಿ ಬಿಟ್ಟಿದ್ದ ಗಾಡಿಗಳ ಬಳಿ ಏನೋ ಆಕೆಗೆ ಕಂಡಿತು. ಅದೊಂದು ಮನುಷ್ಯಾಕೃತಿ! ಕ್ಯಾಮಿಲಿಯು ಬೆಚ್ಚಿಬಿದ್ದಳು. ಅದೇನೆಂಬುದನ್ನು ಚೆನ್ನಾಗಿ ನೋಡುವದಕ್ಕಾಗಿ ಕಂದೀಲನ್ನು ಹಿಡಿದಳು. ಆ ಆಕೃತಿಯು ಮೊಣಕಾಲೂರಿ ಕುಳಿತು ಕ್ಯಾಮಿಲಿಗೆ ಗೌರವವನ್ನು ತೋರಿತು. ಕ್ಯಾಮಿಲಿಯು ಆ ಆಕೃತಿಯನ್ನು ದಿಟ್ಟಿಸುತ್ತಿದ್ದಂತೆಯೇ ಅದು ಗಾಡಿಯನ್ನು ಹತ್ತಿ ಟಣ್ಣನೆ ಕ್ಯಾಮಿಲಿಯ ಕೋಣೆಯಲ್ಲಿ ಖಿಡಕಿಯ ಮುಖಾಂತರಜಿಗಿಯಿತು. ಯಾರವನು? ಪಿಯರ್ರಿ! ಒಪೇರಾದಲ್ಲಿಕ್ಯಾಮಿಲಿಯು ಕಂಡದ್ದು ಇವನನ್ನೇ

ಪಿಯರ್ರಿಯು ಕರಿ ಹಲಿಗೆಯ ಮೇಲೆ 'ಕ್ಯಾಮಿಲಿ' ಎಂದು ಬರೆದುದನ್ನು ನೋಡಿದ. ಅದರ ಜೊತೆಗೆ 'ಪಿಯರ್ರಿ' ಎಂದು ತನ್ನ ಹೆಸರನ್ನು ಬರೆದ.

ಇದೇ ಕ್ಷಣಕ್ಕೆ "ಯಾರಲ್ಲಿ?" ಎಂದು ಒಂದು ಧ್ವನಿ ಗುಡುಗಿತು ಜರಾಡನು ಆ ಕೋಣೆಯಲ್ಲಿ ಪ್ರವೇಶಿಸಿದ. ಪಿಯರ್ರಿಯನ್ನು ಅನೇಕ ವಿಧವಾಗಿ ಬಯ್ದ. ಆದರೆ ಪಿಯರ್ರಿಯು ಅದೆಲ್ಲವನ್ನು ಸುಮ್ಮನೆ ಕೇಳಿಕೊಂಡು ಕರಿಯ ಹಲಗೆಯ ಮೇಲೆ ನಾನು ಕ್ಯಾಮಿಲಿಯನ್ನು ಪ್ರೀತಿಸುತ್ತೇನೆ. ಅವಳನ್ನು ಲಗ್ನವಾಗಲಿಚ್ಛಿಸುವೆ. ನೀವು ಅವಳನ್ನು ನನಗೆ ಕೊಡುವಿರಾ? ನಾನು 'ಮಾಕ್ವಿಸ್ [illegible] ದಿ ಮಾಬ್ರೆ, ಎಂದು ಬರೆದ.

ಅವರ ಲಗ್ನಕ್ಕೆ ಕ್ಯಾಮಿಲಿಯರನ ಸಮ್ಮತಿಯೂ ದೊರೆಯಿತು. ಅದರಂತೆ ಲಗ್ನವೂ ಆಗಿಹೋಯಿತು. ಮರುವರ್ಷ ಕ್ಯಾಮಿಲಿಯು ದನಿಗೆ ತನ್ನ ಮಗಳಿಂದ ಪತ್ರವು ಬಂದಿತು, ಪ್ರಿಯ ತಂದೆಯೇ ಕಡೆಗೊಮ್ಮೆ ನಾನು ಮಾತನಾಡಲು ಕಲಿತೆ ಬಾಯಿಂದಲ್ಲ ಕೈಯಿಂದ!

ಅವಳು ಅವನಿಗೆ ತನ್ನ ಮಗುವಿನ ಸೌಂದರ್ಯವನ್ನೂ ಕುರಿತು ಬರೆದಿದ್ದಳು. ಮಗಳನ್ನೂ ಮೊಮ್ಮಗನನ್ನೂ ಕಾಣಲು ಬರಬೇಕಾಗಿ ಪ್ರಾರ್ಥಿಸಿಗೊಂಡಿದ್ದಳು.

ತಕ್ಷ ಜರಾಡನೂ ಕ್ಯಾಮಿಲಿಯರನೂ ಕೂಡಿ ಅದೆಷ್ಟೋ ವಾಗ್ವಾದಗಳ ನಂತರ ಕ್ಯಾಮಿಲಿಯನ್ನು ಕಾಣಲು ಹೊರಟರು. ಇವರು ಅವರ ಮನೆ ಮುಟ್ಟಿದಾಗಪಿಯರ್ರಿಯೂ ಕ್ಯಾಮಿಲಿಯೂ ಕೋಟದಲ್ಲಿ ತಮ್ಮ ಪುಟ್ಟ ಮಗುವಿನೊಂದಿಗೆ ಪುಸ್ತಕಗಳ ರಾಶಿಯೊಂದರ ಮಧ್ಯದಲ್ಲಿ ಕುಳಿತಿದ್ದರು.

ಕ್ಯಾಮಿಲಿಯರನು ಆ ಮಗುವನ್ನು ಕಂಡು "ಮತ್ತೊಂದು ಮೂಕ?" ಎಂದು [illegible] ನುಡಿದ.

"ಅಜ್ಜಾಗೆ ನಮಸ್ಕಾರ" ಎಂದು ಆ ಮಗು ತೊದಲು ನುಡಿಯಿತು.

"ನಿನಗೆ ಈಗ ಮನವರಿಕೆಯಾಯಿತಲ್ಲವೇ ದೇವ ದೊಡ್ಡವನೆಂಬದು?" ಎಂದು ಜರಾಡನು ಕ್ಯಾಮಿಲಿಯರನಿಗೆ ನುಡಿದ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದವಾಗಿ ಹ. ರಾ. ಮೊಹರೆಯವರಿಂದ ಮುದ್ರಿತ ಪ್ರಕಟಿತವಾಯಿತು.